

ರಂಜನೆ ಬೋಧನೆ ಪ್ರಚೋದನೆ

# ಲಂಕೇಶ್

15 ಮಾರ್ಚ್ 2017 ಪುಟ 20 ರೂ. 15/-




## ಯುದ್ಧಭೂಮಿ ಆಗಿರುವ ವಿವಿಗಳು




## ಗೋವಿಂದರಾಜು ಡೈರಿ

# ಸುಳ್ಳೆಷ್ಟು ಜೊಳ್ಳೆಷ್ಟು?

## ಬಿವಿಪಿಯ ಕ್ಯಾಂಪಸ್ ರಗಳೆ
## ೊಗಳೆ ಸಾರ್ ಬೊಗಳೆ




**ಸೊರಬ:** ಯಡ್ಡಿ ಚೆಡ್ಡಿ ಕಿಸೆ ಸೇರಿದ ಕುಬಂ!!



**ದಾವಣಗೆರೆ** ಬಿಜೆಪಿಯಲ್ಲಿ ಕಾಲೆಳೆಯುವ **ಕಬಡ್ಡಿ!**







**ಮೈಸೂರು:** ಸಿದ್ದು ದುಶ್ಮನ್‌ಗಳ ಸಾಲಿಗೆ ಎಚ್.ವಿಶ್ವನಾಥ್!

**ಮಂಡ್ಯ:** ಕಸಾಪ ಹೆಸರಲ್ಲಿ ರವಿಯ ಎತ್ತುವಳಿ **ಸಮ್ಮೇಳನ**






# ಈ ಪ್ರಶ್ನೆ ಎಲ್ಲಾ ತಂದೆತಾಯಂದಿರಿಗೆ ಮುರುಳಿಯ ಸಾವು ನ್ಯಾಯವೇ?





**ಸು**ಮಾರು 14 ವರ್ಷದವನಾದ ಮುರುಳಿ ಸತ್ತು ಹೋಗಿದ್ದಾನೆ. ಎಳೆಯ ಪ್ರಾಯದ ಸಾವು ಯಾರದ್ದಾದರೂ, ಎಲ್ಲರಿಗೂ ನೋವು ತರುತ್ತದೆ. ಈ ವಾರದಲ್ಲಿ ಇಂತಹ ಸಣ್ಣ ಪ್ರಾಯದ ಮೂರು ಸಾವುಗಳ ಸುದ್ದಿ ಕೇಳಿ ಮನಸ್ಸು ಕದಡಿದೆ. ಉಳಿದವು, ರಸ್ತೆ ಅಪಘಾತದಲ್ಲಾದ ಸಾವುಗಳು. ಈ 'ಅಸಹಜ' ಸಾವುಗಳು ಆಗಬಾರದಿತ್ತು, ಮುರುಳಿಯದ್ದು ಇನ್ನೂ ಅಸಹಜವಾದದ್ದು. ಆತ 'ನೇಣು ಬಿಗಿದ ಸ್ಥಿತಿ'ಯಲ್ಲಿ ಗುಡಿಬಂಡೆ ತಾಲೂಕು ಕೇಂದ್ರದ ಆಚೆಗಿನ ಒಂದು ಅಷ್ಟು ಜನವಸತಿಯಿಲ್ಲದ ಪ್ರದೇಶದಲ್ಲಿ ಪತ್ತೆಯಾದ. ಪೊಲೀಸರು ಆತನದ್ದು ಆತ್ಮಹತ್ಯೆ ಎಂದು ಬಹುತೇಕ ತೀರ್ಮಾನಿಸಿಯಾಗಿದೆ. ಇದೊಂದು ಕೊಲೆಯಿರಬಹುದು ಎಂದು ಹಲವರು ಶಂಕಿಸುತ್ತಿದ್ದಾರೆ. ಏಕೆಂದರೆ, ಶವ ಪತ್ತೆಯಾದ ಜಾಗ, ಪತ್ತೆಯಾದ ರೀತಿ, ನೇಣು ಬಿಗಿಯಲಾಗಿದ್ದ ಮರ ಇರುವ ರೀತಿ ಎಲ್ಲವೂ ಅನುಮಾನ ಹುಟ್ಟಿಸುವಂತಿದೆ. ಘಟನೆಯ ಕುರಿತು ಅಕ್ಕಪಕ್ಕದವರು ಹೇಳುತ್ತಿರುವ ಸಂಗತಿಗಳೂ, ಅನುಮಾನವನ್ನು ದಟ್ಟವಾಗಿಸುತ್ತಿವೆ. ಮುರುಳಿಯ ತಂದೆ-ತಾಯಿಗಳು ಆತ ನೇಣು ಹಾಕಿಕೊಂಡಿರಲಿಕ್ಕಿಲ್ಲ ಎಂದು ಖಚಿತವಾಗಿ ಹೇಳುತ್ತಿದ್ದಾರೆ. ಹೀಗಾಗಿ ಅದರ ಕುರಿತು ತನಿಖೆ ಸರಿಯಾದ ರೀತಿಯಲ್ಲಿ ನಡೆಯಬೇಕು. ಅನುಮಾನದ ಸಣ್ಣ ಎಳೆಯನ್ನೂ ಬಿಡದೇ ತನಿಖೆ ನಡೆಯುವ ಅಗತ್ಯವಿದೆ.

ಒಂದುವೇಳೆ ಈ ಸಾವು ಕೊಲೆಯಲ್ಲ ಎಂದು ಇಟ್ಟುಕೊಳ್ಳೋಣ. ಆಗ ಈ ಸಾವು ನಮ್ಮಲ್ಲಿ ಉಂಟುಮಾಡುವ ನೋವು, ವಿಷಾದ ಮತ್ತು ಆಕ್ರೋಶ ಕಡಿಮೆಯಾಗುತ್ತದೆಯೇ? ಮುರುಳಿಯ ಸಾವಿನ ಕುರಿತು ಗೊತ್ತಿರದಿದ್ದವರಿಗೆ ಅದರ ಹಿನ್ನೆಲೆಯನ್ನು ಮೊದಲು ತಿಳಿಸಿ, ನಂತರ ಈ ಪ್ರಶ್ನೆ ಕೇಳಬೇಕೆನಿಸುತ್ತದೆ.

ಮುರುಳಿ ಗುಡಿಬಂಡೆಯ ಹೈಸ್ಕೂಲಿನಲ್ಲಿ 9ನೇ ತರಗತಿ ಓದುತ್ತಿದ್ದ ಹುಡುಗ. ಆತ ಅದೇ ಶಾಲೆಯಲ್ಲಿ 8ನನೇ ತರಗತಿಯಲ್ಲಿ ಓದುತ್ತಿದ್ದ ಒಬ್ಬ ಹುಡುಗಿಯನ್ನು ಚುಡಾಯಿಸಿದ್ದ ಎಂದು ಹೇಳಲಾಗುತ್ತಿದೆ. ಈ ಕಾರಣಕ್ಕಾಗಿ ಅದೇ ಶಾಲೆಯ 10ನೇ ತರಗತಿಯಲ್ಲಿ ಓದುತ್ತಿದ್ದ ಆ ಹುಡುಗಿಯ ಅಣ್ಣ ಮತ್ತು ಇನ್ನು ಕೆಲವರು ಸೇರಿ ಜನವರಿ 18-19ರಂದು ಮುರುಳಿಗೆ ಹೊಡೆದಿದ್ದಾರೆ. ಈ ರೀತಿ ಹೊಡೆದಿರುವುದು ಶಾಲೆಯಲ್ಲಿ ಎಲ್ಲರಿಗೂ ಗೊತ್ತಾಗಿದೆ, ಶಿಕ್ಷಕರಿಗೂ ಸೇರಿ. ಮನೆಯವರಿಗೆ ಮಾತ್ರ ಗೊತ್ತಿಲ್ಲ, 19ನೇ ತಾರೀಖಿನಂದು ಹುಡುಗ ಕಾಣುತ್ತಿಲ್ಲ; ಆತನನ್ನು ನೀವೂ ಹುಡುಕಿ, ನಾವೂ ಹುಡುಕುತ್ತೇವೆ ಎಂದು ಶಿಕ್ಷಕರು ಹೇಳಿದ್ದಾರೆ. ಹುಡುಕಿದಾಗ ಅನುಮಾನಾಸ್ಪದವಾಗಿ ನೇಣು ಬಿಗಿದ ಸ್ಥಿತಿಯಲ್ಲಿ ಮುರುಳಿ ಶವವಾಗಿ ಸಿಕ್ಕಿದ್ದಾನೆ. ಹುಡುಗಿ ಮೇಲ್ಜಾತಿಯವಳು, ಹುಡುಗ ದಲಿತ ಸಮುದಾಯಕ್ಕೆ ಸೇರಿದವನು.

ಆತನ ಪೋಷಕರು ಬಯಸೀ-ಬಯಸೀ ಪಡೆದ ಗಂಡು ಮಗ ಅವನು. ಅವರ ಆಸೆಗಳನ್ನು ಪೂರೈಸುವ, ಕುಟುಂಬವನ್ನು ಸಾಕುವ, ದಿಕ್ಕಾಗುವ ವಿಚಾರ ಪಕ್ಕಕ್ಕಿರಲಿ. 14 ವರ್ಷದ ಒಬ್ಬ ಬಾಲಕ ಸತ್ತಿದ್ದಾನೆ. ಈ ಹುಡುಗನ ಅಪರಾಧ ಹುಡುಗಿಯೊಬ್ಬಳನ್ನು ಚುಡಾಯಿಸಿದ ಎಂಬುದು. ಚುಡಾಯಿಸಿದನೋ, ವಿಶೇಷವಾಗಿ ಮಾತಾಡಿಸಿದನೋ ಅಥವಾ ಗುಬ್ಬಿಯ ಅಭಿಷೇಕ್‌ಗೆ ಆದ ರೀತಿ ಹುಡುಗಿಯೇ ಮಾತಾಡಿಸಿದಳೋ ಗೊತ್ತಿಲ್ಲ, ಹೊಡೆದ ಇತರ ಬಾಲಕರು ಆಯಾ ಕುಟುಂಬದವರ ಬದುಕಿನಲ್ಲಿ ಮುಖ್ಯವಾಗಿದ್ದಾರೋ, ಹಾಗೆಯೇ ಮುರುಳಿಯೂ ತಾನೇ? ಶಾಲೆ-ಕಾಲೇಜಿನಲ್ಲಿ ಹುಡುಗ-ಹುಡುಗಿಯರ ನಡುವೆ ಒಳ್ಳೆಯ ಸಂಬಂಧವಿರ ಬೇಕು. ಹುಡುಗಿಯರನ್ನು ಚುಡಾಯಿಸುವುದು, ಜ್ಯೂನಿಯರ್‌ಗಳನ್ನು ರ್‍ಯಾಗಿಂಗ್ ಮಾಡುವುದೆಲ್ಲವೂ 'ತನಗಿಂತ ಕೆಳಗಿನವರ ಜೊತೆ ಹೇಗೆ ಬೇಕಾದರೂ ನಡೆದುಕೊಳ್ಳಬಹುದು' ಎಂಬ ಮನುಸ್ಮೃತಿಯ ಭಾಗವೇ. ಹುಡುಗಿಯರು ನೂರೆಂಟು ಬಗೆಯ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ.




ಆದರೆ, ಇಲ್ಲಿ ಮುರುಳಿ ನಿಜಕ್ಕೂ ಏನು ಮಾಡಿದ್ದ ಎಂಬುದು ಗೊತ್ತಿಲ್ಲ, ಆರೋಪ ಇರುವುದೇ ಚುಡಾಯಿಸಿದ ಎಂದು. ಒಂದು ವೇಳೆ ತಪ್ಪು ನಡೆದಿದ್ದರೆ, ಬುದ್ಧಿ ಮಾತು ಅಥವಾ ಕೌನ್ಸೆಲಿಂಗ್ ಅಥವ ಹೆಚ್ಚೆಂದರೆ ಬೈಯ್ಯಬೇಕಾದಷ್ಟು ಸಂಗತಿ ಸಾವಿನಲ್ಲಿ ಕೊನೆಯಾಗಿದೆ. ಇಲ್ಲಿ, ಮುರುಳಿಯದ್ದು ಕೊಲೆ ಅಲ್ಲ ಎಂತಲೂ ಇಟ್ಟುಕೊಳ್ಳೋಣ. ಆಗಲೂ ಆ ಹುಡುಗರು ಅವನಿಗೆ ಹೊಡೆದರು, ಗಾಯ ಆಗುವ ಹಾಗೆ ಹೊಡೆದರು, ಹುಡುಗನು ತಾನೇ ಓಡಿಹೋಗಿ ಆತ್ಮಹತ್ಯೆ ಮಾಡಿಕೊಳ್ಳುವಷ್ಟು ಭಯ ಹುಟ್ಟಿಸಿದರು ಎಂದೇ ಆಗುತ್ತದೆ. ಇದು ಕಡಿಮೆ ಕ್ರೌರ್ಯವೇ? ರೋಹಿತ್ ವೇಮುಲನಂತಹ ಒಬ್ಬ ಪ್ರತಿಭಾವಂತ ಹೋರಾಟಗಾರ ವಿದ್ಯಾರ್ಥಿಯ ಒಟ್ಟು ಕಥೆ ಕೇಳಿ, 'ಆತ ಆತ್ಮಹತ್ಯೆ ಮಾಡಿಕೊಳ್ಳಬಾರದಿತ್ತು' ಎಂದು ಹೇಳುವುದು ಸುಲಭ. ಹೈದರಾಬಾದ್ ವಿಶ್ವವಿದ್ಯಾಲಯದಲ್ಲಿ ಸ್ಕಾಲರ್‌ಶಿಪ್ ಸಹ ಕಡಿತವಾಗಿ, ಹಾಸ್ಟೆಲ್‌ನಿಂದಲೂ ಹೊರದಬ್ಬಿಸಿಕೊಂಡು ಬೀದಿಯಲ್ಲಿ ಮಲಗಿದ್ದ ಆತನನ್ನು ಪ್ರತಿನಿತ್ಯ ಕಾಡುತ್ತಿರಬಹುದಾದ ಸಂಗತಿಗಳೇನು? ಆ ಸಾವು ಹೇಗೆ ಒಂದು ಸಾಂಸ್ಥಿಕ ಸಾವೋ, ಅದೇರೀತಿ ಮುರುಳಿಯದ್ದು ಒಂದು ವೇಳೆ ಆತ್ಮಹತ್ಯೆಯೇ ಆಗಿದ್ದರೂ, ವ್ಯವಸ್ಥೆ ಮಾಡಿದ ಕೊಲೆಯೇ ತಾನೇ?

ಈ ಮಾತುಗಳನ್ನು ಬರೆಯಲು ಕಾರಣವಿದೆ. ಇಂಡಿಯನ್ ಪೀನಲ್ ಕೋಡ್ ಪ್ರಕಾರ ಕೊಲೆಯನ್ನು ಮಾತ್ರ ಶಿಕ್ಷಿಸುತ್ತದೆ. ಆತ್ಮಹತ್ಯೆ ಮಾಡಿಕೊಳ್ಳುವಂತೆ ಮಾಡಿದರು ಎಂಬುದು ಅಂತಹ ದೊಡ್ಡ ಕೇಸಲ್ಲ, ತಪ್ಪಿತಸ್ಥರಿಗೆ ಸರಿಯಾಗಿ ಶಿಕ್ಷೆಯಾಗಬೇಕೆಂದರೆ, ಅದು ಕೊಲೆಯೆಂದಾಗ ಬೇಕು. ಈ ಕೇಸಿನಲ್ಲಿ ಅದೂ ಆಗುತ್ತದಾ ಗೊತ್ತಿಲ್ಲ. ಏಕೆಂದರೆ, ಮುರುಳಿಗೆ ಹೊಡೆದವರೂ ಸಹ ಅಪ್ರಾಪ್ತರು. ಇಂತಹ ಒಂದು ಸಂದರ್ಭದಲ್ಲಿ ಸಹಜವಾಗಿಯೇ ಹಲವು ಪ್ರಶ್ನೆಗಳು ಏಳುತ್ತವೆ. ಈ ರೀತಿಯ 'ಜಾತಿ ವ್ಯತ್ಯಾಸ' ಇರದಿದ್ದರೆ, ಸದರಿ ಪ್ರಕರಣ ಸಾವಿನಲ್ಲಿ ಕೊನೆಯಾಗುತ್ತಿತ್ತೇ? ಸಾವು ಆಗಿರುವುದು ಗೊತ್ತಾದನಂತರ ಆ ಭಾಗದಲ್ಲಿ ಇದ್ದುದರಲ್ಲಿ ಬಲಾಢ್ಯರಾದ ಹುಡುಗಿಯ ಮನೆಯವರು ಕೇಸಿನ ದಾರಿ ತಪ್ಪಿಸಿರಲಾರರು ಎಂದು ಹೇಳಲಾದೀತೇ? 'ಸತ್ತೋನು ಸತ್ತು ಹೋದ, ಇರುವವರಿಗ್ಯಾಕೆ ತೊಂದರೆ, ನಮ್ಮ ಲಾಭ ನಾವು ನೋಡೋಣ' ಎಂದು ಪೊಲೀಸ್ ಇಲಾಖೆ ಯೋಚಿಸಿರುವುದಿಲ್ಲ ಎಂಬ ಖಾತ್ರಿ ಇಟ್ಟುಕೊಳ್ಳುವುದು ಸಾಧ್ಯವೇ? ಈ ಎಲ್ಲಾ ಪ್ರಶ್ನೆಗಳಿಗೆ ಸ್ಪಷ್ಟ ಉತ್ತರ ಸಿಕ್ಕಿಲ್ಲ; ಬಹುಶಃ ಸಿಗದೇ ಹೋಗಬಹುದು.

ಇವೆಲ್ಲದರಾಚೆ, ಇದು ಕೊಲೆ ಆಗಿರದೆಯೂ ಇರಬಹುದು. ನನ್ನ ಮಟ್ಟಿಗೆ ಆಗಲೂ ಇದು, ಈ ವ್ಯವಸ್ಥೆಯಲ್ಲಿ ಅಸಮಾನತೆಯ ಕಾರಣದಿಂದ, ಅಮಾನವೀಯತೆಯ ಕಾರಣದಿಂದ ಆಗಿರುವ ಕೊಲೆಯೇ ಆಗಿರುತ್ತದೆ. ಇದಕ್ಕೇನು ಪರಿಹಾರ? ಇಂತಹದೊಂದು ಪ್ರಶ್ನೆಯನ್ನು, ಮುರುಳಿಗೆ ಹೊಡೆದ ಹುಡುಗರ ಮನೆಯವರಿಗೂ ಕೇಳಬೇಕಿದೆ. ಘಟನೆಯಲ್ಲಿ ಮತ್ತು ಆ ನಂತರದ ಬೆಳವಣಿಗೆಗಳಲ್ಲಿ ಭಾಗಿಯಾಗಿರುವ ಆ ಕುಟುಂಬದ ತಂದೆ-ತಾಯಂದಿರು ಈ ಪ್ರಶ್ನೆಗೆ ಉತ್ತರ ಕೊಡಬೇಕು. ಇಂತಹದೊಂದು ಸಾವು ನ್ಯಾಯವೇ? ನಮ್ಮ ಮನೆ ಹುಡುಗ ಅಥವಾ ಹುಡುಗಿ ಇಂತಹ ವಯಸ್ಸಿನಲ್ಲಿ ತಾವೇ ನೇಣು ಹಾಕಿಕೊಂಡು ಸತ್ತರೂ, ನಮಗೇನನ್ನಿಸುತ್ತದೆ?

ಹುಡುಗನ ಪೋಷಕರು ಬಲಾಢ್ಯರಾಗಿಲ್ಲದೇ ಇರುವುದರಿಂದ, ಕೇಸು ಬೆಳಕಿಗೆ ಬರುವುದೇ ತಡವಾಗಿದೆ. ಅಷ್ಟರಲ್ಲಿ ಎಫ್‌ಐಆರ್, ಪೋಸ್ಟ್‌ಮಾರ್ಟಂ, ಶವಸಂಸ್ಕಾರ ಎಲ್ಲವೂ ಆಗಿಹೋಗಿದೆ. ಮುರುಳಿಗೆ ಹೊಡೆದಿದ್ದವರು, ಜಾಮೀನೂ ಸಹ ಪಡೆದುಕೊಂಡಾಗಿದೆ. ಹಾಗಾಗಿ, ನಿಜಕ್ಕೂ ನಡೆದದ್ದರ ಕುರಿತು ಪರಿಣಾಮಕಾರಿ ತನಿಖೆಗೆ ಒತ್ತಾಯಿಸಿ ಹೋರಾಟ ನಡೆಸುವುದು ಅನಿವಾರ್ಯವಾಗಿದೆ. ದಲಿತ ದಮನಿತರ ಸ್ವಾಭಿಮಾನಿ ಹೋರಾಟ ಸಮಿತಿ ಮತ್ತು




ದಸಂಸಗಳು ಗುಡಿಬಂಡೆಯಲ್ಲಿ ಮಾರ್ಚ್ 6ರಂದು ಪ್ರತಿಭಟನೆ ಹಮ್ಮಿಕೊಂಡಿವೆ. ಅಲ್ಲಿ ಇದಕ್ಕಾಗಿ ಒತ್ತಾಯಿಸಲಾಗುತ್ತದೆ.

ಆದರೆ, ನಾಗರಿಕ ಸಮಾಜವನ್ನು ಇನ್ನೂ ಕೆಲವು ಪ್ರಶ್ನೆಗಳನ್ನು ಕೇಳಲೇಬೇಕಿದೆ. ಕಾನೂನಿನ ಪರಿಧಿಯಲ್ಲಿ ಕೊಲೆ ಎಂದು ಕರೆಸಿಕೊಳ್ಳಲ್ಪಡದ, ಆದರೆ ಇತರರ ಬದುಕನ್ನು ಕಿತ್ತುಕೊಳ್ಳುವ ಹಲವು ವಿಧಾನಗಳಿವೆ. 1980ರ ನಂತರದ ವರ್ಷಗಳಲ್ಲಿ ಗುಂಡೂರಾವ್ ಅವರ ಸರ್ಕಾ... ರೈತರನ್ನು ಗುಂಡು ಹಾರಿಸಿ ಕೊಲ್ಲಲಾಯಿತು. ... ಜನರು ಸತ್ತರು. 1995ರ ನಂತರ ಒಂದೂ... ಹಾರಿಸಲಿಲ್ಲ, ಲಕ್ಷಾಂತರ ಜನ ರೈತರು ಸತ್ತಿದ್ದಾರೆ... ಕಾಲದಿಂದ ಇಲ್ಲಿಯವರೆಗೆ ಒಂದಲ್ಲ ಒಂದು... ಹೇಳಿ ಹಲವಾರು ಲಕ್ಷ ಆದಿವಾಸಿಗಳನ್ನು ... ಲಾಯಿತು. ಈಗ ಹೊಸ ವಿಧಾನವನ್ನು ಕಂಡುಕೊ... ಅದೇ ಸ್ವಯಂಪ್ರೇರಿತ ಒಕ್ಕಲೆಬ್ಬಿಸಿಕೊಳ್ಳುವಿಕೆ (Vol... displacement).

ಪ್ರಜಾಪ್ರಭುತ್ವದಲ್ಲಿ ನೆಲದ ಕಾನೂನು ಎಂಬು... ಸ್ಥಾಪಿತವಾದ ಮೇಲೆ ದಮನಿತ ಸಮುದಾ... ಕಾನೂನು ನೆರವಿಗೆ ಬರುತ್ತದೆ. ಅವರ ಮೇಲಿನ ದ... ವಿರುದ್ಧ ಅವರು ಕಾನೂನು ಬಳಸಲು ಆರಂ... ಕಾನೂನಿನ ಕುಣಿಕೆಯನ್ನು ತಮ್ಮ ಸುತ್ತ ಹೆಣೆ... ಆ ಸಮುದಾಯಗಳು ಶಕ್ತವಾಗಿವೆ ಎನ್ನಿಸಿದರೆ... ನಡೆಸುವವರು ಪರ್ಯಾಯ ದಾರಿ... ಹುಡುಕಿಕೊಳ್ಳುತ್ತಾರೆ.


ಹಾಗಾಗಿ ಪರ್ಯಾಯ ದಾರಿಗಳನ್ನು ಹುಡು... ಮಾನವೀಯ ಸಮಾಜ ಬಯಸುವವರೂ ಮಾ... ಅದರಲ್ಲಿ ಮೂರು ಸಂಗತಿಗಳು ಇರುತ್ತವೆನಿಸುತ್ತದೆ... ಇರುವ ಕಾನೂನನ್ನು ನಿಷ್ಪಕ್ಷಪಾತವಾಗಿ ಬಳಸ... ಹೇರುವುದು. ಎರಡು, ಬೇರೆ ರೀತಿಯಲ್ಲಿ ತಿ... ಕೊಡಲು ದಮನಿತ ಸಮುದಾಯಗಳೂ ಶಕ್ತವಾ... ಮೂರು, ಇಂತಹ ಸಾವು ನ್ಯಾಯವೇ ಎಂದು... ತಂದೆ-ತಾಯಂದಿರ ಆತ್ಮಗಳನ್ನು ಮುಟ್ಟಿ ಕೇ... ಚಲೋ ಪಯಣ ಗುಡಿಬಂಡೆಯ ಕಡೆಗೆ ಹೊರಟ... ಇವೆಲ್ಲದರ ಕುರಿತೂ ನಾವು ಚಿಂತಿಸಬೇಕಿದೆ.

■

## ಹೆರುವ ಒಡಲಿನ ಬೇಗುದಿ...

ಇಂಡಿಯಾ ಪಾಕಿಸ್ತಾನಗಳ
ನಡುವೆ ಎಷ್ಟಾಯಿತು ಯುದ್ಧ?
ರಕ್ತ ಕಣ್ಣೀರ ಹೊರತು
ಮತ್ತೇನೂ ಹರಿಯದ ಯುದ್ಧದಲಿ
ನೆಹರು ಸತ್ತರೆ?
ಅವರ ಸಂಬಂಧಿಕರು ಸತ್ತರೆ?

ಬಾವುಟ ಭಕ್ತಿಯ ಕಾರ್ಗಿಲ್ ಕದನದಲಿ
ಸೈನಿಕರು ಎಷ್ಟು ದಿನ ಕಾದಾಡಿದರು?
ಶವಪೆಟ್ಟಿಗೆಯ ಹೊರತು
ಮತ್ತೇನೂ ದೊರಕದ ಯುದ್ಧದಲಿ
ಊರೂರಿಗೆ ತಲುಪಿದ




ಶವಪೆಟ್ಟಿಗೆಯಲ್ಲಿ ವಾಜಪೇಯಿ ಹೆಣವಿತ್ತೆ?
ಅವರ ಸಂಬಂಧಿಕರು ಹುತಾತ್ಮರಾದರೆ?

ಮುಷರಫ್ ಹೆಣವಾಗಿ ಹೋದನೆ?
ನವಾಜ್ ಶರೀಫ್ ಜೀವ ತೆತ್ತನೆ?

ಜೀವ ಉಳಿಸುವ ಸರ್ಜಿಕಲ್ ಪದಕ್ಕೆ
ದಾಳಿಯ ಮೊನಚು ಅಂಟಿಸಿದ ಪ್ರಭುಗಳೆ
ಎಷ್ಟು ತಾಸು ಮದ್ದುಗುಂಡುಗಳು
ಸಿಡಿದವು
ರಣಹದ್ದಿನ ಕೇಕೆಯ ಹೊರತು
ಮತ್ತೇನೂ ಕೇಳಿಸದ ಯುದ್ಧದಲಿ
ಮೋದಿಯ ಕೊನೆಯುಸಿರು ಹೋಯಿತೆ?
ಅವರ ಹೆಂಡತಿಯ ಹೃದಯ
ಸ್ತಬ್ಧವಾಯಿತೆ?

ಮಗಳೇ, ಗುರ್‌ಮೆಹರ್ ಕೌರ್,
ಯುದ್ಧಕೋರನಿಗೆ ಯಾವ ದೇಶ?
ಯಾವ ನೆಲ? ಯಾವ ಪಕ್ಷ?
ನಿನ್ನ ಅನಾಥ ನಿಟ್ಟುಸಿರು ಕೇಳುವ
ಪ್ರಶ್ನೆಗೆ ಯಾರು ಉತ್ತರಿಸಿಯಾರು?

ತಂದೆ ಕಳಕೊಂಡ ಮಗಳಷ್ಟೇ
ಮತ್ತೆ ಯುದ್ಧವಾಗದಿರಲೆಂದು
ಪ್ರಾರ್ಥಿಸಬಲ್ಲಳು..

ಬಾ ಮಗಳೆ ಯುದ್ಧವಿಲ್ಲದ
ಗಡಿಗಳಿಲ್ಲದ
ನಿನ್ನ ಕನಸಿಗೆ ಬಣ್ಣ ತುಂಬು
ಈ ನೆಲದಲಿ ನೀನು
ಆ ನೆಲದಲಿ ಇನ್ನಾರೋ
ನಿನ್ನ ಬಳಗ ಹೆಚ್ಚಿಸು
ಜೊತೆಯಾಗುತ್ತಾಳೆ ನಿನ್ನ ಜೊತೆ ನ...
ಮಗಳೂ.

ನನಗಿಷ್ಟೇ ಗೊತ್ತು ಮಗಳೆ
ಹೆರುವ ಒಡಲಷ್ಟೆ ಅನಾಥಗೊಳುವ...
ನೋವ ಅರಿಯಬಲ್ಲದು.

# ಚಡ್ಡಿಗಳ 'ದೇಶದ್ರೋಹಿ' ಕುತಂತ್ರಗಳು

## ಕಂಡಹಾಗೆ




• ಗೌರಿ ಲಂಕೇಶ್
editorlankesh@gmail.com

ಸಾಮಾಜಿಕ ಜಾಲತಾಣಗಳಲ್ಲಿ ನಾನು ಕನ್ಹಯ್ಯನನ್ನು ನನ್ನ 'ಮಗ' ಎಂದು ಕರೆದಾಗಲೆಲ್ಲ ಹಲವು ... "ನಿನ್ನಂತಹ ದೇಶದ್ರೋಹಿಂಗೆ ಸರಿಯಾದ ದೇಶ... ಮಗ ಸಿಕ್ಕಿದ್ದಾನೆ" ಎಂದು ಪ್ರತಿಕ್ರಿಯಿಸುತ್ತಾರೆ. ...ದರೆ ಈ ಚಡ್ಡಿಗಳಿಗೆ ನಾನು, ಕನ್ಹಯ್ಯ ಮತ್ತು ...ತಹ ಹಲವಾರು ಜನ ಮೋದಿಯನ್ನು ವಿರೋಧಿಸು... ಎಂಬುದು ಅರಗಿಸಿಕೊಳ್ಳಲಾಗುವುದಿಲ್ಲ. ಇರಲಿ, ... 'ದೇಶದ್ರೋಹಿ' ಎಂದು ಬಣ್ಣಿಸುವವರಿಗೆ ಕನ್ಹಯ್ಯ ...ರುವ ಪ್ರಶ್ನೆ ಒಂದೇ: "ನಾನು ದೇಶದ್ರೋಹದ ... ಮಾಡಿದ್ದರೆ ಅಥವಾ ದೇಶದ ವಿರುದ್ಧ ಸ್ಲೋಗನ್ ...ದ್ದರೆ ನನ್ನ ವಿರುದ್ಧ ಯಾಕಿನ್ನೂ ಪೊಲೀಸರು ...ಶೀಟ್ ದಾಖಲಿಸಿಲ್ಲ?"

...ದೇಶದ್ರೋಹಿ' ಎಂದು ಕನ್ಹಯ್ಯನ ವಿರುದ್ಧ ದೂರು ...ಲಿಸಿಕೊಂಡು ಆತನನ್ನು ಜೈಲಿಗೂ ದೂಡಿದ್ದ ದೆಹಲಿ ...ೀಸರ ಭಯೋತ್ಪಾದನೆ ಮತ್ತು ಘೋರ ಅಪರಾಧಗಳ ...ಗ ಕಳೆದ ಒಂದು ವರ್ಷದಿಂದ ತನಿಖೆ ನಡೆಸುತ್ತಿದೆ. ...ರು 40 ವೀಡಿಯೋ ತುಣುಕುಗಳನ್ನು ಫೊರೆನ್ಸಿಕ್ ...ಕ್ಕೆ ಕಳುಹಿಸಿದೆ. ಲೆಕ್ಕವಿಲ್ಲದಷ್ಟು ಜನರನ್ನು ವಿಚಾರಣೆಗೆ ...ಡಿಸಿದೆ. ಇದೆಲ್ಲ ಆದನಂತರ ಪೊಲೀಸರಿಗೆ ಅರ್ಥವಾಗಿ...ದೇನೆಂದರೆ ಅವತ್ತು ಜೆಎನ್‌ಯು ಆವರಣದಲ್ಲಿ ...ಲ್ ಗುರುವನ್ನು ಗಲ್ಲಿಗೇರಿಸಿದ್ದನ್ನು ಖಂಡಿಸಲು ...ೀಜಿಸಲ್ಪಟ್ಟಿದ್ದ ಸಭೆಯೂ ಕನ್ಹಯ್ಯನಿಗೂ ಸಂಬಂಧ ... ಯಾವ ವೀಡಿಯೋ ಕ್ಲಿಪ್‌ನಲ್ಲೂ ಕನ್ಹಯ್ಯನಾಗಲಿ ... ದನಿಯಾಗಲಿ ಇಲ್ಲ, ಅವತ್ತು ಹಲವು ವಿದ್ಯಾರ್ಥಿಗಳು ... ಎಬಿವಿಪಿಯ ಗೂಂಡಾಗಳ ನಡುವೆ ಚಕಮಕಿ ... ನಂತರವೇ ಕನ್ಹಯ್ಯ ಅಲ್ಲಿಗೆ ಆಗಮಿಸಿದ್ದು. ಈಗ ...ಯಿಂದ ಬರುತ್ತಿರುವ ಸುದ್ದಿಗಳ ಪ್ರಕಾರ ಅಲ್ಲಿನ ...ೀಸರು 'ದೇಶದ್ರೋಹಿ' ಕನ್ಹಯ್ಯ 'ದೇಶದ್ರೋಹ' ...ದ್ದರ ಬಗ್ಗೆ ಯಾವುದೇ ಸಾಕ್ಷ್ಯ ಇಲ್ಲ ಎಂದು ...ಶೀಟ್ ಸಲ್ಲಿಸಲು ಸಿದ್ಧತೆ ಮಾಡಿಕೊಳ್ಳುತ್ತಿದ್ದಾರೆ.

...ಹಾಗಾದರೆ, ಕಳೆದ ಒಂದು ವರ್ಷದಿಂದ ಕನ್ಹಯ್ಯನನ್ನು ...ದ್ರೋಹಿ' ಎಂದು ಲೇಬಲ್ ಮಾಡಿದ ಜನ ತಮ್ಮ ...ಪ್ರಾಯವನ್ನು ತಿದ್ದಿಕೊಳ್ಳುತ್ತಾರೆಯೇ? ಆತನ ವಿರುದ್ಧ ...ಆಂದೋಲನ ಮಾಡಿದ ಬಿಜೆಪಿ ನಾಯಕರು ಕ್ಷಮೆ ...ಕೇಳುತ್ತಾರೆಯೇ? ಬ್ರಾಹ್ಮಣಶಾಹಿ, ಬಂಡವಾಳಶಾಹಿ, ...ನ, ಅನ್ಯಾಯ, ಇತ್ಯಾದಿಗಳಿಂದ ಕನ್ಹಯ್ಯ 'ಆಜಾದಿ' ...ದ್ದೇ ದೇಶದ್ರೋಹಕ್ಕೆ ಸಮಾನ ಎಂದು ಚೀರಾಡಿದ ... ಚಾನೆಲ್ ಆ್ಯಂಕರ್‌ಗಳು ಈಗ ಆತ ದೇಶದ್ರೋಹಿ ... ಎಂದು ಅಷ್ಟೇ ಪ್ರಾಮುಖ್ಯತೆ ಕೊಟ್ಟು



ಕಾರ್ಯಕ್ರಮಗಳನ್ನು ಪ್ರಸಾರ ಮಾಡುತ್ತಾರೆಯೇ?

ಅದೆಲ್ಲ ಬದಿಗಿರಲಿ, "ನ್ಯಾಯಾಲಯದ ಆವರಣದಲ್ಲೇ ನನ್ನ ಮೇಲೆ ದಾಳಿ ಮಾಡಿದ ವಕೀಲರ ವಿರುದ್ಧ ಪೊಲೀಸರು ಯಾವ ಕ್ರಮ ತೆಗೆದುಕೊಳ್ಳುತ್ತಾರೆ? ಅವರಿಗೆ ಶಿಕ್ಷೆ ಆಗುವಂತೆ ನೋಡಿಕೊಳ್ಳುತ್ತಾರೆಯೇ" ಎಂಬ ಕನ್ಹಯ್ಯನ ಪ್ರಶ್ನೆಗೆ ಉತ್ತರ ಕೊಡುವವರು ಯಾರು?

ಇನ್ನು ನನ್ನ ಮತ್ತೊಬ್ಬ 'ಮಗ' ಉಮರ್ ಖಾಲೀದ್ ಬಗ್ಗೆ ಹೇಳಬೇಕಿದೆ. 'ದೇಶದ್ರೋಹಿ' ಪಟ್ಟವನ್ನು ಚಡ್ಡಿಗಳ ಕುತಂತ್ರದಿಂದಾಗಿ ಪಡೆದಿರುವ ಉಮರ್‌ನಂತೆ ನನ್ನ ಇನ್ನೊಬ್ಬ 'ಮಗ' ರೋಹಿತ್ ವೇಮುಲಾ ಕೂಡ ಗಲ್ಲುಶಿಕ್ಷೆಯನ್ನು ವಿರೋಧಿಸಿದ್ದ. ಅವರಂತೆ ನಾನೂ ಗಲ್ಲುಶಿಕ್ಷೆಯನ್ನು ವಿರೋಧಿಸುತ್ತೇನೆ. ಚಡ್ಡಿಗಳ ಪ್ರಕಾರ ಗಲ್ಲು ಶಿಕ್ಷೆಯನ್ನು ವಿರೋಧಿಸುವವರೆಲ್ಲರೂ ದೇಶದ್ರೋಹಿಗಳಾಗುವುದಾದರೆ ಇಲ್ಲಿನ ಎಲ್ಲಾ ಮಾನವಹಕ್ಕು ಸಂಘಟನೆಗಳೂ ದೇಶದ್ರೋಹಿ ಸಂಘಟನೆಗಳಾಗುತ್ತವೆ. ಇದಕ್ಕಿಂತ ಹಾಸ್ಯಾಸ್ಪದ ತರ್ಕ ಮತ್ತೊಂದಿರಲು ಸಾಧ್ಯವೇ?

ಚಡ್ಡಿಗಳ ಕಿಡಿಗೇಡಿತನ ಯಾವ ಮಟ್ಟದ್ದು ಎಂದರೆ ಕಾರ್ಗಿಲ್ ಯುದ್ಧದಲ್ಲಿ ಮಡಿದ ಯೋಧನ ಪುತ್ರಿ ಗುರ್‌ಮೆಹರ್ ಕೌರ್ ಎಂಬ ಯುವತಿ ಎಬಿವಿಪಿಯ ಗೂಂಡಾಗಿರಿಯನ್ನು ವಿರೋಧಿಸಿದ್ದಕ್ಕೆ ಇವತ್ತು ಆಕೆಗೂ 'ದೇಶದ್ರೋಹಿ' ಪಟ್ಟ ಕಟ್ಟಿದ್ದಾರೆ. ಇವತ್ತು ಯಾರಾದರೂ ಮೋದಿಯನ್ನು ಟೀಕಿಸಿದರೆ, ಆರೆಸ್ಸೆಸ್ ಅನ್ನು ವಿರೋಧಿಸಿದರೆ, ಹಿಂದೂತ್ವವಾದವನ್ನು ಖಂಡಿಸಿದರೆ, ಎಬಿವಿಪಿಯ ದಗಲ್ಬಾಜಿತನವನ್ನು ಲೇವಡಿ ಮಾಡಿದರೆ 'ದೇಶದ್ರೋಹಿ' ಎಂಬ ಪಟ್ಟ ಕಟ್ಟಿಬಿಟ್ಟ ಬುತ್ತಿ.

ಆದರೆ ನಿಧಾನವಾಗಿ ಕೆಲವರಾದರೂ ಚಡ್ಡಿಗಳ ಇಂತಹ ಕುತರ್ಕಗಳನ್ನು ಅರಿತುಕೊಳ್ಳುತ್ತಿದ್ದಾರೆ. ಆದ್ದರಿಂದಲೇ ಮಂಗಳವಾರ ದೆಹಲಿಯಲ್ಲಿ ಎಬಿವಿಪಿ ವಿರುದ್ಧ ನಡೆದ ಪ್ರತಿಭಟನೆಯಲ್ಲಿ ಸಾವಿರಾರು ಯುವಕರು ಪ್ರಥಮ ಬಾರಿಗೆ ಭಾಗಿಯಾಗಿದ್ದು. ಹಾಗೆ ಭಾಗವಹಿಸಿ ವಿದ್ಯಾರ್ಥಿನಿಯೊಬ್ಬಳ ತಂದೆ ಎಬಿವಿಪಿಗೆ ಬರೆದ ಪತ್ರವೊಂದು ಈಗ ಎಲ್ಲೆಡೆ ಹರಿದಾಡುತ್ತಿದೆ. ಹಿಂದೆ ಸ್ವತಃ ಎಬಿವಿಪಿಯ ಸದಸ್ಯನಾಗಿದ್ದ, ಆರೆಸ್ಸೆಸ್ ಶಾಖಾಗಳಲ್ಲಿ ಭಾಗವಹಿಸಿದ್ದ ಆ ತಂದೆಯ ಪತ್ರ ಹೀಗಿದೆ:

"ಪ್ರೀತಿಯ ಎಬಿವಿಪಿ,

ನನ್ನ ಮಗಳು ಸರಿಯಾದದ್ದನ್ನು ಮಾಡುತ್ತಿದ್ದಾಳೆ ಎಂದು ನನಗೆ ತೋರಿಸಿಕೊಟ್ಟಿದ್ದಕ್ಕೆ ಧನ್ಯವಾದಗಳು. ಆಕೆ ಕಳೆದ ಒಂದು ವರ್ಷದಿಂದ ಆಕ್ಟಿವಿಸ್ಟ್ ಆಗಿ ಕೆಲಸ ಮಾಡುತ್ತಿದ್ದಾಳೆ. ಅದೆಲ್ಲ ಶುರುವಾಗಿದ್ದು ಆಕೆ 'ಯುಜಿಸಿ ಆಕ್ರಮಿಸಿ' ಹೋರಾಟದಲ್ಲಿ ಭಾಗವಹಿಸಿದಾಗಿನಿಂದ. ಅದಾದ ಆರು ತಿಂಗಳ ನಂತರ ತಾನು ಕಮ್ಯೂನಿಸ್ಟ್ ಎಂದು ಆಕೆ ನನಗೆ ಹೇಳಿದಳು. ಅದನ್ನು ಕೇಳಿ ನನಗೆ ಕೋಪ ಬಂದರೂ ಸುಮ್ಮನಿದ್ದೆ. ಆಕೆ ನನಗೆ ತುಂಬಾ ಹತ್ತಿರದವಳಾದರೂ ನಾವು ತುಂಬಾ ವಾದ ಮಾಡುತ್ತೇವೆ. ಆಕೆಗೆ ತೀವ್ರವಾಗಿ ವಾದಿಸುವುದನ್ನು ಹೇಳಿಕೊಟ್ಟಿದ್ದೇ ನಾನು. ಆದರೆ ನಾನು ಆಕ್ಟಿವಿಸ್ಟ್ ಆಗಿದ್ದಾಗ ವಾದಿಸುತ್ತಿದ್ದದ್ದಕ್ಕಿಂತ ಆಕೆ ತೀವ್ರವಾಗಿ ವಾದಿಸುತ್ತಾಳೆ.

ಬನಾರಸ್ ಹಿಂದೂ ವಿಶ್ವವಿದ್ಯಾಲಯದಲ್ಲಿ ನಾನು ಎಬಿವಿಪಿಯ ಸದಸ್ಯನಾಗಿದ್ದೆ. ಆಗ ನಾವೂ ಪ್ರತಿಭಟನೆ, ವಾದ, ಚರ್ಚೆ ಇತ್ಯಾದಿಗಳಲ್ಲಿ ಭಾಗವಹಿಸುತ್ತಿದ್ದೆವು. ಆದರೆ ಯಾವಾಗ ಈ ಸಂಘಟನೆ ಗೂಂಡಾಗಿರಿಯನ್ನು ಪ್ರಾರಂಭಿಸಿತು ಎಂದು ನನಗೆ ಗೊತ್ತಿಲ್ಲ. ನನ್ನ ಸಹೋದರರು ಮತ್ತು ಸ್ನೇಹಿತರೊಂದಿಗೆ ಆರೆಸ್ಸೆಸ್‌ನ ಶಾಖಾಗಳಲ್ಲಿ ನಾನು ಭಾಗವಹಿಸುತ್ತಿದ್ದೆ. ಆದ್ದರಿಂದ ನನ್ನ ಮಗಳು 'ಕಾಮ್ರೇಡ್' ಎಂದು ಹೇಳಿಕೊಳ್ಳಲು ನನಗೆ ಅವಮಾನವಾಗುತ್ತಿತ್ತು. ನೀನು ತಪ್ಪು ಮಾಡುತ್ತಿದ್ದೀಯ ಎಂದು ಆಕೆಗೆ ಅರ್ಥಮಾಡಿ ಕೊಡಲು ಯತ್ನಿಸಿದೆ, ಆಕೆಗೆ ಬೈದೆ, ವಾದ ಮಾಡಿದೆ. ಒಂದು ಸಾರಿ ಸಂಬಂಧಿಕರ ಅಂತ್ಯಕ್ರಿಯೆಗೆಂದು ನಾನು ಲಕ್ನೋಗೆ ಹೋಗಿದ್ದಾಗ ಆಕೆಯನ್ನು ಬಂಧಿಸಲಾಯಿತು. ಈ ವಿಚಾರ ಕೇಳಿ ಸಂಬಂಧಿಕರು ಆಕೆ ಸಾಮಾಜಿಕ ಜಾಲತಾಣಗಳಲ್ಲಿ ಹಾಕುವ ಪೋಸ್ಟ್‌ಗಳ ಬಗ್ಗೆ ಚರ್ಚಿಸಲಾರಂಭಿಸಿದರು. ನನಗೆ ನನ್ನ ಮಗಳ ಮೇಲಿನ ಕೋಪ ಇನ್ನೂ ಹೆಚ್ಚಾಯಿತು. ಸಂಬಂಧಿಕರೊಂದಿಗೆ ಆಕೆ ರಾಜಕೀಯ ಚರ್ಚೆ ನಡೆಸುತ್ತಿದ್ದಾಗ ನನಗೆ ಕೋಪ ಬರುತ್ತಿತ್ತು. ಆಕೆಗೆ ಅದೆಷ್ಟೋ ಬಾರಿ ಮನೆಯಿಂದ ತೊಲಗು ಎಂದದ್ದೂ ಉಂಟು. ನಮ್ಮ ಮನೆಗೆ ಬರುತ್ತಿದ್ದ ಆಕೆಯ ಸ್ನೇಹಿತರೊಂದಿಗೂ ವಾದಿಸುತ್ತಿದ್ದೆ.

ಆದರೆ ಆಕೆಯೇ ಸರಿ, ತಪ್ಪು ನನ್ನದು ಎಂದೀಗ ನನಗೆ ಮನವರಿಕೆ ಆಗಿದೆ. ಮೊನ್ನೆ ದೆಹಲಿ ವಿವಿಯಲ್ಲಿ ಏನಾಯಿತು ಎಂದು ಹೇಳಿದಳು. ಸಹಜವಾಗಿಯೇ ತಂದೆಯಾದ ನನಗೆ ಆಕೆಯ ಸುರಕ್ಷತೆ ಬಗ್ಗೆ ಕಾಳಜಿ ಇತ್ತು. ಆದ್ದರಿಂದ ಆಕೆಗೆ ಬೈಯ್ಯಲಾರಂಭಿಸಿದೆ. ಆಗ ಆಕೆ "ನಿನ್ನ ಕಾಲದಲ್ಲಿ ರಾಜಕೀಯ ಬೇರೆ ತರಹ ಇತ್ತು" ಎಂದು ಗುಡುಗಿ ದಢಾರನೆ ತನ್ನ ಕೊಠಡಿಯ ಬಾಗಿಲನ್ನು ಮುಚ್ಚಿದಳು. ಫೋನ್‌ನಲ್ಲಿ ಆಕೆ ವಿವಿಯಲ್ಲಿ ನಡೆದದ್ದನ್ನೆಲ್ಲ ತನ್ನ ಸ್ನೇಹಿತರಿಗೆ ವಿವರಿಸಿದ್ದನ್ನು ಆಲಿಸಿದೆ. ಅದನ್ನು ಕೇಳಿ ಆಕೆಯ ನಿಲುವೇ ಸರಿ ಅನ್ನಿಸಿತು.

ಇಲ್ಲಿಯತನಕ ತಪ್ಪು ಮಾಡಿದ್ದ ನಾನು ಇನ್ನು ಮುಂದೆ ನನ್ನ ಮಗಳನ್ನು ಬೆಂಬಲಿಸುತ್ತೇನೆ. ಯಾಕೆಂದರೆ ಗುರುಗಳನ್ನು ಥಳಿಸಬೇಕೆಂದು ನಾನು ಎಂದೂ ನಂಬಿದವನಲ್ಲ. ಆದರೆ ಇವತ್ತು ನೀವು ವಿಶ್ವವಿದ್ಯಾಲಯಗಳನ್ನೇ ಅಪಾಯಕಾರಿ ಸ್ಥಳಗಳನ್ನಾಗಿಸಿದ್ದೀರಿ. ನನ್ನ ಮಗಳು ತನ್ನ ಹೋರಾಟವನ್ನು ಮುಂದುವರೆಸುತ್ತಾಳೆಂದು ನನಗೆ ಗೊತ್ತು. ನನ್ನ ಕೂಸು ದಿಟ್ಟ ಮಹಿಳೆಯಾಗಿ ಬೆಳೆದಿದ್ದಾಳೆ!

ಇಂತಿ (ಈಗ ನಿಮ್ಮವನಲ್ಲದ),
ಬನಾರಸ್ ಹಿಂದೂ ವಿವಿಯ ಎಬಿವಿಪಿ ಘಟಕದ ಮಾಜಿ ಸದಸ್ಯ"

■

# ಕರ್ನಾಟಕ ಎಡೂರಪ್ಪನಂಥ ನಾಯಕನ್ನೆ ಕಂಡಿಲ್ಲ

## ಥೂತ್ತೇರಿ

ಯಾಹೂ

ಚಿಕ್ಕಮಗಳೂರಲ್ಲೊಂದು ಜಿಲ್ಲಾ ಸಾಹಿತ್ಯ ಸಮ್ಮೇಳನ ...ಿತು. ಅದಕ್ಕೆ ಅಧ್ಯಕ್ಷರಾಗಿ ಆಯ್ಕೆಯಾಗಿದ್ದವರು ಕೆ. ...ಳಸಿದ್ದಪ್ಪನವರು. ಈ ಮರುಳಸಿದ್ದಪ್ಪನವರು ಮತಾಂಧರ ...ಣ್ಣಿಗೆ ಗುರಿಯಾದವರು. ಆದ್ದರಿಂದ ಅವರೇನು ಭಾಷಣ ...ಬಹುದೆಂದು ಗ್ರಹಿಸಿದ ಅಲ್ಲಿನ ಶಾಸಕ ಸಿ.ಟಿ. ರವಿ ...ಾಕ್ಕೆ ಮೊದಲೇ ಪರಾರಿಯಾದನಂತಲ್ಲ. ಆದರೇನು, ...ಳಸಿದ್ದಪ್ಪನವರು ಮಾಡಿದ ಭಾಷಣ ರೋಗಗ್ರಸ್ತ ಜಿಲ್ಲೆಗೆ ... ನೀಡುವಂತಿತ್ತು, ಆದರೆ ಮಾನಸಿಕ ಚಿಕಿತ್ಸೆಗೆ ...ಾಗಬೇಕಾಗಿರುವ ಸಂಘ ಪರಿವಾರದವು ಅತ್ತ ...ಯಲಿಲ್ಲವಂತಲ್ಲಾ, ಥೂತ್ತೇರಿ!

******

...ಮ್ಮ ದಶರಥ ನಾಯಕ ಕೆ. ಶಿವರಾಮ್‌ರವರು ...ತರ ರೂಪಾಯಿ ಖರ್ಚಿನ ಜಾಹೀರಾತನ್ನು ನಂದಿ... ಪತ್ರಿಕೆಗೆ ನೀಡಿ ಎಡೂರಪ್ಪನನ್ನು ಹಿಗ್ಗಾಮುಗ್ಗಾ ...ಳಿರುವ ಬಗ್ಗೆ ಒಂದು ಸಣ್ಣ ವಿವರ ಕೇಳಬೇಕೆನಿಸಿತಲ್ಲಾ, ...ಲೇ ಫೋನ್ ಮಾಡಲಾಗಿ ರಿಂಗಾಯ್ತು.

...ಂಗ್ ಟೋನ್: "ಓಹೋ ಹಿಮಾಲಯ, ಓಹೋ ...ಾಲಯ ಅದೇ ದೇವಾಲಯ, ಎಡೂರಪ್ಪಾಲಯ....."

"ಹಲೋ ಯಾರು?"

"ನಾನು ಸಾರ್ ನಿಮ್ಮ ಅಭಿಮಾನಿ ಯಾಹೂ."

"ನೀವು ನಮ್ಮವರ?"

"ಅದ್ಹೆಂಗೆ ನಿಮ್ಮವರಾಗಕ್ಕಾಗತೆ ಸಾರ್?"

"ಯಾಕೆ ಆಗಬಾರ್ದ?"

"ನೀವೇ ನಿಮ್ಮನ್ನ ಕೀಳುಜಾತಿಯವನು ಅಂತ ಜಾಹೀರಾತು ...ಟ್ಟಿದ್ದೀರಲ್ಲ ಸಾರ್?"

"ಹೌದು ನಾನು ಕೀಳುಜಾತಿಯವನು. ಛಲವಾದಿ."

"ಅದ್ಭುತ ಸಾರ್."

"ಯಾಕೆ ಅದ್ಭುತ?"

"ನೀವು ಕನ್ನಡದಲ್ಲಿ ಐಎಎಸ್ ಬರೆದು ಅಧಿಕಾರಿಯಾದ ...ಗ, ಮತ್ತೆ 'ಬಾ ನಲ್ಲೆ ಮಧುಚಂದ್ರಕೆ' ಸಿನಿಮಾದ ...ಾಯಕ. ಅದರಲ್ಲಿ ನಾಯಕ ನಟನಾಗಿ ಅಭಿನಯಿಸಿದೋರು. ಇವೆಲ್ಲಾ ಸೇರಿ ನಿಮ್ಮ ತಲೆಯಿಂದ ಕೀಳುಜಾತಿ ಅನ್ನೊ ಪ್ರಜ್ಞೆನ ಅಳಿಸಾಕಿವೆ ಅನ್ಕಂಡಿದ್ದೆ. ಆದ್ರೆ ಎಲ್ಲಾ ಅವತಾರ ಮುಗಿಸಿ ಈಗ ಬಿಜೆಪಿ ಸೇರಿ ನಾನು ಕೀಳಜಾತಿ, ಎಡೂರಪ್ಪ ಮೇಲಜಾತಿ ಅಂತ ಜಾಹೀರಾತು ಕೊಟ್ಟಿದ್ದಿರಿ ಅಂದ್ರೇ ನಿಮಗಂಟಿರೊ ಕಾಯಿಲೆ ಯಾವುದು ಅಂತ್ಲೆ ಗೊತ್ತಾಯ್ತಾಯಿಲ್ಲ ಸಾರ್."

"ನನಗೆ ಯಾವ ಕಾಯಿಲೆನೂ ಇಲ್ಲ ಕಂಡ್ರಿ."

"ಅಲ್ಲ ಸಾರ್, ನಿಮ್ಮ ಜಾಹೀರಾತಿನ ಒಕ್ಕಣೆಯಿಂದ ನನಗಾಗಿರೊ ಆಘಾತ ಯಾವುದು ಅಂದ್ರೆ, ಮನುಷ್ಯ ಮಾತ್ರದವರಾಗಿ ವರ್ತಿಸೋದಕ್ಕೆ, ನಡಕೊಳಕ್ಕೆ ನಿಮ್ಮಂಥವರಿಂದ್ಲೇ ಸಾಧ್ಯವಾಗಲಿಲ್ಲ ಅಂದ್ರೆ ಇನ್ನ ಸಾಮಾನ್ಯ ಜನಗಳ ಪಾಡೇನು ಅಂತ."

"ನೋಡಿ, ನನ್ನ ಅನುಭವ ಹೇಳದಾದ್ರೆ ಈ ಹಿಂದೂ ಧರ್ಮದಲ್ಲಿ ಇರೋ ಕೆಳಜಾತಿ ಜನಗಳು ಯಾವುದೇ ಹುದ್ದೆ ಅಲಂಕರಿಸಿದ್ರೂ ಜನ ಇವುನಿಂಥವ್ರು ಅಂತ್ಲೇ ಗುರುತಿಸೇ ಗುರುತುಸ್ತಾರೆ ಕಂಡ್ರಿ. ಆದ್ರಿಂದ ನಾನು ಹೇಳಿಕಂಡಿರದ್ರಲ್ಲಿ ತಪ್ಪೇನು."

"ನೋಡಿ ಸಾರ್, ನಾನು ಛಲವಾದಿ ಶಿವರಾಮ ಅಂತ ಹೇಳಿಕಂಡು ಹೊರಟ್ರೆ ನಾವೇನು ಮಾಡಕ್ಕಾಗಲ್ಲ. ಆದ್ರೆ ನಮ್ಮ ನಡುವೆ ಇದ್ದ ಮತ್ತೆ ಇರೊ ನಿಮ್ಮಂಥ ಕೆಲವರನ್ನ ಜಾತಿ ಮೂಲದಿಂದ್ಲೆ ಬಾವುಸಕ್ಕಾಗಲಿಲ್ಲ ಅಂಗಿದ್ರು. ಎವರ್‌ಗ್ರೀನ್ ಜಾಂಪಲ್ ನಮ್ಮ ಡಾ. ರಾಜಕುಮಾರನ್ನ ಯಾವನಾದ ಜಾತಿ ಹಿಡದು ಗುರ್ತುತಿಸಕ್ಕಾಯ್ತು? ಅದೇ ತರ ನರಸಿಂಹರಾಜು, ಬಾಲಕೃಷ್ಣ ಇವುರೆಲ್ಲಾ ಕಲಾಲೋಕದ ತಾರೆಗಳು. ಆದ್ರಿಂದ ನೀವು ಹೀರೋ ಆಗಿ ನಾನು ಛಲವಾದಿ ಶಿವರಾಮು ಅಂತಿರಲ್ಲಾ?"

"ಕಲೆ ವಿಷಯದಲ್ಲಿ ನಾನು ಹಾಗೇ ಇದ್ದೀನಿ. ಆದ್ರೆ ರಾಜಕಾರಣದಲ್ಲಿ ಜಾತಿ ಅನಿವಾರ್ಯ."

"ಕಲೆ ವಿಷಯದಲ್ಲೂ ನೀವು ಹಾಗಿಲ್ಲ ಶಿವರಾಂ ಸೇರೆ ಹುಡುಗರಲ್ಲಿ ಎಷ್ಟು ಜನ ಬೇರೆ ಜಾತಿಯವ್ರಿದ್ರು? ಇಷ್ಟಾದ್ರು ನೀವು ಜಾತಿವಾದಿಯಾಗಕ್ಕೆ ನೂರಕ್ಕೆ ನೂರು ಪರಸೆಂಟ್ ಹಕ್ಕಿದೆ ಅಂತ ನಮ್ಮ ಸೋಷಲಿಸ್ಟರು ಹೇಳ್ತಾರೆ. ಆದ್ರೂ ಒಂದು ತಿದ್ದುಪಡಿ ಯಾವುದೆಂದರೆ ಈ ನೆಲದಲ್ಲಿ ನಾವು ಯಾವುದಾದ್ರು ಜಾತಿಲೆ ಹುಟ್ಟಬೇಕು, ಹುಟ್ಟಿದ ಮೇಲೆ ಜಾತಿ ಮೀರಲೇಬೇಕು ಕಡೆವರಿಗೂ. ಆಗ ಮಾತ್ರ ಒಬ್ಬ ಕೆ.ಎಚ್. ರಂಗನಾಥ ಆಗಬವುದು. ಒಬ್ಬ ಕೃಷ್ಣಪ್ಪ ಆಗಬವುದು. ಒಬ್ಬ ದೇವನೂರಾಗಬವುದು. ಇಲ್ಲ ಅಂದ್ರೆ ನಾನು ಸಾರ್ ಛಲವಾದಿ ಶಿವರಾಂ ಅನ್ನಬೇಕಾಯ್ತದೆ ಸಾರ್. ಇನ್ನೊಂದು ವಿಷಯ. ಎಡೂರಪ್ಪ ಎಲ್ಲ ಅಧಿಕಾರಿಗಳನ್ನ ನಿಮ್ಮ ತರದಲ್ಲೇ ಸ್ವಡಿಸಿಕೊಂಡವುರೆ. ಯಾಕಂದ್ರೆ ಅವರ ಜಾತಕ ಪರಿಶೀಲಿಸಿದ್ರೆ ನೀವೂ ತಿನ್ನಿ ನನ್ನ ಭಾಗ ತಂದು ಒಪ್ಪಸೋದಕ್ಕೆ ಮರಿಬೇಡಿ ಅನ್ನೊ ಭ್ರಷ್ಟ ವಿನಯ ಇತ್ತು. ಇದು ನಿಮಗೂ ಗೊತ್ತು, ನಿಮ್ಮ ಕೆಳಗಡೆ ಕೆಲಸ ಮಾಡಿದ ಜನ ನಿಮ್ಮ ಜಾಹೀರಾತು ನೋಡಿ ಬಿದ್ದುಬಿದ್ದು ನಕ್ಕಿರೋದು ಗೊತ್ತ ನಿಮಗೆ?"

"ನಗಾಡೊ ಅಂತದ್ದು ನಾನೇನು ಮಾಡಿದ್ದಿನಿ?"

"ಸುಳ್ಳು ಜಾಹೀರಾತು ಕೊಟ್ಟಿದ್ದಿರಿ ಸಾರ್. ಎಡೂರಪ್ಪ ಮುಖ್ಯಮಂತ್ರಿಯಾಗಿದ್ದಾಗ ಎಷ್ಟು ಜನ ಸ್ವಜಾತಿ ಮಂತ್ರಿಗಳಿದ್ರು ಗೊತ್ತ? ಸಾದ ಜನಾಂಗಕ್ಕೆ ಮೀಸಲಾತಿ ಕೊಟ್ಟಿದ್ರು. ದಾವಣಗೆರೆಲಿದ್ದ ನಿಮಗೆ ಸಾದ ಜನಾಂಗದ ಶ್ರೀಮಂತಿಕೆ ಗೊತ್ತಿರಬವುದು."

"ಅವುರು ಎಲ್ಲ ಜನಾಂಗದ ಹಿತ ಬಯಸೋ ನಾಯಕ. ನಾನು ಕೇಳಿದೇಟಿಗೆ ಅಂಬೇಡ್ಕರ್ ಭವನಕ್ಕೆ 10 ಕೋಟಿ ಕೊಟ್ರು."

"ಕೊಟ್ರು ಅಂದ್ರೆ ಅಂಬೇಡ್ಕರ್ ಏನು ಅನ್ಕಂಡಿದ್ದಿರಿ, ಅವರ ಹೆಸರೇಳಿದ ಕೂಡ್ಲೆ ಜಾಗ ದುಡ್ಡು ಎರಡೂ ದೊರೆಯುತ್ತೆ ಯಾಕಂದ್ರೆ ಅವೆರಡೂ ಸರ್ಕಾರದ ಇಚ್ಛಾಶಕ್ತಿ ಕಾರ್ಯಕ್ರಮ."

"ಆದ್ರೆ ಎಷ್ಟು ಜನ ನಾಯಕರು ಎಡೂರಪ್ಪನಂಗಿದಾರೆ, ಹೇಳಿ?"

"ಇಲ್ಲ ಸಾರ್, ಕರ್ನಾಟಕದ ಇತಿಹಾಸದಲ್ಲಿ ಎಡೂರಪ್ಪನಂಥ ದಕ್ಷ, ಪ್ರಾಮಾಣಿಕ, ಹಿಂದುಳಿದವರ ಬಗ್ಗೆ ಕಾಳಜಿ ಇರೋ ನಾಯಕನೇ ಬಂದಿಲ್ಲ. ನಿಜಲಿಂಗಪ್ಪ ಕಡಿದಾಳು ಮಂಜಪ್ಪ ಇವರೆಲ್ಲಾ ಎಡೂರಪ್ಪನೆದ್ರಿಗೆ ಕಡುಭ್ರಷ್ಟರು. ಇನ್ನು ದೇವರಾಜ ಅರಸುರಂತೂ, ನೆನಸಂಗೇಯಿಲ್ಲ. ಮಾಡಬಾರ್ದನ್ನೆ ಮಾಡಿಹೋದ್ರು. ಮುಖ್ಯವಾಗಿ ಕೆಳಜಾತಿ ಜನಗಳನ್ನು ಮೇಲೆತ್ತಿ ಎಡೂರಪ್ಪನ ಕಡೆಯುವರೆಲ್ಲಾ ಒಟ್ಟಾಗಂಗೆ ಮಾಡಿಹೋದ್ರು."

"ನೋಡಿ, ಈತರ ವ್ಯಂಗ್ಯವಾಗಿ ಮಾತಾಡಿದ್ರೆ ನಾನು ಉತ್ತರ ಕೊಡಲ್ಲ, ನೀವು ಫೋನು ಮಾಡಿದ್ಯಾಕೆ ಹೇಳಿ."

"ಸಾರಿ ಸಾರ್, ನಾವು ತಿಳಕಂಡಿದ್ದ ಎಡೂರಪ್ಪನೇ ಬೇರೆ, ನೀವು ತಿಳಿಸಿ ಕೊಟ್ಟ ಎಡೂರಪ್ಪನೇ ಬೇರೆ. ನಮ್ಮ ಪೂರ್ವಾಗ್ರಹದ ಕಣ್ಣು ತೆರೆಸಿದ್ದಿರಿ. ಇದಕ್ಕಿಂತ ಮೊದಲು ನಿಮಗೆ ದೇವೇಗೌಡರು, ಕುಮಾರಸ್ವಾಮಿನೂ ಹಿಂಗೇ ಕಂಡಿದ್ರಾ. ಇರಲಿ, ಈಗ ನಮ್ಮ ಸಲಹೆ ಏನಂದ್ರೆ ನಿಮ್ಮ ಕೈಹಿಡದು ನ್ಯಡಸ್ತಾಯಿರೊ ಎಡೂರಪ್ಪನ್ನ ಕೇಳಿ ಒಬ್ಬ ದಲಿತನನ್ನು ಮುಖ್ಯಮಂತ್ರಿ ಮಾಡಕ್ಕೆ ಸಾಧ್ಯವೆ?"

"ಎಡೂರಪ್ಪನವರು ಅದಕ್ಕೂ ಹೇಸದಿಲ್ಲ, ಯಾವುದಾದ್ರು ಹಗರಣದಿಂದ ಅವುರು ಕೆಳಗಿಳಿಯೊದಾದ್ರೆ ಒಬ್ಬ ನಂಬಿಗಸ್ಥ ದಲಿತನ್ನ ಮುಖ್ಯಮಂತ್ರಿ ಮಾಡೇ ಮಾಡ್ತರೆ."


"ಅಂತೂ ಎಡೂರಪ್ಪನ ಹಿಂದೆ ಹಗರಣ ಇರತವೆ ಅಂತ ಒಪ್ಗೊಂಡ್ರಿ. ಆಮೇಲೆ ಅವುರು ಎಂದಾದ್ರು ಇಳಿಯೋದಾದ್ರೆ ಈ ಛಲವಾದಿ ನಟನನ್ನ ಕೈಬಿಡಲ್ಲ ಅಂತ್ಲೆ ಅಲವ ಲಕ್ಷಾಂತರ್ರುಪಾಯಿ ಜಾಹೀರಾತು?"

"ಕರ್ನಾಟಕದಲ್ಲಿ ಮುಂದೆ ಒಬ್ಬ ದಲಿತ ಮುಖ್ಯಮಂತ್ರಿ ಯಾಗಬೇಕು ಅನ್ನೊ ಕೂಗನ್ನು ಎಬ್ಬಿಸಿರೋನೆ ನಾನು. ಆ ಕೂಗು ಮುಂದೆ ಚಳವಳಿಯಾಗಬಹುದು. ಮುಖ್ಯನ ಕಾರಣಕ್ಕೆ ನನ್ನ ಗುರು ಎಡೂರಪ್ಪ ನನ್ನ ಕೈಬಿಡಲ್ಲ ಅನ್ಕಂಡಿದ್ದಿನಿ."

"ಥೂತ್ತೇರಿ!!"

■

# ಭಟ್ಕಳ: ಅಸಡ್ಡಾಳ ಅನಂತ್ಮಾಣಿ ಆಟ.. ದೀವರ ಪುಢಾರಿಗಳಿಗೆ ಪ್ರಾಣಸಂಕಟ


ಅನಂತಕುಮಾರ್ ಹೆಗ್ಡೆ

"ಉತ್ತರ ಕನ್ನಡದ ಆರು ಅಸೆಂಬ್ಲಿ ಕ್ಷೇತ್ರದ ಪೈಕಿ ಐದು ಗೆಲ್ತೇನೆ.... ಒಂದು ಜಟಗನಿಗೆ ಬಿಡ್ತೇನೆ..." ಹಾಗೆನ್ನುತ್ತ ಉತ್ತರ ಕನ್ನಡದ ಉದ್ದಗಲಕ್ಕೆ ಗಿರಕಿ ಹೊಡೆಯುತ್ತಿದ್ದಾನೆ ಸಂಘ ಪರಿವಾರದ ಪುಂಡ ಸಂಸದ ಅನಂತಕುಮಾರ್ ಹೆಗಡೆ ಯಾನೆ ಅನಂತ್ಮಾಣಿ. ಮಾರಿ-ಜಟಗನಂಥ ರಕ್ತ ದಾಹದ ದೈವದ 'ಆರಾಧಕ'ನಾದ ಈ ಬ್ರಾಹ್ಮಣ ವಟು ಒಂದು ಕ್ಷೇತ್ರ ಜಟಕನಿಗೆ ಬಿಡುತ್ತೇನೆನ್ನುವುದರ ಗೂಡಾರ್ಥ ಗೊತ್ತಾ? ಸ್ವ-ಪಕ್ಷದ ಆಜನ್ಮ ವೈರಿ- ಮಾಜಿ ಮಂತ್ರಿ ವಿಶ್ವೇಶ್ವರ ಹೆಗಡೆ ಕಾಗೇರಿಯನ್ನು ಶಿರಸಿಯಲ್ಲಿ ಸೋಲಿಸ್ತೇನೆ ಎಂಬುದೇ ಅನಂತ್ಮಾಣಿ ಮಾತಿನ ಸಂಕೇತಾರ್ಥ. ಶಿರಸಿಯಲ್ಲಿ ಕಾಂಗ್ರೆಸ್‌ನ ಭೀಮಣ್ಣ ನಾಯ್ಕನ ಗೆಲ್ಲಿಸುವ ಸ್ಕೆಚ್ ಹಾಕಿರುವ ಅನಂತ್ಮಾಣಿ ಇತರ ನಾಲ್ಕು ಕ್ಷೇತ್ರದಲ್ಲಿ ಆಜ್ಞಾನುಧಾರಿ ಗುಲಾಮರ ಆಯ್ಕೆ ಮಾಡಿ ಅಖಾಡಕ್ಕೆ ಇಳಿಸಲು ಅಣಿಗೊಳಿಸುತ್ತಿದ್ದಾನೆ. ಬಾಕಿಯಿರುವ ಭಟ್ಕಳ ಬಿಜೆಪಿ ಕ್ಯಾಂಡಿಡೆಂಟ್‌ಗಾಗಿ ತಡಕಾಡುತ್ತಿದ್ದಾನೆ.


ಈ ಭಟ್ಕಳ ಅನಂತ್ಮಾಣಿಯ ಒಂದು ಕಾಲದ 'ಕರ್ಮ'ಭೂಮಿ. ವರ್ಷಾನುಗಟ್ಟಲೆ ಇಲ್ಲಿ ನಡೆದ ಹಿಂದೂತ್ವ ಪ್ರಣೀತ ಕೋಮು ದಂಗೆಯ ಫಲ ಬೊಗಸೆಯಲ್ಲಿ ಮೊಗೆಮೊಗೆದು ಉಂಡ ಅನಂತ್ಮಾಣಿ ಎಂಪಿಗಿರಿಯಲ್ಲಿ ಮೆರೆಯುವ ಭಾಗ್ಯ ಕಂಡಿದ್ದಾನೆ. ಇದೇ ಉತ್ತರ ಕನ್ನಡದ ದೌರ್ಭಾಗ್ಯ. ತಿರುಬೋಕಿ ಅನಂತ್ಮಾಣಿ ಇವತ್ತು ಜಿಲ್ಲಾ ಬಿಜೆಪಿ ಕಬ್ಜಾ ಮಾಡಿಕೊಂಡು ಹಿರಿಯರ ಮುಂದೆ ಯಜಮಾನಿಕೆ ಗತ್ತಲ್ಲಿ ಓಡಾಡುತ್ತಿದ್ದಾನೆ. ಸಂಘ ಪರಿವಾರದ ಆಯಕಟ್ಟಿನ ಮುಖಂಡ ಮಾಣಿಯೂ ಕೇಂದ್ರ ಮಂತ್ರಿ ಅನಂತಕುಮಾರ್ ಶಾಸ್ತ್ರಿಯ ಆತ್ಮೀಯ ಶಿಷ್ಯೋತ್ತಮನೂ ಆಗಿರುವ ಕಾಗೇರಿಯಂಥ ಕಾಗೇರಿಯನ್ನೇ ಮೂಲೆಗುಂಪು ಮಾಡಿದ ಮದದಿಂದ ಹಾರಾಡುತ್ತಿದ್ದಾನೆ. ರಾಜ್ಯ ಬಿಜೆಪಿ ಅಧ್ಯಕ್ಷ ಯಡ್ಡಿ ಟೀಮಿನ ಉಪಾಧ್ಯಕ್ಷನಾಗಿರುವ ಅನಂತ್ಮಾಣಿ ಬಿಜೆಪಿಯ ಶಿರಸಿ ಟಿಕೆಟ್ ತಪ್ಪಿಸುವ ಪ್ರಯತ್ನ ಈಗಾಗಲೇ ಶುರು ಹಚ್ಚಿಕೊಂಡಿದ್ದಾನೆ. ಅದಾಗದಿದ್ದರೆ ಸೋಲಿಸಲು ಶ್ರಮಿಸುವುದಂತೂ ಖಾತ್ರಿ. ಇದಕ್ಕೆ ಯಡ್ಡಿಜೀ ಕೃಪಾಶೀರ್ವಾದ ಇದ್ದೇ ಇದೆ! ಇಂತಿಪ್ಪ ಅನಂತ್ಮಾಣಿಯ ತಲೆ ಕೆಡಿಸಿ ಕಾಡುತ್ತಿದೆ ಭಟ್ಕಳ ಅಭ್ಯರ್ಥಿ ಆಯ್ಕೆ ರಾಜಕಾರಣ!!


ಯಡ್ಡಿಯ ಪರಮಾಪ್ತ ಹಿಂಬಾಲಕನೂ ಮಾಜಿ ಮಂತ್ರಿಯೂ ಆಗಿರುವ ಶಿವಾನಂದ ನಾಯ್ಕರ ತವರು ಕ್ಷೇತ್ರ ಈ ಭಟ್ಕಳ. ಶಿವಾನಂದ ನಾಯ್ಕ ರಾಜಕೀಯದ ದೀಕ್ಷೆ ಪಡೆದಿದ್ದೇ ಅನಂತ್ಮಾಣಿಯ ಕಡಿ-ಕೊಚ್ಚು ತರಬೇತಿಯ ಗರಡಿ ಮನೆಯಲ್ಲಿ. ಕೋಜಾ ಸರ್ಕಾರದಲ್ಲಿ ಯಡ್ಡಿ ಬಿಜೆಪಿ ಕೋಟಾದಲ್ಲಿ ಈ ಶಿವಾನಂದ ನಾಯ್ಕನನ್ನು ಮಂತ್ರಿ ಮಾಡಿಕೊಂಡಿದ್ದರು. ಹಿಂದುಳಿದ ವರ್ಗದ ದೀವರ ಆಸಾಮಿ ಶಿವಾನಂದ ನಾಯ್ಕ ಮಂತ್ರಿಯಾಗಿದ್ದು ಆತನ ಗುರು ಅನಂತ್ಮಾಣಿಗೆ ಸಹಿಸಲಾಗಲಿಲ್ಲ. ಕಾಗೇರಿಯಂತೂ ಮೀನುಗಾಡಿ ಡ್ರೈವರ್ ಶಿವಣ್ಣ ಮಂತ್ರಿಯಾಗಿದ್ದಷ್ಟು ದಿನವೂ ನಿದ್ದೆಯೇ ಬೀಳಲಿಲ್ಲ. ಬ್ರಾಹ್ಮಣಶಾಹಿ ರಹಸ್ಯ ಕಾರ್ಯಾಚರಣೆ ನಡೆಸಿ ಶಿವಣ್ಣನ ಆಪೋಷ ಪಡೆದುಬಿಟ್ಟಿತು. ಜೆಡಿಎಸ್, ಕೆಜೆಪಿ ಎಂದೆಲ್ಲ ಒಂದು ಸುತ್ತು ಹೊಡೆದು ಮತ್ತೆ ಬಿಜೆಪಿ ತಲುಪುವ ಹೊತ್ತಿಗೆ ಶಿವಣ್ಣ ರಾಜಕೀಯವಾಗಿ ದಿವಾಳಿ ಎದ್ದುಹೋಗಿದ್ದರು. ಅದೇ ಸಂದರ್ಭದಲ್ಲಿ ಆರೋಗ್ಯವೂ ಕೈಕೊಟ್ಟಿತು. ನಿಧಾನಕ್ಕೆ ನೇಪಥ್ಯ ಸೇರಿದ ಶಿವಣ್ಣನ ವರ್ಚಸ್ಸಿಗೆ ಮಂಕು ಕವಿಯಿತು.


ದೇವ ಪಿತೃ ಯಡ್ಡಿಜೀ ರಾಜ್ಯ ಬಿಜೆಪಿ ಬಾಸ್ ಆಗುತ್ತಲೇ ಶಿವಣ್ಣನಲ್ಲಿ ಹೊಸ ಆಸೆ ಚಿಗುರಿತು. ಆರೋಗ್ಯ ಸಹಕರಿಸದಿದ್ದರೂ ಸಾವಕಾಶವಾಗಿ ಸಾರ್ವಜನಿಕರಿಗೆ ತೋರಿಸಿಕೊಳ್ಳತೊಡಗಿದ್ದಾರೆ. ಒಂದಂತೂ ಖರೆ. ಕೆಜೆಪಿಯಿಂದ 27 ಸಾವಿರದಷ್ಟು ಮತ ಪಡೆದಿದ್ದ ಈತ ಇವತ್ತಿಗೂ ಬಿಜೆಪಿಗೆ ಭಟ್ಕಳದಲ್ಲಿ ಬಲಾಢ್ಯ ಹುರಿಯಾಳು. ಆದರೆ ಶೂದ್ರ ವಿರೋಧಿ ಅನಂತ್ಮಾಣಿ ಯಾವ ಕಾರಣಕ್ಕೂ ಶಿವಣ್ಣನಿಗೆ ಮತ್ತೆ ಶಾಸಕನಾಗುವ ಛಾನ್ಸ್ ಸಿಗುವಂತಾಗ ಬಾರದೆಂಬ ಹಠಕ್ಕೆ ಬಿದ್ದಿದ್ದಾನೆ. ಶಿವಣ್ಣನ ಅನಾರೋಗ್ಯವನ್ನೇ ನೆಪ ಮಾಡಿಕೊಂಡು ಆತ ತಲೆ ಎತ್ತದಂತೆ ನೋಡಿಕೊಳ್ಳುತ್ತಿದ್ದಾನೆ. ತಾನು ಕಾಲಲ್ಲಿ ತೋರಿಸಿದ್ದು ತಲೆ ಮೇಲೆ ಹೊತ್ತುಕೊಳ್ಳುವ ಚೇಲಾನಿಗೆ ಟಿಕೆಟ್ ಕೊಡಿಸುವ ಕರಾಮತ್ತು ಶುರು ಹಚ್ಚಿಕೊಂಡಿದ್ದಾನೆ. ಶಿವಣ್ಣನ ಬಗ್ಗೆ ಸಿಂಪಥಿ ಇರುವ ಯಡ್ಡಿ ತನ್ನ ಮಾತು ಕಡೆಗಣಿಸುವ ಭಯವೂ ಅನಂತ್ಮಾಣಿಗಿದೆ. ಹಾಗಂತ ಆತ ಕಂತ್ರಿ ಕಸರತ್ತು ಮಾತ್ರ ನಿಲ್ಲಿಸಿಲ್ಲ. ಆದರೆ ಶಿವಣ್ಣ ಆರೋಗ್ಯ ಒಂದು ಸರಿಯಾದರೆ ಸಾಕು, ತಾನೇ ಬಿಜೆಪಿ ಕ್ಯಾಂಡಿಡೇಟ್ ಎನ್ನುತ್ತಿದ್ದಾರೆ.

ದೀವರಲ್ಲಿ ಶಿವಣ್ಣನಿಗೆ ಪರ್‍ಯಾಯವಾಗಿ ನಿಲ್ಲುವ ತಾಕತ್ತು ಯಾರಿಗಿದೆ ಎಂಬ ಹುಡುಕಾಟಕ್ಕೆ ಅನಂತ್ಮಾಣಿ ಬಿದ್ದಿದ್ದಾನೆ. ಆತನ ಕಣ್ಣಿಗೆ ಮೊದಲು ಕಂಡಿದ್ದು ಶಿರಾಲಿಯಲ್ಲಿ ಹೆಂಡ ಮಾರುವ ಹುಂಬ ಹುಡುಗ ಸುನಿಲ್ ನಾಯ್ಕ್. ಕಾಂಗ್ರೆಸ್‌ನಲ್ಲಿ ಅತೃಪ್ತಿಯಿಂದ ಚಡಪಡಿಸುತ್ತಿದ್ದ ಈ ಹುಡುಗನ ಕೈಯಲ್ಲಿ ಕುಣಿವ ಸಾರಾಯಿ ದಂಧೆಯ ಕುರುಡು ಕಾಂಚಾಣದ ಮೇಲೆ ಅನಂತ್ಮಾಣಿ ಕಣ್ಣು ಬಿದ್ದಿತ್ತು. ಸುನಿಲ್ ನಾಯ್ಕ್‌ನ ಮೈಗೆಲ್ಲಾ ಎಮ್ಮೆಲ್ಲೆಗಿರಿಯ ಬೆಲ್ಲ ಸವರಿದ ಅನಂತ್ಮಾಣಿ ಭಟ್ಕಳದ ಬಯಲಲ್ಲಿ ಬಿಟ್ಟುಬಿಟ್ಟ! ಹೇಗಾದರೂ ಮಾಡಿ ಶಾಸಕನಾಗಲೇಬೇಕೆಂಬ ತೆವಲಿಗೆ ಬಿದ್ದ ಸುನಿಲ್ ಪಾಪದ ಬುಡಕಟ್ಟು ಹುಡುಗರ ಕೈಗೆ ದನದ ಮಾಂಸದ ಪೊಟ್ಟಣ ಕೊಟ್ಟು ಹಿಂದೂ ದೇವಾಲಯದ ಅಂಗಳದಲ್ಲಿ ಎಸೆಯಲು ಕಳಿಸತೊಡಗಿದ. ಭಟ್ಕಳಕ್ಕೆ ಕೋಮು ಬೆಂಕಿ ಬಿದ್ದರೆ ಅದರಲ್ಲಿ ತಾನು ನಾಯಕನಾಗಿ ಹೊರಹೊಮ್ಮಬಹುದು ಎಂಬ ಯೋಚನೆ ಸುನಿಲನದಾಗಿತ್ತು. ಈ ಬೆಂಕಿ ನವಾಬಗಿರಿಯಿಂದಲೇ ಅಲ್ಲವೇ ಅನಂತ್ಮಾಣಿ ಎಂಪಿಯಾದದ್ದು; ಶಿವಣ್ಣ ಶಾಸಕ-ಸಚಿವನಾಗಿದ್ದು. ಇದೇ ಸುನಿಲ್‌ಗೆ ಆದರ್ಶ.

ಆದರೆ ಅನಂತ್ಮಾಣಿ-ಸುನಿಲ್ ಅಥವಾ ಸಂಘ ಪರಿವಾರದ ಗೋವಿಂದ ನಾಯ್ಕನಂಥವರು ಅಂದುಕೊಂಡಿದ್ದ ಕಮ್ಯುನಲ್ ಕೆಮಿಸ್ಟ್ರಿ ಈಗ ಭಟ್ಕಳದಲ್ಲಿ ಇಲ್ಲ. ಕಳೆದ ಅಸೆಂಬ್ಲಿ ಎಲೆಕ್ಷನ್ ಹೊತ್ತಿಂದ ದೀವರು-ದೀವರೇತರರು ಜಿದ್ದಾಜಿದ್ದಿ ಏರ್ಪಟ್ಟಿದೆ. ಎಸ್.ಎಂ. ಯಾಹ್ಯಾರ ನಿರ್ಗಮನದ ನಂತರ ಭಟ್ಕಳ ದೀವರ ಮೀಸಲು ಕ್ಷೇತ್ರ ಎಂಬಂತಾಗಿತ್ತು. ನಡುವೆ ಒಮ್ಮೆ ಚಿತ್ತರಂಜನ್ ಎಂಬ ಪಕ್ಕಾ ಚೆಡ್ಡಿ ಧರ್ಮಕಾರಣದಲ್ಲಿ ಗೆದ್ದದ್ದು ಬಿಟ್ಟರೆ ಅನಂತರ ಭಟ್ಕಳದಲ್ಲಿ ನಡೆದದ್ದು ದಿವರ ದರ್ಬಾರೇ! ಕ್ಷೇತ್ರದಲ್ಲಿ ದೀವರೇ ಬಹುಸಂಖ್ಯಾತರು ನಿಜ. ಆದರೆ ತೋಳ್ಬಲ-ಧನಬಲದ ದೀವರ ತಂಡಗಳು ಇಡೀ ಕ್ಷೇತ್ರದ ಆಗು-ಹೋಗುಗಳ ಮೇಲೆ ನಿಯಂತ್ರಣ ಸಾಧಿಸುತ್ತ ಹಾರಾಡಿದ್ದೇ ದೀವರಿಗೆ ಮುಳುವಾಯ್ತು. ಜನಿವಾರಿಗಳ ಚಿತಾವಣೆಗೆ ಬಲಿಬಿದ್ದ ಈ ದೀವರ ಪೋರರೇ ಕೋಮುಗಲಭೆಯ ಮುಂಚೂಣಿಯಲ್ಲಿ ನಿಂತು ಹೆಸರು ಕೆಡಿಸಿಕೊಳ್ಳುವಂತಾಯ್ತು. ಇದೆಲ್ಲ ಕ್ಷೇತ್ರದಲ್ಲಿನ ದೀವರೇತರರನ್ನು ಕೆರಳಿಸಿ ಸದ್ದಿಲ್ಲದೆ ಒಂದು ಮಾಡಿತ್ತು. ಇದನ್ನು ಸರಿಯಾಗಿ ಬಳಸಿಕೊಂಡ ಮಂಕಾಳ ವೈದ್ಯನೆಂಬ ದೋಸಂಬರ್ ದಂಧೆ ಡಾನ್ ಶಾಸಕನಾಗಿ ಅವತರಿಸಿಬಿಟ್ಟ.


ಜೆ.ಡಿ. ನಾಯ್ಕ್


ಮಂಕಾಳ ವೈದ್ಯ


ಶಿವಾನಂದ ನಾಯ್ಕ

ಯಾವಾಗ ದೀವರು ವಿರೋಧಿ ಅಲೆಯೆಬ್ಬಿಸಿ ಮೀನುಗಾರ ಸಂಕುಲದ ಮಂಕಾಳ ಶಾಸಕನಾದನೋ ಆಗ ದೀವರ ಧಣಿಗಳಿಗೆ ಕ್ಷೇತ್ರದ ಮೇಲಿನ ತಮ್ಮ ಹಿಡಿತ ತಪ್ಪುತ್ತಿರುವುದರ ಭಯ ಶುರುವಾಗಿದೆ. ಒಗ್ಗಟ್ಟಾಗದೇ ಬೇರೆ ಗತಿಯೇ ಇಲ್ಲವೆಂಬುದು ಪಕ್ಕಾ ಆಗಿದೆ. ಆದರೆ ದೀವರನ್ನು ಸಂಘಟಿಸಿ ಮುನ್ನಡೆಸುವ ಯೋಗ್ಯತೆ ಸುನಿಲ್ ನಾಯ್ಕ್, ಗೋವಿಂದ ನಾಯ್ಕ್, ಈಶ್ವರ ನಾಯ್ಕ್‌ನಂಥ ಎಮ್ಮೆಲ್ಲೆಗಿರಿ ತೆವಲಿಗೆ ಬಿದ್ದು ಒದ್ದಾಡುತ್ತಿರುವ ಚೆಡ್ಡಿ ಪಡ್ಡೆಗ... ಎಂಬುದು ಭಟ್ಕಳದಲ್ಲೀಗ ಬಹುಚರ್ಚಿತ ಸಂಗತಿ. ... ಸೂಕ್ಷ್ಮ ಕಂಪನ ಭಟ್ಕಳದಲ್ಲಿ ಬಿಜೆಪಿ ಧ್ವಜ ಹಾರಿಸಿ ಮ... ಹೆಚ್ಚಿಸಿಕೊಳ್ಳುವ ಯೋಚನೆಯಲ್ಲಿ ಇರುವ ಅನಂ... ತನಕ ತಲುಪಿದೆ! ಹೀಗಾಗಿ ಅನಂತ್ಮಾಣಿ ಇವತ್ತಿಗೂ ದಿ... ಸಮುದಾಯದಲ್ಲಿ ಚಲಾವಣೆ ಉಳಿಸಿಕೊಂಡಿರುವ ಕಾಂಗ... ಮಾಜಿ ಶಾಸಕ ಜೆ.ಡಿ. ನಾಯ್ಕರ ಬುಟ್ಟಿಗೆ ಹಾಕಿಕೊ... ಆಟ ಆರಂಭಿಸಿದ್ದಾನೆ.


ಕಳೆದ ವಾರ ಭಟ್ಕಳ ಪಟ್ಟಣದಲ್ಲಿರುವ ಜೆ.ಡಿ. ನಾ... ಮನೆಗೇ ನುಗ್ಗಿದ ಅನಂತ್ಮಾಣಿ ಮಾಳಿಗೆ ಮೇ... ಕೊಠಡಿಯಲ್ಲಿ ತಾಸುಗಟ್ಟಲೆ ರಹಸ್ಯ ಚರ್ಚೆ ನಡೆಸಿ... ಕಾಂಗ್ರೆಸ್ಸಿನಿಂದ ಎರಡು ಬಾರಿ ಶಾಸಕನಾಗಿದ್ದ 'ಚೆಡ್ಡಿ... ಧರ್ಮದ' ಜೆ.ಡಿ. ನಾಯ್ಕ್ ಎರಡು ವರ್ಷದ ಹಿಂದೆ... ಬಿಜೆಪಿಗೆ ನೆಗೆಯುವ ಯೋಚನೆ ಮಾಡಿದ್ದರು. ... ಯಾವುದಾದರೂ ಗೂಟದ ಕಾರನ್ನು ದೇಶಪಾಂಡೆ ಸಾಹ... ದಯಪಾಲಿಸಬಹುದೆಂಬ ಕೊನೆಯ ಆಸೆಯಲ್ಲಿ ಆತ ... ಉಳಿದಿದ್ದರು. ಪಕ್ಷೇತರನಾಗಿ ಗೆದ್ದ ಮಂಕಾಳ ವೈದ್ಯ ಕಾ... ಸಹಸದಸ್ಯನಾಗಿ ಕಳಾಯಿಸ ತೊಡಗಿದಾಗ... ಕಕ್ಕಾಬಿಕ್ಕಿಯಾಗಿದ್ದ ಜೆ.ಡಿ. ನಾಯ್ಕ್ 'ಇಲ್ಲಿರುವುದು ಸುಮ... ಎಂಬ ತೀರ್ಮಾನಕ್ಕೆ ಬಂದಿದ್ದರು. ಆದರೆ ಸುನಿ... ನಾಯ್ಕನನ್ನು ಅನಂತ್ಮಾಣಿ ಪ್ರೋತ್ಸಾಹಿಸುವ ಪರಿಗೆ ... ದಿಕ್ಕುತಪ್ಪಿ ಕಾಂಗ್ರೆಸಲ್ಲೇ ಉಳಿದುಕೊಂಡಿದ್ದರು. ತ... ಸೋಲಿಸಿದ್ದ ಮಂಕಾಳು ವೈದ್ಯನಿಗೆ ಕಾಂಗ್ರೆಸಲ್ಲಿ ಪ್ರಾಧಾ... ಪ್ರಾಮುಖ್ಯತೆ ಸಿಗುತ್ತಿರುವ ಪರಿಗೆ, ಮಂಕಾಳನ ಮಸಲ... ಜೆ.ಡಿ. ತತ್ತರಿಸಿಹೋಗಿದ್ದರು.

ಮನೆಗೆ ಬಂದಿದ್ದ ಅನಂತ್ಮಾಣಿ ಬಳಿ ಜೆಡಿ ಎಮ... ಟಿಕೆಟ್ ಡಿಮ್ಯಾಂಡ್ ಮಂಡಿಸಿದ್ದಾರೆ. ಇಂಥದೊಂದು ನಿ... ಮಾಣಿಗೂ ಇತ್ತು. ಆತ ಉತ್ತರ ರೆಡಿ ಮಾಡಿಕೊ... ಹೋಗಿದ್ದ. "ನಾಯ್ಕರೇ ನೀವು ಮೊದಲು ಪಾ... ಬನ್ನಿರಿ... ನಾನು ಯಡಿಯೂರಪ್ಪರ ಬಳಿ ಮಾತಾಡ್ತೇನ... ಟಿಕೆಟ್ ಕೊಡಿಸುವ ಪ್ರಯತ್ನವೂ ಮಾಡ್ತೇನೆ.... ಅಕಸ್ಮಾ... ಸಿಗದಿದ್ದರೆ ಬೇಜಾರು ಮಾಡಿಕೊಳ್ಳಬೇಡಿ... ನ... ಎಮ್ಮೆಲ್ಲೆಯಾದರೆ ತೆರವಾಗುವ ಎಂಪಿಗಿರಿ ಸ್ಥಾನ ನಿಮ... ಗ್ಯಾರಂಟಿ.... ಈಗ ಅರ್ಜೆಂಟಾಗಿ ನಾಮಧಾರಿ... ಸಂಘಟಿಸಬೇಕಾಗಿದೆ. ನಿಮ್ಮಂಥ ಹಿರಿಯರಿಂದ ... ಸಾಧ್ಯ.... ಬಿಜೆಪಿ ಅಧಿಕಾರಕ್ಕೆ ಬಂದಾಗ ಎಮ್ಮೆಲ್ಸಿ, ನಿಗ... ಮಂಡಳಿ, ಕೇಂದ್ರ ಕಮಿಟಿಗಳಲ್ಲಿ ಚಾನ್ಸ್ ಇದೆ.... ಯೋ... ಮಾಡಿ..." ಎಂದೆಲ್ಲ ಪುಸಲಾಯಿಸಿದ್ದಾನೆ. ಕಾಂಗ್ರೆ... ಮೂಲೆಗುಂಪಾಗಿದ್ದ ಗತಿಗೇಡಿ ಜೆಡಿ ಗೋಣು ಆಡಿಸಿದ... ಪಕ್ಷಾಂತರಕ್ಕೆ ಪುರೋಹಿತ ಯಡ್ಡಿ ಜತೆ ಮಾತ... ಮುಹೂರ್ತ ಫಿಕ್ಸ್ ಮಾಡುವೆನೆಂದು ಅನಂತ್ಮಾ... ಹೇಳಿಹೋಗಿದ್ದಾನೆ.

ಅಲ್ಲಿಗೆ ಕಾಂಗ್ರೆಸ್‌ನ ತಿರಸ್ಕೃತ ಸರಕು ಬಿ... ಪಾಲಾಗೋದು ಖಾತ್ರಿಯಾಗಿದೆ. ಅನಂತ್ಮಾಣಿ ಮ... ಜೆಡಿಯದು ಪಕ್ಷ ಬೇರೆ-ಬೇರೆಯಾದರೂ ಅನ್ಯೋ... ಗೆಳೆಯರು. ಜಿಲ್ಲೆಯ ರಾಜಕೀಯ ಇತಿಹಾಸದಲ್ಲಿ ... ಜೋಡಿ ಅನೈತಿಕ ಮೈತ್ರಿಯ ಒಂದು ಅಧ್ಯಾಯ... ಬರೆದಿದೆ. ಜೆಡಿ ಕಾಂಗ್ರೆಸ್ ಶಾಸಕನಾಗುವ ಮೊದ... ಮತ್ತು ಆ ನಂತರವೂ ಸಂಘಪರಿವಾರದ ಪಾತಕ... ವಕೀಲನೆಂದೇ ಪ್ರಸಿದ್ಧಿ ಪಡೆದಿದ್ದರು. ಕಾಂಗ್ರೆಸ್‌ನಿಂದ ಎ... ಸ್ಥಾನಕ್ಕೆ ಮ್ಯಾಗಿ ಸ್ಪರ್ಧಿಸಿದಾಗೆಲ್ಲ ಈ ಜೆಡಿ ಹಿಂದೂತ್ವ... ಹರಿಕಾರ ಅನಂತ್ಮಾಣಿ ಪರ ರಹಸ್ಯ ಕಾರ್ಯಾಚ...

⏭ 05

## ತಂಜೀಮ್ ತಂತ್ರಗಾರಿಕೆ


ಮುಜಾಮಿಲ್ ಖಾಜಿಯಾ


ಭಟ್ಕಳ ನವಾಯತ್ ಮುಸ್ಲಿಮರ ಅತ್ಯುಚ್ಚ-ಪ್ರಖ್ಯಾತೀತ ಧಾರ್ಮಿಕ-ರಾಜಕೀಯ-ಸಾಮಾಜಿಕ ಸಂಸ್ಥೆ ತಂಜೀಮ್. ನಿಧಾನಕ್ಕೆ ಚುನಾವಣಾ ತಲ್ಲಣ ತಂಜೀಮ್‌ನಲ್ಲಿ ಶುರುವಾಗುತ್ತಿದೆ. ತಂಜೀಮ್‌ನ 'ಫತ್ವಾ'ದಂತೆಯೇ ನವಾಯತರು ಓಟು ಹಾಕೋದು. ಈ ಸಲ ನವಾಯತರಿಗೆ ಕಾಂಗ್ರೆಸ್ ಟಿಕೆಟ್ ಕೊಡಬೇಕೆಂಬ ಬೇಡಿಕೆ ತಂಜೀಮ್ ಸರದಾರರು ಮಂಡಿಸಿದ್ದಾರೆ. ಡಿಸ್‌ಮಿಸ್ಡ್ ಜಡ್ಜ್-ಸಾಂಬಾರ ಮಂಡಳಿಯ ಮಾಜಿ ಅಧ್ಯಕ್ಷ ಮಹ್ಮದ್ ಮುಜಾಮಿಲ್ ಖಾಜಿಯಾಗೆ ಟಿಕೆಟ್ ಕೊಡುವಂತೆ ತಂಜೀಮ್ ಕೇಳುತ್ತಿದೆ. ಶಾಸಕ ಮಂಕಾಳ ವೈದ್ಯನ ಸ್ಪೀಡಿಗೆ ಬ್ರೇಕ್ ಹಾಕಲು ದೇಶಪಾಂಡೆ ಮುಜಾಮಿಲ್‌ಗೆ ಕುಮ್ಮಕ್ಕು ಕೊಡುತ್ತಿದ್ದಾರೆ. ಕೋಮು ರಾಜಕಾರಣದ ಅಖಾಡದಂತಾಗಿರುವ ಭಟ್ಕಳದಲ್ಲಿ ಮುಸ್ಲಿಮ್ ಹುರಿಯಾಳು ಗೆಲ್ಲುವುದು ಸಾಧ್ಯವೇ ಇಲ್ಲ. ಇದರಿಂದ ಕಾಂಗ್ರೆಸ್‌ಗೆ ಹಾನಿಯಾಗಿ ಬಿಜೆಪಿಗೆ ಅನುಕೂಲವಾಗುತ್ತದೆ.


ಇನಾಯಿತುಲ್ಲಾ ಶಾಬಂದ್ರಿ

ಶಾಸಕ ಮಂಕಾಳ ವೈದ್ಯನ ಬಗ್ಗೂ ತಂಜೀಮ್‌ನಲ್ಲಿ ಒಳ್ಳೆಯ ಅಭಿಪ್ರಾಯವಿಲ್ಲ. ಈತ ಡಬ್ಬಲ್‌ಗೇಮ್ ಪ್ರವೀಣನೆಂಬುದು ತಂಜೀಮ್‌ನವರ ಆಕ್ಷೇಪ. ಕಳೆದ ಬಾರಿ ಜೆಡಿಎಸ್‌ನಿಂದ ಸ್ಪರ್ಧಿಸಿ ಎರಡನೇ ಸ್ಥಾನಕ್ಕೆ ಬಂದಿದ್ದ ಇನಾಯಿತುಲ್ಲಾ ಶಾಬಂದ್ರಿ ಬಗ್ಗೂ ತಂಜಿಮಲ್ಲಿ ಅಪಸ್ವರಗಳಿವೆ. ಪಕ್ಷೇತರನಾಗಿ ಸ್ಪರ್ಧಿಸಲೋ? ಕಾಂಗ್ರೆಸ್ ಕ್ಯಾಂಡಿಡೇಟಾಗಲೋ? ಎಂಬ ಗೊಂದಲದಲ್ಲಿರುವ ಶಾಸಕ ಮಂಕಾಳಗೆ ದಿಕ್ಕು ತಪ್ಪಿಸಿರುವುದೇ ತಂಜೀಮ್ ತಂತ್ರಗಾರಿಕೆ. ದೀವರ ಧ್ರುವೀಕರಣ ಮಾಡುವ ಅನಂತ್ಮಾಣಿಯ ಹಿಕಮತ್ತಿನಿಂದ ಮಂಕಾಳ್‌ಗೆ ಯಾವ ದೋಖಾ ಇಲ್ಲ. ಏಕೆಂದರೆ, ಕಳೆದ ನಾಲ್ಕು ವರ್ಷದಿಂದ ಈಗ ಅನಂತ್ಮಾಣಿ ಗಾಳ ಹಾಕಿ ಹಿಡಿಹಿಡಿದು ತಂದು ಬಿಜೆಪಿ ಬುಟ್ಟಿಗೆ ಹಾಕುತ್ತಿರುವ ದೀವರ ಲೀಡರ್‌ಗಳೆಲ್ಲ ಶಾಸಕ ಮಂಕಾಳ್‌ಗೆ ತಿರುಗಿ ನಿಂತವರೇ. ಇವರಿಂದ ಮಂಕಾಳ್‌ಗೆ ಏನೇನೂ ಹಾನಿಯಾಗಲ್ಲ.

ಆದರೆ ತಂಜೀಮ್ ತಿರುಗಿಬಿದ್ದರೆ ಮಂಕಾಳ ಮಕಾಡೆ ಬೀಳುವಂತಾಗುತ್ತದೆ. ತಂಜೀಮ್ ಜೆಡಿಎಸ್ ಮೂಲಕ ಕ್ಯಾಂಡಿಡೇಟು ಹಾಕದಂತೆ ಆತ ಕರಾಮತ್ತು ನಡೆಸಿದ್ದಾರೆ. ತಂಜೀಮ್‌ನಲ್ಲಿಯ ಒಡಕು ಬಳಸಿಕೊಂಡು ಕಾಂಗ್ರೆಸ್ ಕ್ಯಾಂಡಿಡೇಟಾಗುವ ಯೋಚನೆ ಮಂಕಾಳನದು. ಅಕಸ್ಮಾತ್ ತಂಜೀಮ್ ಅಭ್ಯರ್ಥಿ ಹಾಕಿದರೆ ಆಗ ಮಂಕಾಳ ಮಾಮು ಪಕ್ಷೇತರನಾಗಿ ಅಖಾಡಕ್ಕೆ ಇಳಿವ ಪ್ಲಾನು ಹಾಕಿದ್ದಾರೆ. ಆಗ ದೀವರು v/s ದೀವರೇತರರ ಹಣಾಹಣಿಗೆ ಖದರು ಬರುತ್ತದೆ. ಯಾವ ಆ್ಯಂಗಲ್‌ನಿಂದ ನೋಡಿದರೂ ಭಟ್ಕಳದ ರಾಜಕಾರಣ ಧರ್ಮಕಾರಣದಿಂದ ಜಾತಿಕಾರಣಕ್ಕೆ ಮಗ್ಗಲು ಬದಲಿಸಿರುವುದು ಸ್ಪಷ್ಟವಾಗುತ್ತದೆ!!

# ಸೊರಬ: ಯಡ್ಡಿ ಚೆಡ್ಡಿ ಕಿಸೆ ಸೇರಿದ ಕುಬಂ!!



ಬಿಜೆಪಿ ಭಂಡರ ದಿವಾಳಿಕೋರ ರಾಜಕಾರಣ ...ದ ಪರಾಕಾಷ್ಠೆ ತಲುಪುತ್ತಿದೆ! 'ಸ್ವಂತ ಸಿದ್ಧಾಂತ'ದ ... ಕೇಸರಿ ಪಕ್ಷ ಕಟ್ಟಲಾಗದ ಮೋದಿ-ಶಾ-ಯಡ್ಡಿ ...ನ್ಯಾವುದೋ ಪಾರ್ಟಿಗೆ ಗಾಳ ಎಸೆದು ಬಾಯಿ ...ಕೊಂಡು ಕೂಡ್ರುವ ದರಿದ್ರ ಸ್ಥಿತಿ ತಲುಪಿದ್ದಾರೆ. ...ಕು ಆಪರೇಷನ್ ಕಮಲದ ಪಿತಾಮಹ ಯಡ್ಡಿ ...ದರೂ ಮಾಡಿ- ಹೇಗಾದರೂ ಮಾಡಿ ಸಿಎಂ ...ಕ್ಕೇರಲೇಬೇಕೆಂಬ ಹಪಾಹಪಿಯಲ್ಲಿ ಈ ಪಕ್ಷಾಂತರ ...ನ ಶುರು ಹಚ್ಚಿಕೊಂಡಿದ್ದಾರೆ. ತಿಂಗಳಿಗೆರಡು ಬಾರಿ ... ಪಕ್ಷದ ನಿರ್ಗತಿಕರಿಗಾಗಿ ಬಿಜೆಪಿ ಆಫೀಸಿನಲ್ಲೇ ...ತರ ಫಂಕ್ಷನ್ ಏರ್ಪಡಿಸುತ್ತೇನೆಂದು ಮಾನ-ಮರ್ಯಾದೆ ... ಹೇಳುತ್ತಿರುವ ಯಡ್ಡಿ ಈಗ ತವರು ಜಿಲ್ಲೆ ...ಮೊಗ್ಗದಲ್ಲಿ ನೆಲೆ ಗಟ್ಟಿಮಾಡಿಕೊಳ್ಳಬೇಕಾಗಿ ...ರುವುದು ಕುತೂಹಲಕರವಾಗಿದೆ.

...ಮ್ಮೆಲ್ಲೆ ಆಗಲು ಅರ್ಜೆಂಟಾಗಿ ಒಂದು ಅಸೆಂಬ್ಲಿ ...ಯಡ್ಡಿ ಮಹಾತ್ಮನಿಗೆ ಬೇಕಾಗಿದೆ. ಮೊದಲು ಆತನ ...ಆಜನ್ಮ ಎದುರಾಳಿ ಈಶ್ವರಿಯ ಶಿವಮೊಗ್ಗದ ಮೇಲೆ ...ತ್ತು. ಇದು ಗೊತ್ತಾಗಿದ್ದೇ ತಡ ಈಶ್ವರಿ ಸಂಗೊಳ್ಳಿ ...ಣ್ಣನ ಹೆಸರಿಗೆ ನೇತು ಬಿದ್ದು ಒದ್ದಾಡತೊಡಗಿದರು. ... ಯಡ್ಡಿಯನ್ನು ಮಣಿಸಿ ಸರಿದಾರಿಗೆ ತಂದುಕೊಂಡ ... ಶಿವಮೊಗ್ಗದಿಂದಲೇ ಸ್ಪರ್ಧಿಸುವ ಅವಕಾಶ ...ಹೈಕಮಾಂಡ್‌ನಿಂದಲೇ ಪಕ್ಕಾ ಮಾಡಿಕೊಳ್ಳಬೇಕಾಗಿ ಬಂತು. ...ಗಿ ಯಡ್ಡಿಗೆ ತವರು ಕ್ಷೇತ್ರ ಶಿಕಾರಿಪುರವೇ ಗತಿ ...ಂತಾಗಿದೆ. ಆದರೆ ಮಗ ರಾಘವೇಂದ್ರನನ್ನು ತನ್ನ ...ಮಂಡಲದ ಮಹತ್ವದ ಸಚಿವನಾಗಿ ಮಾಡಿಕೊಳ್ಳುವ ಆಸೆಯಿಟ್ಟುಕೊಂಡಿರುವ ಯಡ್ಡಿಗೆ ಶಿಕಾರಿಪುರದಿಂದ ...ಯುವ ಮನಸ್ಸಿಲ್ಲ.


...ಯಡ್ಡಿ ಲಿಂಗಾಯತರು ಹೆಚ್ಚಿರುವ ಭದ್ರಾವತಿ ಕ್ಷೇತ್ರದಿಂದ ...ಸಭೆಗೆ ಹೋಗುವ ಹೊಸ ಪ್ಲಾನ್ ಹೆಣೆಯುತ್ತಿರುವ ...ಳೀಗ ಹಬ್ಬತೊಡಗಿದೆ. ಮೊದಲು ಮಗ ರಾಘುಗೆ ಸೊರಬದಿಂದ ಸ್ಪರ್ಧೆಗಿಳಿಸಿ ತಾನು ಶಿಕಾರಿಪುರದಲ್ಲೇ ಇರುವ ಯೋಚನೆ ಮಾಡಿದ್ದ ಯಡ್ಡಿಗೆ ಅದ್ಯಾಕೋ ಅಷ್ಟು ಸುರಕ್ಷಿತ ಯೋಜನೆ ಅಲ್ಲವೆಂಬ ಆತಂಕ ಆರಂಭವಾಯ್ತು. ಮಧು ಬಂಗಾರಿ ಎದುರು ಬಿಜೆಪಿಯ ಹರತಾಳು ಹಾಲಪ್ಪ ಗೆಲ್ಲುವುದೂ ಕಷ್ಟವೆಂಬುದೂ ಆತನಿಗೆ ಪಕ್ಕಾ ಆಗಿತ್ತು. ರಾಘುನಂತೂ ಸೊರಬದಲ್ಲಿ ಗೆಲ್ಲುವುದು ಸಾಧ್ಯವೇ ಇರಲಿಲ್ಲ. ಹೀಗಾಗಿ ಯಡ್ಡಿ ಕಾಂಗ್ರೆಸ್‌ನಲ್ಲೇ ಮೂಲೆಗುಂಪಾಗಿದ್ದ ಕುಬಂಗೆ ಗಾಳ ಹಾಕಿದ್ದರು. ಅದೀಗ ವರ್ಕ್‌ಔಟ್ ಆಗಿದೆ. ನಾಯಿ ಹಸಿದಿತ್ತು ರೊಟ್ಟಿ ಹಳಸಿತ್ತು ಎಂಬ ಮಾತು ಯಡ್ಡಿ-ಕುಬಂಗೆ ಅರ್ಥವತ್ತಾಗಿ ಅನ್ವಯವಾಗುತ್ತದೆ. ಸೊರಬದ ರಾಜಕೀಯ ಅಂಗಳದಲ್ಲಿ ಯಡ್ಡಿಗೆ ದಿವಂಗತ 'ಬಂ' ಮೇಲಿರುವುದಕ್ಕಿಂತಲೂ ಹೆಚ್ಚು ಸೇಡು ಆತನ ಮುದ್ದಿನ ಮಗ ಮಧು ಬಂಗಾರಿ ಮೇಲಿದೆ. ತನ್ನ ಎದುರು ಅಕ್ಕ ಗೀತಾ ಶಿವರಾಜ್‌ಕುಮಾರ್‌ರನ್ನು ತಂದು ನಿಲ್ಲಿಸಿದ್ದ ಮಧು ಬಂಗಾರಿ ಹೆಸರೆತ್ತಿದರೆ ಯಡ್ಡಿ ಮುಖ ಕೆಂಪುಕೆಂಪಗೆ ಉರಿಯುತ್ತದೆ. ಹೆಂಡತಿ ಪರವಾಗಿ ಸ್ಟಾರ್ ಸಿನಿ ನಟ ಶಿವರಾಜ್‌ಕುಮಾರ್ ಪ್ರಚಾರಕ್ಕೆ ಬಂದಾಗ ನಿರಾಯಾಸ ಗೆಲ್ಲುವ ಉಮೇದಿಯಲ್ಲಿದ್ದ ಯಡ್ಡಿ ಒಂದಿಷ್ಟು ದಿನ ನಿದ್ದೆಗೆಡುವಂತಾಗಿತ್ತು. ಇದಕ್ಕೆಲ್ಲ ಕಾರಣನಾದ ಮಧುಬಂಗಾರಿಯನ್ನು ಶಾಸಕನಾಗದಂತೆ ಮಾಡುವ ಹಠಕ್ಕೆ ಬಿದ್ದಿರುವ ಯಡ್ಡಿ 'ಬಂ' ಫ್ಯಾಮಿಲಿ ರಾಜಕೀಯದ ದುರ್ಲಾಭ ಎತ್ತುವ ಹೊಂಚು ಹಾಕಿದ್ದರು. ಕಾಂಗ್ರೆಸ್‌ನಿಂದ ಪಾರ್ಲಿಮೆಂಟ್‌ಗೆ ಸ್ಪರ್ಧಿಸುವ ಅವಕಾಶ ಸಿಗದೆ ಮಂತ್ರಿ ಕಾಗೋಡು ತಿಮ್ಮಪ್ಪರ ವಿರುದ್ಧ ತಿರುಗಿಬಿದ್ದಿದ್ದ ಕುಬಂನ ಸೆಳೆದುಕೊಂಡರೆ ಆತ ಹರಿದುಹೋದ ತಾಳದ ಹಾಲಪ್ಪನಿಗಿಂತ ಬಲಾಢ್ಯ ಅಭ್ಯರ್ಥಿಯಾಗುತ್ತಾನೆಂಬುದು ಯಡ್ಡಿ ಲೆಕ್ಕಾಚಾರವಾಗಿತ್ತು.

ಹಾಗಂತ ಕುಬಂಗೆ ಬಿಜೆಪಿ ಸೇರುವ ಆಸೆಯೇನೂ ಇರಲಿಲ್ಲ. ಆತ ಯಾವುದಾದರೂ ನಿಗಮ-ಮಂಡಳಿಯ ಕಾರು ಪಡೆದುಕೊಂಡು, ಮುಂಬರುವ ಲೋಕಸಭೆ ಎಲೆಕ್ಷನ್‌ನಲ್ಲಿ ಕಾಂಗ್ರೆಸ್ ಅಭ್ಯರ್ಥಿಯಾಗುವ ದೂ(ದು)ರಾಲೋಚನೆಯಲ್ಲಿದ್ದರು. ಇದಕ್ಕೂ ಕಾಗೋಡು ತಿಮ್ಸ್ ಕಲ್ಲು ಹಾಕಬೇಕಾ? ದೀವರ ದೊರೆ ಕಾಗೋಡರ ಮಾತು ಕೇಳಿಯೇ ಹೆಡೆದ ಅಪ್ಪ 'ಬಂ' ವಿರುದ್ಧ ಬಿದ್ದು ರಾಜಕಾರಣ ಮಾಡಿದ ಕುಬಂಗೆ ಇಂಥದೊಂದು ದುರಂತ ತನಗೆ ಕಾಂಗ್ರೆಸ್‌ನಲ್ಲಿ ಬರಬಹುದೆಂಬ ಸಣ್ಣ ನಿರೀಕ್ಷೆಯೂ ಇರಲಿಲ್ಲ. ಅದೂ ನಂಬಿದ ಕಾಗೋಡರೇ ಕೈಕೊಟ್ಟಿದ್ದು ಕುಂಬರ ಕಣ್ಣು ಕೇಸರಿ ಪಕ್ಷದತ್ತ ಹೊರಳಲು ಕಾರಣವಾಗಿ ಹೋಯಿತು!

ಸೊರಬದಲ್ಲಿ ಯಡ್ಡಿ ಶಿಷ್ಯ-ರೇಪಿಸ್ಟ್ ಹರತಾಳು ಇಮೇಜ್ ಎಕ್ಕುಟ್ಟಿಹೋಗಿತ್ತು. ಚಟದಾರ ಹರತಾಳು ಗೆಲ್ಲುವ ಸಣ್ಣ ಸೂಚನೆಯೂ ಇಲ್ಲದಾಯ್ತು. ಶಾಸಕ ಮಧು 'ಬಂ' ದಿನಗಳೆದಂತೆ ಸೋದರರಾದ ಕುಬಂ ಮತ್ತು ಹರತಾಳುರ ಹೈರಾಣಾಗಿಸಿ ಕಸುವು ಪಡೆಯುತ್ತ ಸಾಗಿದ್ದರು. ಕುಬಂ ಮಧುಗೆ ಖಾಸಾ ಸೋದರನಾದರೆ, ಹರತಾಳು ದೊಡ್ಡಮ್ಮನ ಮಗ. ಮಧು ಬಂಗಾರಿಯ ವರಸೆಗಳು, ಅಪ್ಪನ ಛಲ, ಮುನ್ನುಗ್ಗುವ ಹಠ, ಜನರೊಂದಿಗೆ ಬೆರೆವ ಗುಣಗಳು ಆತನನ್ನು ಸೊರಬದಲ್ಲಿ ಎದುರಾಳಿಗಳಿಲ್ಲದ ನಾಯಕನನ್ನಾಗಿ ಮಾಡಿತ್ತು. ಜೆಡಿಎಸ್‌ನಿಂದ ಮಧು ಬಂಗಾರಿ, ಕಾಂಗ್ರೆಸ್‌ನಿಂದ ಕುಬಂ ಮತ್ತು ಬಿಜೆಪಿಯಿಂದ ಹರತಾಳು ಹಾಲಪ್ಪ ಸ್ಪರ್ಧಿಸಿದರೆ ಲಾಭವಾಗೋದು ಮಧುಗೇ ಎಂಬುದು ಹಳೆ ರಾಜಕೀಯ ಪಟು ಯಡ್ಡಿಗೆ ಪಕ್ಕಾ ಆಗಿಹೋಗಿತ್ತು.

ಮಧುನನ್ನು ಮಣಿಸಬೇಕೆಂದರೆ ಕುಬಂನ ಬಿಜೆಪಿಗೆ ತರುವುದೊಂದೇ ಉಪಾಯ ಎಂದುಕೊಂಡ ಯಡ್ಡಿ ಶಿಷ್ಯ ಹರತಾಳುಗೆ ಸಾಗರದಿಂದ ನಿಲ್ಲಿಸುವ ತಂತ್ರಗಾರಿಕೆಗೆ ಬಿದ್ದರು. ಹಾಗೊಂದು ವೇಳೆ ಹರತಾಳುಗೆ ತನ್ನ ಕ್ಷೇತ್ರ ಬಿಟ್ಟುಕೊಡಲು ಬೇಳೂರು ಗೋ-ಪಾಲಕೃಷ್ಣ ರೆಡಿಯಾಗದಿದ್ದರೆ ಇವರಲ್ಲಿ ಒಬ್ಬರಿಗೆ ಮುಂದೆ ಎಮ್ಮೆಲ್ಸಿ ಮಾಡುವ ಆಸೆ ಹುಟ್ಟಿಸುವ ಕಾರ್ಯಾಚರಣೆ ಮಾಡಲು ನಿರ್ಧರಿಸಿದರು. ಕುಬಂ ಬಿಜೆಪಿಗೆ ಬಂದರೆ ಆತ ಪ್ರಬಲ ಹುರಿಯಾಳಾಗುವುದು ಖರೆ. ಕುಬಂನೊಂದಿಗೆ ಸೊರಬದ ಇಡೀ ಕಾಂಗ್ರೆಸ್ ಬಿಜೆಪಿ ಪಾಲಾಗುವುದಂತೂ ಗ್ಯಾರಂಟಿ. ಕುಬಂನ ಈ ಓಟು ಬ್ಯಾಂಕ್ ಬಿಜೆಪಿ ಬುಟ್ಟಿಗೆ ಸೇರಿದರೆ ಮಧುಗೆ ಸಣ್ಣದೊಂದು ನಡುಕವಂತೂ ಶುರುವಾಗೋದು ಖಂಡಿತ. ಆಗ ಸೊರಬದಲ್ಲಿ ನೇರಾನೇರ ಸೋದರರ ಸವಾಲ್ ನಡೆಯುತ್ತದೆ. ಕತ್ತುಕತ್ತಿನ ಹಣಾಹಣಿಗೆ ಅಖಾಡ ಈಗಲೇ ಸಿದ್ಧವಾಗುವ ಲಕ್ಷಣ ಗೋಚರಿಸುತ್ತಿದೆ.

ಯಡ್ಡಿಗೆ ಪ್ರೀತಿಯ ಚೇಲ ಹರತಾಳು ಹಾಲಪ್ಪನ ರೇಪ್ ಕೇಸಿನದೇ ಭಯ. ಎಲೆಕ್ಷನ್ ಹತ್ತಿರಾದಂತೆ ಹಾಲಪ್ಪನ ಕೇಸ್ ನ್ಯಾಯಾಲಯದಲ್ಲಿ ರುಜುವಾಗುವ ಸಂದರ್ಭ ಬಂದರೆ ಆ ಅಂತಿಮ ಕ್ಷಣದಲ್ಲಿ ಸೊರಬದ ಅಖಾಡ ಹದಗೊಳಿಸೋದು ಅಸಾಧ್ಯ. ಹಾಗಾಗಿ ಯಡ್ಡಿ ಈಗಲೇ ಕುಬಂನ ಬಿಜೆಪಿಗೆ ಎಳೆದುಕೊಂಡು ಅಪ್ಪಿಮುದ್ದಾಡಲಾರಂಭಿಸಿದ್ದಾರೆ. ಹರತಾಳು ಹಾಲಪ್ಪನ ಮೂಲ ಕ್ಷೇತ್ರ ಹೊಸನಗರ ಸಾಗರದಲ್ಲಿ ವಿಲೀನವಾಗಿದೆ. ಹೀಗಾಗಿ ಬೇಳೂರು ಗೋಪಾಲನಿಗಿಂತ ಹರತಾಳೇ





ಸಾಗರದಲ್ಲಿ ಸೆಣಸಾಡಲು ಸಮರ್ಥನೆಂಬುದು ಯಡ್ಡಿ ವಿಚಾರ. ಅಲ್ಲದೆ, ತಾನು ಸಿಎಂ ಆಗಿದ್ದಾಗ ಬಂಡೆದ್ದು ಕಾಡಿದ್ದ ಗೋಪುಗೆ ಗತಿ ಕಾಣಿಸುವ ಸೇಡೂ ಯಡ್ಡಿಯಲ್ಲಿದೆ. ಇದೆಲ್ಲ ಹಾಲಪ್ಪನ ರೇಪ್ ಕೇಸು ಕೋರ್ಟ್‌ನಲ್ಲಿ ಫೈಸಲ್ ಆಗದಿದ್ದಾಗ ಮಾತ್ರ.


ಆದರೂ ಯಡ್ಡಿ ಗೋಪಾಲಕೃಷ್ಣನಿಗೆ ಎಮ್ಮೆಲ್ಸಿ ಮಾಡಿಸ್ತೇನೆ, ಕ್ಷೇತ್ರ ಬಿಟ್ಟುಕೊಡು ಎಂದು ಒತ್ತಡ ಹಾಕುತ್ತಿದ್ದಾರೆ. ಗೋಪು ಸುತರಾಮ್ ಒಪ್ಪುತ್ತಿಲ್ಲ. ಹಾಗೆ ಗೋಪುನ ಹಠವೇ ಜೋರಾದರೆ ಆಜ್ಞಾನುಧಾರಿ ಹರತಾಳುಗೆ ಎಮ್ಮೆಲ್ಸಿ ಮಾಡುವ ಮಾತುಕೊಟ್ಟು ಸಮಾಧಾನ ಮಾಡುವ ಧೈರ್ಯದಲ್ಲಿ ಯಡ್ಡಿಯಿದ್ದಾರೆ. ಬಿಜೆಪಿ ಒಳಗಿನ ಯಡ್ಡಿ ವಿರೋಧಿಗಳು ಕುಬಂನ ತೆಕ್ಕೆಗೆ ಎಳೆದುಕೊಂಡಿರುವ ಯಡ್ಡಿ ಆಟವನ್ನು ಬೇರೆ ರೀತಿಯಲ್ಲಿ ವ್ಯಾಖ್ಯಾನಿಸುತ್ತಿದ್ದಾರೆ. ಸ್ವತಃ ಯಡ್ಡಿಯೇ ಸೊರಬದಲ್ಲಿ ನಿಲ್ಲುವ ಯೋಚನೆಯಲ್ಲಿದ್ದಾರಂತೆ. ಕೌಟುಂಬಿಕ ರಾಜಕಾರಣದಿಂದಾಗಿ ಯಡ್ಡಿ ಮಗನಿಂದ ಶಿಕಾರಿಪುರ ಮರಳಿ ಪಡೆಯದ ದುಃಸ್ಥಿತಿಯಲ್ಲಿದ್ದಾರೆ. "ನೀನು ಶೋಭಾ ಕರಂದ್ಲಾಜೆಗೆ ಕೊಡುವಷ್ಟೇ ಮಹತ್ವ- ಮನ್ನಣೆ ರಾಘೂಗೂ ಕೊಡಬೇಕು" ಎಂದು ಯಡ್ಡಿ ಮಕ್ಕಳು, ಅಳಿಯಂದಿರು, ಸೊಸೆಯಂದಿರು ತಾಕೀತು ಮಾಡಿದ್ದಾರಂತೆ. ಹಾಗಾಗಿ ಸೊರಬವೇ ಯಡ್ಡಿಗೆ ಸೇಫಾಗಿ ಕಾಣಿಸುತ್ತಿದೆ. ಹರತಾಳು, ಕುಬಂ ಬೆನ್ನಿಗಿಟ್ಟುಕೊಂಡು ದೀವರ (ಈಡಿಗರ) ಮತ ಬಾಚಿದರೆ, ಸ್ವ-ಜಾತಿ ಲಿಂಗಾಯತರಂತೂ ಬೆಂಬಲಿಸಿಯೇ ಬೆಂಬಲಿಸುತ್ತಾರೆ. ಆಗ ಮಧು ಬಂಗಾರಿ ಸೋಲಿಸಬಹುದೆಂಬ ಗಣಿತ ಯಡ್ಡಿ ಹಾಕಿದ್ದಾರೆ.


ಶಿಕಾರಿಪುರಕ್ಕೆ ಅಂಟಿಕೊಂಡೇ ಇರುವ ಸೊರಬದ ಜಾತಿ ಕೆಮಿಸ್ಟ್ರಿ, ರಾಜಕೀಯ ಹವಾ ಭದ್ರಾವತಿಗಿಂತಲೂ ಯಡ್ಡಿಗೆ ಅನುಕೂಲಕರ. ಸದ್ಯಕ್ಕೆ ಕುಬಂ ಯಡ್ಡಿ ಮಾತು ನಂಬಿ ಕುಂತಿದ್ದಾರೆ. ಕಾಡುತ್ತಿರುವ ತಮ್ಮ ಮಧುನ ಮಣ್ಣು ಮುಕ್ಕಿಸುವ ರಣೋತ್ಸಾಹದಲ್ಲಿದ್ದಾರೆ. ಆದರೆ ಯಡ್ಡಿ ಯಡವಟ್ಟು ಮಾಡುವ ಸಾಧ್ಯತೆಯಂತೂ ಇದ್ದೇ ಇದೆ! ಕುಬಂ ಅಂದುಕೊಂಡಷ್ಟು ಸರಳ-ಸುಲಭ ಸಂದರ್ಭವೇನೂ ಕುಬಂಗೆ ಬಿಜೆಪಿಯಲ್ಲಿಲ್ಲ. ಯಡ್ಡಿ ಯಾರ್‍ಯಾರನ್ನು ಆಹುತಿ ಪಡೆಯುತ್ತಾರೋ?!

■ ಶುದ್ಧೋಧನ









---

⏮

...ದ್ದಾರೆ. ಇದು ಗೊತ್ತಾಗಿ ಮ್ಯಾಗಿ ಆತನಿಗೆ ಅಸೆಂಬ್ಲಿ ... ಕಟ್ ಮಾಡಲು ಪ್ರಯತ್ನಿಸಿದ್ದರು. ದೇಶಪಾಂಡೆ ...ಯಿಸಿದ್ದರು. ಮಜಾ ಎಂದರೆ ದೇಶಪಾಂಡೆ ಮಗ ...ರಿಗೆ ಸ್ಪರ್ಧಿಸಿದಾಗಲೂ ಈ ಜೆಡಿ ಅನಂತ್ಮಾಣಿಗೆ ...ಸಿದ್ದಾರೆ. ಅನಂತ್ಮಾಣಿ ಅಸೆಂಬ್ಲಿಗೆ ಜೆಡಿ ಸ್ಪರ್ಧಿಸಿದಾಗ ...ಸ್ವಪಕ್ಷದ ವೈರಿ ಶಿವಣ್ಣನ ಹಣಿಯಲೆಂದು ಉಲ್ಟಾ ... ನಡೆಸಿದ್ದರು.

...ಗ ಈ ಕಳ್ಳ ಗೆಳೆಯರು ಒಂದೇ ಪಕ್ಷದಲ್ಲಿರುವ ... ಕೂಡಿಬಂದಿದೆ. ಆದರೆ ಜೆಡಿಯಿಂದ ಬಿಜೆಪಿಗೆ ... ಲಾಭ ಅಷ್ಟಕ್ಕಷ್ಟೇ. ಈಗಾಗಲೇ ಶಾಸಕ ಮಂಕಾಳ ... ವಿರುದ್ಧ ಒಂದಾಗಿದ್ದಾರೆ. ಸಮರ್ಥ ದೀವರ ...ಡೇಟ್ ಯಾವ ಪಕ್ಷದಿಂದ ನಿಂತರೂ ಸರಿಯೇ ...ಳನ ಸೋಲಿಸಲು ದೀವರು ಪ್ರಯತ್ನಿಸುತ್ತಾರೆ. ಆಗ ...-ದೀವರೇತರರು ಎಂಬ ಜಿದ್ದಾಜಿದ್ದಿ ಭಟ್ಕಳದಲ್ಲಿ ...ಂದು ದೇಖಾವೆ ನಡೆಯುವುದಕ್ಕೆ ಯಾವ ...ನವೂ ಇಲ್ಲ! ಈಗ ದೀವರಲ್ಲಿ ಎದ್ದಿರುವ ಪ್ರಶ್ನೆ ...! ಅನಂತ್ಮಾಣಿ ಬಿಜೆಪಿ ಟಿಕೆಟ್ ಸುನಿಲ್‌ಗೆ ...ನಾ? ಜೆಡಿಗೆ ಅಖಾಡಕ್ಕೆ ಇಳಿಸ್ತಾನಾ? ಎಂಬ ... ಶುರುವಾಗಿದೆ. ಅಷ್ಟು ಸುಲಭಕ್ಕೆ ಸುನಿಲ್‌ನನ್ನು ...ಮಾಡಲು ಅನಂತ್ಮಾಣಿಯಿಂದ ಸಾಧ್ಯವಿಲ್ಲ. ಆತ ... ಮಾತು ನಂಬಿ ತಾನೇ ಕ್ಯಾಂಡಿಡೇಟೆಂದು ಹಣ ...ದ್ದಾನೆ. ಕೋಟಿಯು ಕಿತಾಪತಿ ಪ್ರೈವೇಟ್‌ಗೆ ...ದ್ದಾನೆ. ಭಟ್ಕಳ ಪಿಎಲ್‌ಡಿ ಬ್ಯಾಂಕ್‌ನ ಅಧ್ಯಕ್ಷ ಪಟ್ಟ ಉಳಿಸಿಕೊಳ್ಳಲು ಕೋರ್ಟು-ಕಚೇರಿಯೆಂದಲ್ಲ ಹಣ ವ್ಯಯಿಸಿದ್ದಾನೆ. ಅನಂತ್ಮಾಣಿ ಜತೆ ಭೂವ್ಯವಹಾರ ನಡೆಸಿ ಕಮ್ಮಿ ಎಂದರೂ ಎಂಬತ್ತು ಲಕ್ಷ ಕಳಕೊಂಡು ಗುಂಡಿಗೆ ಬಿದ್ದಿದ್ದಾನೆ. ಅನಂತ್ಮಾಣಿ ಒಲಿಸಿಕೊಳ್ಳಲು ಶಿರಸಿಯಲ್ಲಿದ್ದ ಆತನ ಪಾಳು ಭೂಮಿ ಬರೋಬ್ಬರಿ ಒಂದು ಕೋಟಿಗೆ ಸುನಿಲ್ ಖರೀದಿಸಿ ಮೋಸ ಹೋಗಿದ್ದಾನೆಂಬುದು ದೀವರ ಕೇರಿ-ಕೇರಿಗಳಲ್ಲಿ ಕವಳದ ಬಟ್ಟಲಿನ ಚರ್ಚೆಯಂತಾಗಿದೆ.

ಅನಂತ್ಮಾಣಿ ತೀರಾ ಈಚೆಗೆ ಶಿರಸಿಯ ವೈದ್ಯರ ಮೇಲೆ ಹಲ್ಲೆ ಮಾಡಿ ರಕ್ತ ಹರಿಸಿದನಲ್ಲ! ಆಗ ಕೇಸು ಬಿದ್ದಾಗ ಈ ಸ್ವಯಂಘೋಷಿತ ಪರಾಕ್ರಮಿ ಹೆದರಿ ಓಡಿಹೋಗಿದ್ದ. ತಲೆತಪ್ಪಿಸಿಕೊಂಡು ಈ ರೌಡಿ ಎಂಪಿ ತಿರುಗಾಡಿದ್ದೇ ಸುನಿಲ್‌ನ ಐಷಾರಾಮಿ ಕಾರಿನಲ್ಲಿ. ಸುನಿಲ್‌ನ ಕಾರು ಶಿರಸಿಗೆ ತರಿಸಿಕೊಂಡು ಅನಂತ್ಮಾಣಿ ಅದರಲ್ಲೇ ಪಲಾಯನ ಮಾಡಿದ್ದ. ಇಂಥ ಬಂಟನ ಕೈಬಿಡಲು ಅನಂತ್ಮಾಣಿಯಿಂದ ಸಾಧ್ಯವಾ? ಇಂಥದೊಂದು ಸಂದಿಗ್ಧ ಎದುರಾಗುವ ಮುನ್ಸೂಚನೆಯಿಂದಲೇ ಮಾಣಿ ಜೆಡಿಗೆ ಎಂಪಿ, ಎಮ್ಮೆಲ್ಸಿ, ನಿಗಮ-ಮಂಡಳಿಯಂಥ ತರತರದ ತುಪ್ಪ ಮೊಣಕೈಗೆ ಸವರಿದ್ದಾನೆ. ರಾಜಕಾರಣದ ದರಿದ್ರ ಹಂತ ತಲುಪಿರುವ ಜೆಡಿ ಏನು ಸಿಕ್ಕರೂ ಅದೇ ಪಂಚಾಮೃತ ಎಂಬ ದಯನೀಸಿ ಮನಸ್ಥಿತಿಯಲ್ಲಿದ್ದಾನೆ, ಪಾಪ! ಹಾಗಾಗಿ ಆತ ಬಿಜೆಪಿ ಸೇರೋದು ಮಾತ್ರ ಗ್ಯಾರಂಟಿ!!


ಜೆಡಿ ಮನೆಯಿಂದ ಹೊರಬಿದ್ದ ಅನಂತ್ಮಾಣಿ ಕಾಂಗ್ರೆಸ್‌ನ ಪಾಯಿಂದೆ ವೀರಿದ ಪುಢಾರಿಗಳ ಮನೆಗೆಲ್ಲ ಹೋಗಿಬಂದಿದ್ದಾನೆ. ಬಿಜೆಪಿ ಎಂದರೆ ವಿಭಿನ್ನ-ವಿಶಿಷ್ಟ ಪಕ್ಷ; ಹಿಂದೂತ್ವದ ಸಿದ್ಧಾಂತ ಹೊಸ ನಾಯಕರ ಸೃಷ್ಟಿಸುವ ಪಾರ್ಟಿ. ಪಕ್ಷಾಂತರಿಗಳು ನಮಗೆ ಬೇಡ ಎಂದೆಲ್ಲ ಬೊಬ್ಬಿರಿಯುವ ಅನಂತ್ಮಾಣಿ ಕಾಂಗ್ರೆಸ್-ಜೆಡಿಎಸ್‌ನ ಜಂಗು ಹಿಡಿದ ಲಡ್ಡು ಮಂದಿಗೆಲ್ಲ ದುಂಬಾಲು ಬೀಳುತ್ತಿರುವುದು ನಿರ್ಲಜ್ಜ ಜೋಕಿನಂತಿದೆ! ಬಿಜೆಪಿ ಎಂದರೆ ಅಧಿಕಾರಕ್ಕಾಗಿ ಎಂಥ ಕೊಳಕು ರಾಜಕಾರಣ, ಮನೆಹಾಳು ಮತಾಂಧತೆಗೆ ಹೇಸದ ಪಕ್ಷ ಎಂಬುದನ್ನು ಅನಂತ್ಮಾಣಿ ಸಾಬೀತು ಮಾಡುತ್ತಿದ್ದಾನೆ. ಈತ ಭಟ್ಕಳದ ಮತ್ತೊಬ್ಬ ತಿರಸ್ಕೃತ ಕಾಂಗ್ರೆಸಿಗನೂ-ಮಾಜಿ ಜಿಪಂ ಅಧ್ಯಕ್ಷನೂ ಆದ ದಾಮೋದರ ಗರ್ಡೀಕರ್ ಎಂಬಾತನ ಮನೆಗೂ ಹೋಗಿ ಪಕ್ಷಾಂತರಕ್ಕೆ ಪುಸಲಾಯಿಸಿದ್ದಾನೆ. ಈ ಗರ್ಡೀಕರ್ ಬಿಜೆಪಿಯ ಸ್ವಯಂಘೋಷಿತ ಎಮ್ಮೆಲ್ಲೆ ಕ್ಯಾಂಡಿಡೇಟ್ ಸುನಿಲ್ ನಾಯ್ಕನ ಖಾಸಾ ಸೋದರ ಮಾವ. ದೀವರ ನಡುವೆ ನೆಲೆ-ಬೆಲೆ ಇಲ್ಲ. ಈತ ಅಳಿಯನಿಗೆ ಟಿಕೆಟ್ ಖಾತ್ರಿಯೆಂದರಷ್ಟೇ ಬಿಜೆಪಿಗೆ ಬರುತ್ತೇನೆಂದು ಹೇಳಿಕಳಿಸಿದ್ದಾನೆ. ಏಕೆಂದರೆ, ಗರ್ಡೀಕರ್‌ಗೆ ಜೆಡಿ ಕಂಡರೆ ಆಗದು. ಇಬ್ಬರೂ ಭಟ್ಕಳದ ಬೀದಿಯಲ್ಲೇ ಕಬ್ಬಾಡಿಕೊಂಡ ಖ್ಯಾತಿಯ ಮುಖಂಡ ಮಣಿಗಳು. ಹಾಗೇ ಅನಂತ್ಮಾಣಿ ಕಾಂಗ್ರೆಸ್‌ನಲ್ಲಾಗಲಿ, ದೀವರ ಸಮಾಜದಲ್ಲಾಗಲಿ ಲೆಕ್ಕಕ್ಕೆ ಇಲ್ಲದ ಈರಪ್ಪ ಗರ್ಡೀಕರ್ ಎಂಬಾತನ ಪಾದಕ್ಕೂ ಬಿದ್ದು ಬಂದಿದ್ದಾನೆ.

ಹಿಂದೂ ಸಂಘಟನೆಯ ಮುಂಚೂಣಿಯಲ್ಲಿ ನಿಂತು ಊರಿಗೆಲ್ಲ ಬೆಂಕಿ ಹಾಕುತ್ತಿದ್ದ ಗೋವಿಂದ ನಾಯ್ಕ, ಒಂಥರಾ ತಬ್ಬಲಿಯಾಗಿ ಈಗ ಅನಂತ್ಮಾಣಿಗೆ ಶಾಪ ಹಾಕುತ್ತ ಒದ್ದಾಡುತ್ತಿದ್ದಾನೆ. ಅನಂತ್ಮಾಣಿ ನಂಬಿ ಗೋವಿಂದ ನಾಯ್ಕ ಕೆಟ್ಟಿದ್ದಾನೆ, ಪಾಪ. ಆದರೆ ಸಂಘ ಪರಿವಾರ ಗೋವಿಂದ ನಾಯ್ಕನಿಗೇ ಟಿಕೆಟ್ ಕೊಡುವಂತೆ ಒತ್ತಾಯಿಸುತ್ತಲೇ ಇದೆ. ಕಳೆದ ಬಾರಿ ಬಿಜೆಪಿಯಿಂದ ಸ್ಪರ್ಧಿಸಿದ್ದ ಗೋವಿಂದ ನಾಯ್ಕ 'ಗುರು' ಅನಂತ್ಮಾಣಿ ಬಲ ಸಿಕ್ಕರೂ ಪಡೆದದ್ದು ಮಾತ್ರ ಆರೇಳು ಸಾವಿರ ಮತ! ಕಾಗೇರಿ ಬಣದ ಕಳಪೆ ಕಂಟ್ರಾಕ್ಟರ್ ಖ್ಯಾತಿಯ ಕಾಸ್ಕೋರ್ಡ್ ಬ್ಯಾಂಕಿನ ಉಪಾಧ್ಯಕ್ಷ ಈಶ್ವರ ನಾಯ್ಕ, ತಾನೇ ಕ್ಯಾಂಡಿಡೇಟೆಂದು ಶಂಖ ಊದುತ್ತಿದ್ದಾನೆ. ಆತ ಕಾಗೇರಿಯೊಬ್ಬನನ್ನೇ ನಂಬಿ ಕೂತಿಲ್ಲ. ಹಾವೇರಿ ಎಂಪಿ ಶಿವಕುಮಾರ ಉದಾಸಿ ಮೂಲಕ ಈತ ಲಾಬಿ ನಡೆಸಿದ್ದಾನೆ. ಶಿವಕುಮಾರನ ತಂದೆ ಸಿ.ಎಂ. ಉದಾಸಿ ಯಡ್ಡಿ ಸರ್ಕಾರದಲ್ಲಿ ಲೋಕೋಪಯೋಗಿ ಮಂತ್ರಿಯಾಗಿದ್ದಾಗ ಈ ಈಶ್ವರ ನಾಯ್ಕ ಕಳ್ಳ ಬಿಲ್ ಮಾಡಿಸಿಕೊಂಡು ಶಿವಕುಮಾರ್‌ಗೆ ಪಾಲು ಕೊಡುತ್ತಿದ್ದ ತರಹೇವಾರಿ ಕತೆಗಳು ಕಂಟ್ರಾಕ್ಟರ್ಸ್ ವಲಯದಲ್ಲಿ ಇವತ್ತಿಗೂ ಚಾಲ್ತಿಯಲ್ಲಿದೆ.

ಒಟ್ನಾರೆ ಭಟ್ಕಳ ಬಿಜೆಪಿಯಲ್ಲಿ ನಡೆಯುತ್ತಿರುವ ಹೇತ್ಲಾಂಡಿ ಪುಢಾರಿಗಳ ನೂಕುನುಗ್ಗಲೇ ಆ ಪಾರ್ಟಿಯನ್ನು ಜಖಂ ಮಾಡುವ ಲಕ್ಷಣ ಗೋಚರಿಸುತ್ತಿದೆ. ಅನಂತ್ಮಾಣಿ ಒಂದು ಕಡೆಯಿಂದ ದೀವರ ಸಂಘಟಿಸಲು ಎಲ್ಲೆಲ್ಲಿಂದಲೋ ಆ ಜಾತಿ ನಾಯಕರನ್ನು ಬಿಜೆಪಿಗೆ ತರುತ್ತಿದ್ದಾನೆ. ಮತ್ತೊಂದೆಡೆ ಟಿಕೆಟ್ ಆಸೆ ಹುಟ್ಟಿಸಿ ದೀವರ ನಡುವೆ ಗುಂಪುಗಾರಿಕೆ ಸೃಷ್ಟಿಸುತ್ತಿದ್ದಾನೆ. ದೀವರೇತರರಿಗೂ ಎಂಪಿ ಮಾಣಿ ದೀವರು ಕೇಂದ್ರಿತ ರಾಜಕಾರಣ ಮಾಡೋದು ಹೇಸಿಗೆ ಮೂಡಿಸಿ ಬಿಟ್ಟಿದೆ.

■ ನಹುಷ

# ದಿಲ್ಲಿ ವಿವಿ: ಎಬಿವಿಪಿಯ ಕ್ಯಾಂಪಸ್ ರಗಳೆ
# ಬೊಗಳೆ ಸಾರ್ ಬೊಗಳೆ




ಇದು ಯು.ಆರ್.ಅನಂತಮೂರ್ತಿಯವರು ಮತ್ತೆಮತ್ತೆ ನೆನಪಾಗುವ ಹೊತ್ತು!

ಅವರು ಯಾವ ಆತಂಕದ ಕ್ಷಣಗಳನ್ನು ಅಂದಾಜಿಸಿ 'ಮೋದಿ ಪ್ರಧಾನಿಯಾದ ಭಾರತದಲ್ಲಿ ನಾನಿರಲಾರೆ' ಅಂದಿದ್ದರೋ ಅದೀಗ ಅಕ್ಷರಶಃ ದಿಟಗೊಳ್ಳುತ್ತಿದೆ. ಸಂಘಪರಿವಾರದ ಕೂಟಗಳು ಒಂದೊಂದಾಗಿ ಈ ನೆಲದ ಪ್ರಜಾಸತ್ತೆಯ ಮೇಲೆ ದಾಳಿ ನಡೆಸುತ್ತಿವೆ.

ಘರ್‌ವಾಪ್ಸಿ, ಭಾರತದ ಬಹುತ್ವ ನಾಶ, ಅಸಹಿಷ್ಣುತೆ, ಕೋಮುದಳ್ಳುರಿ, ದಲಿತ-ದಮನ, ದ್ವೇಷ-ಭಾಷಣಗಳಂತಹ ಅತಿರೇಕಗಳು ಹದ್ದುಮೀರಿವೆ. ಸಂಘ ಪರಿವಾರದ ಪ್ರಧಾನ ಶಾಖೆಗಳಂತೆಯೇ ಅದರ ವಿದ್ಯಾರ್ಥಿ ಘಟಕ ಎಬಿವಿಪಿ ಕೂಡಾ ದೇಶದ ಅಕ್ಯಾಡೆಮಿಕ್ ವಾತಾವರಣವನ್ನು ಕೇಸರಿಮಯವಾಗಿಸಲು ಕುತರ್ಕದ ಕಸರತ್ತು ನಡೆಸುತ್ತಿರೋದು ರಹಸ್ಯವಾಗೇನೂ ಉಳಿದಿಲ್ಲ. ಜೆ.ಎನ್ ಯೂನಿವರ್ಸಿಟಿಯ ಕನ್ಹಯ್ಯ ಪ್ರಕರಣವಿರಬಹುದು, ಜೋಧ್‌ಪುರದ ವ್ಯಾಸ ಯೂನಿವರ್ಸಿಟಿಯ ನಿವೇದಿತ ಮೆನನ್ ಪ್ರಕರಣವಿರಬಹುದು, ಹರ್ಯಾಣ ಯೂನಿವರ್ಸಿಟಿಯ ಸ್ನೇಹಸ್ತಾ ಮಾನವ್ ಮತ್ತು ಮನೋಜ್ ಕುಮಾರ್ ಪ್ರಕರಣವಿರಬಹುದು, ಕೊಲ್ಕೊತ್ತಾ ವಿವಿಯ ಮಾರಾಮಾರಿ ಇರಬಹುದು, ಇಲ್ಲೆಲ್ಲ ಆರಂಭದಲ್ಲಿ ಬೊಬ್ಬಿರಿದಿದ್ದ ಎಬಿವಿಪಿ ತಾರ್ಕಿಕ ಅಂತ್ಯದ ವೇಳೆಗೆ ವಿಷಯವಸ್ತುವಿನಿಂದ ಪಲಾಯನಗೈಯುತ್ತಾ ಬಂದಿರೋದನ್ನು ನಾವು ನೋಡಿದ್ದೇವೆ. ಅದರಲ್ಲೂ ಹೈದರಾಬಾದ್ ಕೇಂದ್ರೀಯ ವಿವಿಯ ದಲಿತ ವಿದ್ಯಾರ್ಥಿ ರೋಹಿತ್ ವೇಮುಲನ ಸಾಂಸ್ಥಿಕ ಹತ್ಯೆಯಲ್ಲಿ ಎಬಿವಿಪಿಯೇ ಪ್ರಧಾನ ಆರೋಪಿ. ಇದೀಗ ಮತ್ತೆ ಎಬಿವಿಪಿ ಗುಲ್ಲೆಬ್ಬಿಸಿರುವ ದೆಹಲಿ ಯೂನಿವರ್ಸಿಟಿಯ ಗುರ್‌ಮೆಹರ್ ಕೌರ್ ಪ್ರಕರಣದಲ್ಲೂ ಅದರ 'ದೇಶದ್ರೋಹಿ' ಆರಚಾಟವನ್ನು ಸಾಬೀತು ಪಡಿಸುವಂತಹ ಲವಲೇಶ ಧಾತುವೂ ಇಲ್ಲ, ಒನ್ಸ್ ಎಗೇನ್, ಬೊಗಳೆ... ಬರೀ ಬೊಗಳೆ!

### ಅದೆಲ್ಲ ಶುರುವಾದದ್ದು...

'ನನ್ನ ತಂದೆಯನ್ನು ಕೊಂದದ್ದು ಯುದ್ಧವೇ ಹೊರತು ಪಾಕಿಸ್ತಾನವಲ್ಲ' ಎಂಬರ್ಥದ ಪ್ಲೇಕಾರ್ಡ್ ಹಿಡಿದು ಗುರ್‌ಮೆಹರ್ ಕೌರ್ 'ದೇಶದ್ರೋಹ'ದ ಕೃತ್ಯವೆಸಗಿದ್ದಾಳೆ ಅಂತ ಎಬಿವಿಪಿ ಯಾವ ವೀಡಿಯೋವನ್ನು ಮುಂದಿಡುತ್ತಿದೆಯೋ ಅದು ಹೆಚ್ಚೂಕಮ್ಮಿ ಒಂದು ವರ್ಷದಷ್ಟು ಹಳೆಯ ವೀಡಿಯೋ. ಇಪ್ಪತ್ತು ವರ್ಷ ವಯಸ್ಸಿನ ಆ ದಿಟ್ಟ ತರುಣಿ ಕೌರ್, ದಿಲ್ಲಿ ಯೂನಿವರ್ಸಿಟಿಯ ಲೇಡಿ ಶ್ರೀರಾಂ ಕಾಲೇಜಿನ ವಿದ್ಯಾರ್ಥಿನಿ. ಆಕೆಯ ತಂದೆ ಕ್ಯಾಪ್ಟನ್ ಮನ್‌ದೀಪ್ ಸಿಂಗ್ 1999ರಲ್ಲಿ ಕಾರ್ಗಿಲ್ ಯುದ್ಧದ ಕರಾಳಛಾಯೆಯ ಬೆನ್ನಿಗೆ ಹುತಾತ್ಮರಾದಂತವರು. ಆಗಿನ್ನೂ ಗುರ್‌ಮೆಹರ್ ಎರಡು ವರ್ಷದ ಹಸುಗೂಸು! ತಂದೆಯಿಲ್ಲದ ಅನಾಥಪ್ರಜ್ಞೆಯಲ್ಲಿ ಬೆಳೆದುಬಂದ ಗುರ್‌ಮೆಹರ್‌ಗೆ ತನ್ನೊಳಗಿನ ವೇದನೆಯನ್ನೆಲ್ಲ ಕೊಡವಿಕೊಳ್ಳಬೇಕು ಅನ್ನಿಸಿದ್ದೇ ತಡ, ವರ್ಷದ ಹಿಂದೆ ಈ ವೀಡಿಯೋ ಚಿತ್ರೀಕರಿಸಿ ಸಾಮಾಜಿಕ ಜಾಲತಾಣಗಳಿಗೆ ಹರಿಬಿಟ್ಟಿದ್ದಳು. ಆಗಿನಿಂದಲೂ ಅದನ್ನು ಸುಮಾರಷ್ಟು ಜನ ನೋಡುತ್ತಲೇ ಬಂದಿದ್ದಾರೆ. ಆದರೆ ಯಾರೊಬ್ಬರೂ ಚಕಾರವೆತ್ತಿರಲಿಲ್ಲ, ಯಾಕೆಂದರೆ ಇಡೀ ವೀಡಿಯೋವನ್ನು ನೋಡಿದ ಎಂತವರಿಗೇ ಆದರೂ, ಭಾರತ-ಪಾಕ್ ಸಂಕೀರ್ಣ ಸಂಬಂಧವನ್ನು ತುಂಬಾ ಸರಳವಾಗಿ ತರ್ಕಿಸಿರುವ ಆಕೆಯ ಮುಗ್ಧತೆಯ ಹೊರತಾಗಿಯೂ, ಗುರ್‌ಮೆಹರ್‌ಳ ಮಾನವೀಯತೆಯ ಕಳಕಳಿ ಎದ್ದು ಕಾಣುತ್ತಿತ್ತೆ ವಿನಾಃ 'ದೇಶದ್ರೋಹ'ದ ಕುತರ್ಕವಲ್ಲ (ವೀಡಿಯೋದ ಸಂಪೂರ್ಣ ಸಂಭಾಷಣೆಯನ್ನು ಬಾಕ್ಸ್‌ನಲ್ಲಿ ನೀಡಿದೆ).

ಹಾಗಾದರೆ, ಎಬಿವಿಪಿ ಮುಗಿದುಹೋದ ಅಧ್ಯಾಯಕ್ಕೆ 'ತಿರುಚು'ಜನ್ಮ ನೀಡಿದ್ದೇಕೆ?


ಎಬಿವಿಪಿ ವಿರುದ್ಧ ಕ್ಯಾಂಪಸ್ ಹೋರಾಟ

ಅಸಲಿ ವಿಷಯ ಇರೋದೆ ಇಲ್ಲಿ!

'ನನ್ನ ತಂದೆಯನ್ನು ಕೊಂದದ್ದು ಪಾಕಿಸ್ತಾನ ಅಲ್ಲ, ಯುದ್ಧ' ಎಂಬ ಪ್ಲೇಕಾರ್ಡನ್ನು ಹಿಡಿದಂತೆಯೇ ಇತ್ತೀಚೆಗೆ ಇನ್ನೊಂದು ಪ್ಲೇಕಾರ್ಡ್ ಹಿಡಿದು ಫೋಟೋ ತೆಗೆಸಿಕೊಂಡಿದ್ದ ಗುರ್‌ಮೆಹರ್ ಅದನ್ನು ತನ್ನ ಫೇಸ್‌ಬುಕ್ ಪ್ರೊಫೈಲ್ ಪಿಕ್ಚರ್ ಆಗಿ ಅಪ್‌ಲೋಡ್ ಮಾಡಿದ್ದಳು. ಎಬಿವಿಪಿಯ ಸಿಟ್ಟನ್ನು ಕೆರಳಿಸಿದ್ದೇ ಆ ಫೋಟೋ. ಯಾಕೆಂದರೆ ಆ ಪ್ಲೇಕಾರ್ಡ್‌ನಲ್ಲಿ ಗುರ್‌ಮೆಹರ್ 'ನಾನು ದೆಹಲಿ ವಿವಿಯ ವಿದ್ಯಾರ್ಥಿನಿ. ನಾನು ಎಬಿವಿಪಿಗೆ ಹೆದರುವುದಿಲ್ಲ, ನಾನು ಏಕಾಂಗಿಯೇನಲ್ಲ, ಭಾರತದ ಪ್ರತಿಯೊಬ್ಬ ವಿದ್ಯಾರ್ಥಿಯು[...] ನನ್ನೊಟ್ಟಿಗಿದ್ದಾನೆ' ಅಂತ ಬರೆದುಕೊಂಡು ಎಬಿವಿಪಿಗೆ [...] ಕೊಟ್ಟಿದ್ದಳು. ತನ್ನನ್ನು ಹೀಗೆ ನೇರಾನೇರ ಅಳಿದ ಗು[...]ಮೆಹರ್‌ಳ ಮೇಲೆ ಎಬಿವಿಪಿ ಜರೂರಾಗಿ ದಾಳಿ ಮಾ[...] ಬೇಕಿತ್ತು, ಆದರೆ ಈ ಕಾರಣ ಇಟ್ಟುಕೊಂಡು ಆಕೆಯನ್ನ[...] ದಾಳಿಯ ವಸ್ತುವಾಗಿಸಿಕೊಂಡರೆ ತಾವು ಜನರ ಕಣ್ಣಿನ[...] ವಿಲನ್ ಆಗುತ್ತೇವೆನ್ನುವುದು ಕೇಸರಿ ಪ್ರಭೃತಿಗಳಿಗೆ ಚೆನ್ನಾ[...] ಗೊತ್ತಿತ್ತು, ಹಾಗಾಗಿಯೇ ಅವಳನ್ನು ತಪ್ಪಿತಸ್ಥಳಂತೆ ಬಿಂಬಿಸಲು[...] ನೆರವಾಗುವ ಸಾಧ್ಯತೆಗಳಿಗಾಗಿ ಅದು ತಡಕಾಟ ನಡೆಸಿತು[...] ಆಗ ಎಬಿವಿಪಿ ಕೈಗೆ ಸಿಕ್ಕಿದ್ದೇ ಈ ಹಳೇ ವೀಡಿಯೋ[...] ಅದರಲ್ಲಿನ ತಲೆ ಬಾಲವನ್ನೆಲ್ಲ ಕತ್ತರಿಸಿ ತನಗೆ ಬೇಕಾ[...] ಒಂದು ಎಳೆಯನ್ನು ಮಾತ್ರವೇ ಚಲಾವಣೆಗೆ ತಂದ[...] 'ದೇಶದ್ರೋಹ'ದ ಗುಲ್ಲೆಬ್ಬಿಸಿದೆ.


ಎಬಿವಿಪಿ ದಾಳಿಗೆ ಕುಸಿದು ಕುಳಿತಿರುವ ಪ್ರೊಫೆಸರ್

### ರಮ್‌ಜಾಸ್ ಕಾಲೇಜಿನಲ್ಲಿ ಗೂಂಡಾಗಿ[...]

ಗುರ್‌ಮೆಹರ್ ಕೌರ್, ಹೀಗೆ ಎಬಿವಿಪಿ ವಿರು[...] ಪ್ರತಿಭಟಿಸುವುದಕ್ಕೂ ಒಂದು ಕಾರಣವಿದೆ. ಇದೇ ದಿ[...] ಯೂನಿವರ್ಸಿಟಿಗೆ ಒಳಪಡುವ ರಮ್‌ಜಾಸ್ ಕಾಲೇಜ[...] ಇತ್ತೀಚೆಗೆ 'ಪ್ರತಿಭಟನೆಯ ಸಂಸ್ಕೃತಿ' ಎಂಬ ವಿಷಯ[...] ಕುರಿತು ಸೆಮಿನಾರ್ ಆಯೋಜಿಸಿತ್ತು, ಅದರಲ್ಲಿ ಜೆಎನ್‌ಯು[...] ವಿದ್ಯಾರ್ಥಿ ಉಮರ್ ಖಾಲೀದ್ ತಮ್ಮ ವಾದ ಮಂಡಿಸು[...]ವುದೆಂದೂ ನಿಕ್ಕಿಯಾಗಿತ್ತು, ಆದರೆ ಈ ಹಿಂದೆ ಜೆಎನ್‌ಯು[...] ಕ್ಯಾಂಪಸ್‌ನಲ್ಲಿ 'ಆಜಾದಿ' ಕುರಿತು ಗುಲ್ಲೆಬ್ಬಿಸಿ ರಾದ್ಧಾಂ[...] ಮಾಡಿದ್ದಾಗ ಎಬಿವಿಪಿ, ಕನ್ಹಯ್ಯನ ಜೊತೆಗೆ ಇದ[...]

⏭ 12[...]

## ಗುರ್‌ಮೆಹರ್ ವೀಡಿಯೋದಲ್ಲಿ ಹೇಳಿದ್ದೇನು?

ಕೇವಲ ಎರಡು ವರ್ಷದ ಹಸುಗೂಸಾಗಿದ್ದಾಗಲೇ ಯುದ್ಧದ ರಕ್ತದಾಹಕ್ಕೆ ತನ್ನ ಹೆತ್ತಪ್ಪನನ್ನು ಕಳೆದುಕೊಂಡ ನತದೃಷ್ಟ ಹೆಣ್ಣಾಗಳಾಗಿ ಸ್ಕ್ರೀನ್ ಮೇಲೆ ಕಾಣಿಸಿಕೊಳ್ಳುವ ಗುರ್‌ಮೆಹರ್ ಕೌರ್, ಆ ವೀಡಿಯೋದಲ್ಲಿ ಮಾತಾಡುವ ಗೊಡವೆಗೇ ಹೋಗುವುದಿಲ್ಲ, ತನ್ನ ಅನಿಸಿಕೆಗಳನ್ನು ಅಕ್ಷರಗಳಾಗಿಸಿ ಪೋಸ್ಟರ್ ರೂಪದಲ್ಲಿ ಒಂದಾದಮೇಲೊಂದರಂತೆ ನಮ್ಮ ಮುಖಕ್ಕೆ ಹಿಡಿಯುತ್ತಾ ಸಾಗುತ್ತಾಳೆ. ಮಾತೇ ಇಲ್ಲದ ಅವಳ ಮೂಕವೇದನೆಯನ್ನು ಮನುಷ್ಯತ್ವದ ಪಸೆಗಣ್ಣಲ್ಲಿ ನೋಡುತ್ತಾ ಹೋದಂತೆ ಆಕೆ ಆಪ್ತಳಾಗುತ್ತಾಳೆಯೇ ವಿನಾಃ ಎಬಿವಿಪಿ ಗುಲ್ಲೆಬ್ಬಿಸುತ್ತಿರುವಂತೆ 'ದೇಶದ್ರೋಹಿ'ಯಾಗಿ ಕಾಣಿಸಳು...

'ಹಾಯ್.'

'ನನ್ನ ಹೆಸರು ಗುರ್‌ಮೆಹರ್ ಕೌರ್.'

'ನಾನು ಭಾರತದ ಜಲಂಧರ್ ಪ್ರಾಂತ್ಯದವಳು.'

'ಇವರು ನನ್ನ ತಂದೆ ಕ್ಯಾಪ್ಟನ್ ಮನ್‌ದೀಪ್ ಸಿಂಗ್' (ಪೋಸ್ಟರ್‌ನಲ್ಲಿ ಆಕೆಯ ತಂದೆಯ ಚಿತ್ರವಿರುತ್ತೆ)

'ಅವರು 1999ರ ಕಾರ್ಗಿಲ್ ಯುದ್ಧದಲ್ಲಿ ಹುತಾತ್ಮರಾದರು.'


'ನಾನು ಅಪ್ಪನನ್ನು ಕಳೆದುಕೊಂಡಾಗ ನನಗಿನ್ನು ಎರಡು ವರ್ಷ. ಅಪ್ಪನ ನೆನಪುಗಳು ಅಂತ ನನಗಿರುವುದು ತುಂಬಾ ಕಮ್ಮಿ.'

'ಆದರೆ ಅಪ್ಪನಿಲ್ಲದೆ ಬೆಳೆಯುವ ನೋವಿನ ಅನುಭವದ ನೆನಪುಗಳು ನನ್ನಲ್ಲಿ ಸಾಕಷ್ಟಿವೆ.'

'ನನ್ನ ತಂದೆಯನ್ನು ಕೊಂದವರು ಎಂಬ ಕಾರಣಕ್ಕೆ ಪಾಕಿಸ್ತಾನ ಮತ್ತು ಪಾಕಿಸ್ತಾನಿಗಳನ್ನು ನಾನೆಷ್ಟು ದ್ವೇಷಿಸುತ್ತಿದ್ದೆ ಎಂಬುದೂ ನನಗೆ ನೆನಪಿದೆ.'

'ಎಲ್ಲಾ ಮುಸ್ಲಿಮರೂ ಪಾಕಿಸ್ತಾನಿಗಳು ಅನ್ನೋ ನಂಬಿಕೆಯಲ್ಲೆ ನಾನು ಮುಸ್ಲಿಮರನ್ನೂ ದ್ವೇಷಿಸುತ್ತಿದ್ದೆ.'

'ಆರು ವರ್ಷದವಳಿದ್ದಾಗ ಒಮ್ಮೆ ಬುರ್ಖಾ ಹಾಕಿದ್ದ ಹೆಂಗಸನ್ನು ಇರಿಯಲು ಮುಂದಾಗಿದ್ದೆ.'




'ಯಾಕೆಂದರೆ, ನನ್ನ ತಂದೆಯ ಸಾವಿಗೆ ಆಕೆಯೂ ಕಾರಣಳು ಎಂಬ ವಿಲಕ್ಷಣ ತರ್ಕ ನನ್ನಲ್ಲಿತ್ತು.'

'ಆದರೆ ಅಮ್ಮ ನನ್ನನ್ನು ತಡೆದು ಸತ್ಯವನ್ನು ಹೀಗೆ ಅರ್ಥ ಮಾಡಿಸಿದಳು.'

'ಪಾಕಿಸ್ತಾನ ನನ್ನ ತಂದೆಯನ್ನು ಕೊಲ್ಲಲಿಲ್ಲ, ಯುದ್ಧ ನನ್ನ ತಂದೆಯನ್ನು ಕೊಂದದ್ದು' (ಈಗ ಎಬಿವಿಪಿ ಗುಲ್ಲೆಬ್ಬಿಸುತ್ತಿರುವುದು ಇದೇ ಪೋಸ್ಟರ್ ವಿಷಯಕ್ಕೆ)

'ನನಗೆ ಅದನ್ನು ಅರಗಿಸಿಕೊಳ್ಳಲು ತುಂಬಾ ಸಮಯ ಹಿಡಿಯಿತು, ಆದರೆ ಈಗ ನಾನು ನನ್ನ ದ್ವೇಷದಿಂದ ಹೊರಬಂದಿದ್ದೇನೆ.'

'ಹಾಗೆ ಹೊರಬರುವುದು ಸುಲಭವೇನೂ ಅಲ್ಲ, ಆದರೆ ಕಷ್ಟವೂ ಅಲ್ಲ.'

'ನನಗೆ ಅದು ಸಾಧ್ಯವಾಗುವುದಾದರೆ, ನಿಮಗೂ ಅದು ಸಾಧ್ಯ.'

'ಇವತ್ತು ನಾನೂ ನನ್ನ ತಂದೆಯಂತೆಯೇ ಒಬ್ಬ ಸೈನಿಕಳು.'

'ಭಾರತ ಮತ್ತು ಪಾಕಿಸ್ತಾನಗಳ ನಡುವಿನ ಶಾಂತಿ ಸ್ಥಾಪನೆಯ ಹೋರಾಟದಲ್ಲಿ.'

'ಯಾಕೆಂದರೆ, ಒಂದೊಮ್ಮೆ ನಮ್ಮ ನಡುವೆ ಯುದ್ಧವೇ ಇಲ್ಲದಿರುತ್ತಿದ್ದರೆ, ನನ್ನಪ್ಪ ಇವತ್ತು ನನ್ನೊಟ್ಟಿಗೆ ಇರುತ್ತಿದ್ದರು.'

'ಎರಡೂ ದೇಶಗಳ ಸರ್ಕಾರಗಳು ಈ ವಿಚಾರದಲ್ಲಿ ನಟಿಸುವುದನ್ನು ನಿಲ್ಲಿಸಲಿ ಎಂಬ ಕಾರಣಕ್ಕೆ ನಾನು ಈ ವೀಡಿಯೋ ಮಾಡುತ್ತಿದ್ದೇನೆ.'

'ಮತ್ತು ಸಮಸ್ಯೆಯನ್ನು ಬಗೆಹರಿಸುವುದಕ್ಕಾಗಿಯೂ ಕೂಡಾ.'

'ಎರಡು ವಿಶ್ವಯುದ್ಧಗಳ ನಂತರವೂ ಫ್ರಾನ್ಸ್ ಮತ್ತು ಜರ್ಮ[...] ಗೆಳೆಯರಾಗುವುದಾದರೆ.'

'ಜಪಾನ್ ಮತ್ತು ಅಮೆರಿಕಗಳು ತಮ್ಮ ಗತವನ್ನು ಮರೆತು ಪ್ರಗತಿಯ[...] ಹೆಜ್ಜೆ ಹಾಕುವುದಾದರೆ.'

'ನಮಗೇಕೆ ಸಾಧ್ಯವಿಲ್ಲ?'

'ಬಹುಪಾಲು ಸಾಮಾನ್ಯ ಭಾರತೀಯರು ಮತ್ತು ಪಾಕಿಸ್ತಾನಿಗಳು ಶಾಂತಿಯನ್ನ[...] ಬಯಸುತ್ತಿದ್ದಾರೆಯೇ ವಿನಾಃ ಯುದ್ಧವನ್ನಲ್ಲ.'

'ಎರಡೂ ದೇಶಗಳ ನಾಯಕತ್ವದ ಸಾಮರ್ಥ್ಯವನ್ನು ನಾನು ಪ್ರಶ್ನಿಸುತ್ತೇನೆ[...]'

'ಮೂರನೇ ದರ್ಜೆಯ ನಾಯಕತ್ವ ಇಟ್ಟುಕೊಂಡು, ವಿಶ್ವಶ್ರೇಷ್ಠ ದರ್ಜೆಯ[...] ದೇಶವಾಗುವ ಕನಸು ಕಾಣಲು ಸಾಧ್ಯವಿಲ್ಲ.'

'ದಯವಿಟ್ಟು ನಿಮ್ಮ ಹೆಜ್ಜೆಗಳನ್ನು ಕಿತ್ತಿಟ್ಟು, ಸಮಸ್ಯೆಯನ್ನು ಬಗೆಹರಿಸಿ[...]'

'ಸರ್ಕಾರಿ-ಪ್ರಾಯೋಜಿತ ಭಯೋತ್ಪಾದನೆ ಇಲ್ಲಿಗೆ ಸಾಕು.'

'ಸರ್ಕಾರಿ-ಪ್ರಾಯೋಜಿತ ಬೇಹುಗಾರಿಕೆ ಇಲ್ಲಿಗೆ ಸಾಕು.'

'ಸರ್ಕಾರಿ-ಪ್ರಾಯೋಜಿತ ದ್ವೇಷ ಇಲ್ಲಿಗೆ ಸಾಕು.'

'ಗಡಿಯ ಎರಡೂ ಬದಿ ಜನ ಸತ್ತಿದ್ದು ಇಲ್ಲಿಗೆ ಸಾಕು.'


'ಸಾಕು ಅಂದ್ರೆ ಸಾಕು.'


'ತನ್ನ ತಂದೆಯನ್ನು ಕಳೆದುಕೊಂಡ ಒಬ್ಬೇಒಬ್ಬ ಗುರ್‌ಮೆಹರ್‌ಳೂ ಇಲ್ಲದ[...] ಪ್ರಪಂಚದಲ್ಲಿ ಬದುಕಲು ನಾನು ಬಯಸುತ್ತೇನೆ.'


'ನಾನು ಒಬ್ಬಳೇ ಅಲ್ಲ, ನನ್ನಂತಹ ಬಹಳಷ್ಟು ಜನರಿದ್ದಾರೆ.'

'ಶಾಂತಿಗಾಗಿ ಈ ಸಂದೇಶ.'


ಗುರ್‌ಮೆಹರ್ ಪರದೆಯಿಂದ ಎದ್ದುಹೋದ ನಂತರ 'ನೀವೂ ಶಾಂತಿಗಾಗಿ[...] ಹಂಬಲಿಸುವುದಾದರೆ ಈ ವೀಡಿಯೋವನ್ನು ಶೇರ್ ಮಾಡಿ' ಅನ್ನೋ ಸಂದೇಶ[...] ಮೂಡಿಬರುತ್ತೆ, ಈಗಹೇಳಿ, ಇಲ್ಲಿರುವ ಆಕೆಯ ಕಾಳಜಿಯನ್ನು ಅದ್ಯಾವ[...] ತಕ್ಕಡಿ ದೇಶದ್ರೋಹಿಯಾಗಿ ತೂಗುತ್ತದೆ.



# ಕೊಡಗು: ಬಡವರ ಬದುಕುಗಳ ಮೇಲೆ ಸಿರಿವಂತರ ಸ್ಟೇಡಿಯಂ!



ಜಿಲ್ಲಾಧಿಕಾರಿ ರಿಚರ್ಡ್ ವಿನ್ಸೆಂಟ್ ಡಿಸೋಜ

ಶ್ರೀಮಂತರ ಮೋಜಿಗೆ ಸರಕಾರ ಅತಿಯಾದ ...ಹ ತೋರಿ ಜಮೀನು ನೀಡುತ್ತದೆ. ಆದರೆ ಬಡವರಿಗೆ ...ಲ್ಲಿಯೂ ಪರಿಶಿಷ್ಟ ಜಾತಿ, ಪಂಗಡ, ಹಿಂದುಳಿದವರು ... ಅಲ್ಪಸಂಖ್ಯಾತರಿಗೆ ಜಮೀನು ನೀಡುವುದೆಂದರೆ, ...ೀಯ ಪಕ್ಷಗಳಿಗೆ ಅಸಡ್ಡೆಯ ಮನೋಭಾವ. ಕೊಡಗಿನ ...ಗೆ ಸ್ಥಾನಿಕ ಸರ್ಕಾರದಂತಿರುವ ಜಿಲ್ಲಾಡಳಿತ ಬಡವರಿಗೆ ...ನು ನೀಡಲೇಬಾರದೆಂಬ ಸಂಕಲ್ಪ ಮಾಡಿಕೊಂಡಂತಿದೆ. ...ೊಡಗು ಜಿಲ್ಲೆಯಲ್ಲಿ ಪರಿಶಿಷ್ಟ ಜಾತಿ, ಪಂಗಡದವರು ... ಹಿಂದುಳಿದವರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ...ಪೇಟೆ ವಿಧಾನಸಭಾ ಕ್ಷೇತ್ರವು ಸುಮಾರು 30 ...ಗಳ ಕಾಲ ಗಿರಿಜನ ಮೀಸಲು ಕ್ಷೇತ್ರವಾಗಿತ್ತು. ...ಂದ ಗಿರಿಜನರಿಗೆ ನಯಾಪೈಸೆಯ ಪ್ರಯೋಜನ ...ಲ್ಲ. ಗಿರಿಜನರ ಪ್ರತಿನಿಧಿಗಳಾಗಿದ್ದವರು ಅಭಿವೃದ್ಧಿ ...ು. ದಿಡ್ಡಳ್ಳಿ ಆದಿವಾಸಿಗಳ ಸಮಸ್ಯೆ ಬಗೆಹರಿಸಲು ...ರ ಉತ್ಸಾಹ ತೋರುತ್ತಿಲ್ಲ. ಶ್ರೀಮಂತರ ಮತ್ತು ...ಭೂತವಾದಿಗಳ ಪ್ರಭಾವಕ್ಕೆ ಸಿಲುಕಿರುವ ಸರಕಾರ ... ಜನಪ್ರತಿನಿಧಿಗಳು ಶತಾಯಗತಾಯ ದಿಡ್ಡಳ್ಳಿ ...ಸಿಗಳಿಗೆ ಜಮೀನು ನೀಡಬಾರದೆಂಬ ತೀರ್ಮಾನಕ್ಕೆ ...ದ್ದು, ಆ ಪ್ರದೇಶವನ್ನು ಮೀಸಲು ಅರಣ್ಯ ಎಂದು ...ಲು ಪ್ರಯತ್ನ ನಡೆಸುತ್ತಿದ್ದಾರೆ. ಕೊಡಗು ಜಿಲ್ಲಾಧಿಕಾರಿ ...ರ್ಡ್ ವಿನ್ಸೆಂಟ್ ಡಿಸೋಜ ಇದಕ್ಕೊಂದು ಟೊಂಕ ಕಟ್ಟಿ ...ದ್ದು ಅವರ ಅಣ್ಣನಂತೆ ಕಾಣುವ ಜಿಲ್ಲಾ ಉಸ್ತುವಾರಿ ... ಎಂ.ಆರ್.ಸೀತಾರಾಂ ಬೇಕಾದ ಬ್ಯಾಕ್‌ಸಪೋರ್ಟ್ ...ತ್ತಿದ್ದಾರೆ. ಸೀತಾರಾಂ ಕೊಡಗು ಉಸ್ತುವಾರಿ ಸಚಿವರಾಗಿ ...ುವರೆದರೆ ಜಿಲ್ಲೆಯಲ್ಲಿ ಪಕ್ಷ ಸರ್ವನಾಶವಾಗುವುದರಲ್ಲಿ ...ವಿಲ್ಲ. ಮಾರ್ಚ್ 4ರಿಂದ 6ರವರೆಗೆ ಕಾಂಗ್ರೆಸ್ ...ೊಡಗಿನಲ್ಲಿ 'ಜನವೇದನ' ಕಾರ್ಯಕ್ರಮ ನಡೆಸುತ್ತದೆ ... ಹೇಳಲಾಗಿದೆ. ಆದರೆ ಕೊಡಗಿನ ಪಾಲಿಗೆ ಕಾಂಗ್ರೆಸ್ ... ಜನರಿಗೆ 'ವೇದನೆ' ಕೊಡುವ ಪಕ್ಷ.

...ಂತಹ ಹತ್ತು ಹಲವು ಪ್ರಕರಣಗಳು ಕೊಡಗಿನಲ್ಲಿ ...ುತ್ತಿವೆ. ಇತ್ತೀಚೆಗೆ ಹಿರಿಯ ಸ್ವಾತಂತ್ರ್ಯ ಹೋರಾಟಗಾರ ...ಎಸ್. ದೊರೆಸ್ವಾಮಿಯವರು ಜಿಲ್ಲೆಗೆ ಆಗಮಿಸಿದ್ದ ...ುಲ್ಲಿಯೇ ಕೆಲವು ಮನೆಗಳನ್ನು ತೆರವುಗೊಳಿಸಿದ್ದು ... ಗಮನಕ್ಕೆ ಬಂದಿತ್ತು. ಈ ಕ್ರಮವನ್ನು ಅವರು ...ಗಿ ಖಂಡಿಸಿದ್ದರು. ಇದರ ಬೆನ್ನಿಗೆ ಜಿಲ್ಲೆಗೆ ಆಗಮಿಸಿದ ... ಸೀತಾರಾಂ "ಹೊರಗಿನವರು ಬಂದು ಕೊಡಗಿನ ...ಸಿಗಳ ಬ್ರೈನ್‌ವಾಷ್ ಮಾಡುತ್ತಾರೆ" ಎಂಬ ಹೇಳಿಕೆ ...ರು. ಅವರಿಗೆ ದೊರೆಸ್ವಾಮಿ ಮತ್ತು ಎ.ಕೆ.ಸುಬ್ಬಯ್ಯ ...ನವರು. ಜಿಲ್ಲೆಯವರೇ ಅಲ್ಲದಿರುವ ಬೆಂಗಳೂರಿನ ...ಾಂ ಕೊಡಗು ಜಿಲ್ಲೆಯ ಉಸ್ತುವಾರಿಯನ್ನು ...ೊಂಡು ಆಡುವ ಮಾತಿದು.

## ಮನೆಯಿದ್ದರೂ ಹಕ್ಕಿಲ್ಲ..

...ಡಿಕೇರಿ ತಾಲೂಕಿನ ಹೊದ್ದೂರು ಗ್ರಾಮದಲ್ಲಿ ...ಾಡು ಎಂಬ ಪ್ರದೇಶವಿದೆ. ಈ ಪ್ರದೇಶದಲ್ಲಿ 119.47 ಏಕರೆ ಜಮೀನು ಇದೆ ಎಂದು ದಾಖಲೆ ...ಹೇಳುತ್ತವೆ. ಈ ಜಮೀನು ಪೈಸಾರಿ ಜಮೀನಾ ...ಸುಮಾರು 300ಕ್ಕೂ ಹೆಚ್ಚು ಬಡ ಕುಟುಂಬಗಳು ...ಕೊಂಡು ಅಲ್ಲಿ ವಾಸಿಸುತ್ತಿವೆ. ಇವರೆಲ್ಲರೂ ಕೂಲಿ ...ಕರು. ಒಂದೆರಡು ದಶಕದಿಂದ ಅಲ್ಲಿ ವಾಸಿಸುತ್ತಿರುವ ... ಸಮೀಪದ ನಾಪೋಕ್ಲು, ಕಕ್ಕಬ್ಬೆ, ಚೆಯ್ಯಂಡಾಣೆ ...ದ ಪ್ರದೇಶದ ತೋಟಗಳ ಕಾಯಂ ಕೂಲಿ ...ಕರು.. ಇಲ್ಲಿ ಅಂಗನವಾಡಿ ಕೇಂದ್ರವಿದ್ದು ಇದಕ್ಕೆ ...ವರ್ಷಗಳ ಹಿಂದೆಯೇ ಸಾವಿತ್ರಿಬಾಯಿ ಫುಲೆಯವರ



ಹೆಸರು ಇಡಲಾಗಿದೆ. ಕೊಡಗು ಜಿಲ್ಲೆಯಲ್ಲಿಯೇ ಈ ಹೆಸರಿನ ಕಟ್ಟಡವಿರುವುದು ಇದೊಂದೇ ಎಂದು ಕಾಣುತ್ತದೆ. ಪ್ರವೇಶದ್ವಾರದಲ್ಲಿ ದಾದಾ ಸಾಹೇಬ್ ಅಂಬೇಡ್ಕರ್ ನಗರ ಎಂಬ ಫಲಕವೂ ಇದೆ.

ಇಲ್ಲಿರುವ 119 ಎಕರೆಗಳ ಪೈಕಿ ಈ 300 ಕುಟುಂಬಸ್ಥರು ಮನೆದಳವನ್ನಷ್ಟೇ ಅತಿಕ್ರಮಣ ಮಾಡಿಕೊಂಡು ಗುಡಿಸಲುಗಳನ್ನು ಹಾಕಿಕೊಂಡು (ಕೆಲವರು ಆರ್.ಸಿ.ಸಿ. ಮನೆ ಹೊಂದಿದ್ದಾರೆ) ವಾಸಿಸುತ್ತಿದ್ದಾರೆ. ಯಾರೂ ಕೃಷಿಗಾಗಿ ಜಮೀನನ್ನು ಅತಿಕ್ರಮಣ ಮಾಡಿಕೊಂಡಿಲ್ಲ. ಇವರುಗಳು ತಮಗೆ ಹಕ್ಕುಪತ್ರ ನೀಡಬೇಕೆಂದು ಸರಕಾರವನ್ನು ಹಲವಾರು ವರ್ಷಗಳಿಂದ ಒತ್ತಾಯಿಸುತ್ತಾ ಬಂದಿದ್ದಾರೆ. ಆದರೆ ಅವರಿಗೆ ಜಮೀನು ನೀಡುವುದಕ್ಕೆ ಸ್ಥಳೀಯರ ವಿರೋಧವಿದೆ. ಸುಮಾರು 50ರಿಂದ 60 ಎಕರೆ ಜಮೀನು ಉಳ್ಳವರ ವಶದಲ್ಲಿದೆ. ಹಾಗಾಗಿ ಭೂಮಂಜೂರಾತಿಗೆ ಅಡ್ಡಿ ಮಾಡಲಾಗುತ್ತಿದೆ. ಪ್ರತೀ ಚುನಾವಣೆಯ ವೇಳೆಯಲ್ಲಿ ಇವರು ಮತದಾನಕ್ಕೆ ಬಹಿಷ್ಕಾರ ಹಾಕುತ್ತಾ ಬಂದಿದ್ದು, ಕಳೆದ ಎರಡು ಚುನಾವಣೆಗಳಲ್ಲಿ ಅವರಿಗೆ ಮತದಾನ ಮಾಡುವಂತೆ ಎ.ಕೆ. ಸುಬ್ಬಯ್ಯ ಮನವೊಲಿಸಿದ್ದರು ಮತ್ತು ಚುನಾವಣೆಯ ನಂತರ ಸರಕಾರದ ಮಟ್ಟದಲ್ಲಿ ಈ ಬಗ್ಗೆ ವ್ಯವಹರಿಸುವ ಭರವಸೆಯನ್ನು ನೀಡಿದ್ದರು.

ಆದರೆ ಆಡಳಿತಾರೂಢ ಕಾಂಗ್ರೆಸ್ ಪಕ್ಷವೇ ಅವರಿಗೆ ಜಮೀನು ನೀಡಲು ಅಡ್ಡಿ ಮಾಡುತ್ತಾ ಬಂದಿದೆ. ಜೊತೆಗೆ ಬಿಜೆಪಿಯ ಬಹುತೇಕ ಮಂದಿ ಜಮೀನು ಮಂಜೂರಾತಿಗೆ ಆಕ್ಷೇಪ ಮಾಡುತ್ತಿದ್ದಾರೆ. ಅಲ್ಲಿ ವಾಸಿಸುತ್ತಿರುವವರಿಗೆ ನೀರಿನ ಸಮಸ್ಯೆ ಅತಿಯಾಗಿದೆ. ಬೇಸಿಗೆಯ ಸಂದರ್ಭದಲ್ಲಿ ಒಂದು ಡ್ರಮ್ ನೀರಿಗೆ 200 ರೂಪಾಯಿ ಪಾವತಿಸಿ ಕೊಂಡು ಕೊಳ್ಳುತ್ತಾರೆ. ಆದರೂ ಈ ಸಮಸ್ಯೆಯನ್ನು ಬಗೆಹರಿಸಲು ಜಿಲ್ಲಾಡಳಿತ ಮುಂದಾಗಲಿಲ್ಲ. ಇಲ್ಲಿಂದ ಕೇವಲ 4ರಿಂದ 6 ಕಿ.ಮೀ. ದೂರದಲ್ಲಿ ಕಾವೇರಿ ನದಿಯ ಬಲಮುರಿ ಹರಿದುಹೋಗುತ್ತದೆ. ಅಲ್ಲಿಂದ ಪೈಪ್‌ಗಳ ಮೂಲಕ ನೀರನ್ನು ನೀಡಬಹುದು. ಆದರೆ ಈ ಬಗ್ಗೆ ಜಿಲ್ಲಾಡಳಿತಕ್ಕೆ ಕಾಳಜಿ ಇಲ್ಲ. ನೀರಿಗೆ ಕೊಡಗಿನಲ್ಲಿ ಬರವಿಲ್ಲ ಎಂಬ ವರದಿ ಸರಕಾರಕ್ಕೆ ಸಲ್ಲುತ್ತಲೇ ಇರುತ್ತದೆ.

## ಕ್ರಿಕೆಟ್ ಸ್ಟೇಡಿಯಂ ವಿವಾದ


ಇಲ್ಲಿ ಈಗ ಹೊಸದೊಂದು ವಿವಾದವನ್ನು ಜಿಲ್ಲಾಡಳಿತ ಸೃಷ್ಟಿಸಿದೆ. ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ ಜಿಲ್ಲೆಗೊಂದು ಕ್ರಿಕೆಟ್ ಸ್ಟೇಡಿಯಂ ನಿರ್ಮಾಣ ಮಾಡಿ ಅಭಿವೃದ್ಧಿಪಡಿಸುವ ಯೋಜನೆ ಇಟ್ಟುಕೊಂಡಿದೆಯಂತೆ. ಕೊಡಗು ಜಿಲ್ಲೆಯಲ್ಲಿಯೂ ಜಾಗ ಮಂಜೂರಾತಿಗಾಗಿ 26.12.2014ರಂದು ಕೆ.ಎಸ್.ಸಿ.ಎ. ಸಂಸ್ಥೆಯ ಅಧ್ಯಕ್ಷರಾಗಿದ್ದ ಅಶೋಕ್ ಆನಂದ್ ಹಾಗೂ ಗೌರವ ಕಾರ್ಯದರ್ಶಿಯಾಗಿದ್ದ ಬ್ರಿಜೇಶ್ ಪಟೇಲ್ ಅರ್ಜಿ ಸಂಖ್ಯೆ 20/20 ಕೆ.ಎಸ್.ಸಿ.ಎ.-ಎಲ್.ಎಫ್.ಎಫ್/2014-15ರಲ್ಲಿ 20 ಎಕ್ರೆ ಜಾಗವನ್ನು ಕ್ರಿಕೆಟ್ ಸ್ಟೇಡಿಯಂ ನಿರ್ಮಾಣಕ್ಕಾಗಿ ಗುತ್ತಿಗೆ ಆಧಾರದಲ್ಲಿ ಮಂಜೂರಾತಿಗೆ ಅರ್ಜಿ ಸಲ್ಲಿಸಿದ್ದರು. ಈ ಉದ್ದೇಶಕ್ಕೆ ಬಿಳಿಗೇರಿ ಪಂಚಾಯತಿಯ ಸರ್ವೆ ನಂ. 87/1ರಲ್ಲಿ 20 ಎಕರೆ ಜಾಗ ಮಂಜೂರಾತಿ ಮಾಡುವಂತೆ ಅಂದು ಗೃಹಸಚಿವರಾಗಿದ್ದ ಕೆ.ಜೆ. ಜಾರ್ಜ್‌ರವರು ಜಿಲ್ಲಾಧಿಕಾರಿಗಳಿಗೆ ಪತ್ರ ಬರೆದಿದ್ದರು.

ಬಡವರು ಮನೆದಳಕ್ಕಾಗಿ ಸಲ್ಲಿಸಿದ ಅರ್ಜಿ ವಿಲೇವಾರಿ ವರ್ಷಗಟ್ಟಲೆ ಆಗದಿದ್ದರೂ, ಕ್ರಿಕೆಟ್ ಸ್ಟೇಡಿಯಂಗೆ ಗುತ್ತಿಗೆ ಆಧಾರದಲ್ಲಿ 20-6-2016ರಲ್ಲಿ ಸರಕಾರದ ನಡಾವಳಿ ಆರ್.ಡಿ. 20 ಎಲ್.ಡಿ.ಓ./2015-ಬೆಂಗಳೂರು-30-12-2015ರ ಪ್ರಕಾರ 12.70 ಎಕ್ರೆ ಪ್ರದೇಶ ಮಂಜೂರಾಗುತ್ತದೆ. ತಕ್ಷಣವೇ ಕೆ.ಎಸ್.ಸಿ.ಎ. ಈ ಜಾಗಕ್ಕೆ ಬೇಲಿ ಸುತ್ತಿ ಭದ್ರ ಮಾಡಿಕೊಂಡಿದೆ. ಸರಕಾರವು ಈ ಜಮೀನನ್ನು 30 ವರ್ಷಗಳ ಗುತ್ತಿಗೆಗೆ ಎಕರೆಗೆ ಇರುವ ಮಾರುಕಟ್ಟೆ ಬೆಲೆ 1,52,000 ರೂಪಾಯಿ ಅಂದರೆ ಒಟ್ಟು 19,30,400 ರೂಪಾಯಿಯ ಶೇ. 5ನ್ನು ವಾರ್ಷಿಕ ಗುತ್ತಿಗೆ ದರ ಎಂದು ನಿಗದಿಪಡಿಸಿ ನೀಡಿದೆ. ಇಲ್ಲಿರುವ 119.47 ಎಕ್ರೆ ಜಾಗದಲ್ಲಿ 4.70 ಎಕ್ರೆ ಜಮೀನು ಸ್ಮಶಾನಕ್ಕಾಗಿ ಮತ್ತು 4 ಎಕ್ರೆ ಜಮೀನು ನವಗ್ರಾಮ ನಿರ್ಮಾಣಕ್ಕಾಗಿ ಕಾಯ್ದಿರಿಸಲಾಗಿದೆ ಎಂದು ದಾಖಲಿಸಲಾಗಿದೆ. ಈ ಪೈಕಿ 0.70 ಕುಂಬಾರ ಸಮುದಾಯದವರಿಗೆ, 2 ಎಕ್ರೆ ಪರಿಶಿಷ್ಟ ಜಾತಿ ಪಂಗಡದವರಿಗೆ ಮತ್ತು 2 ಎಕ್ರೆ ಇತರರಿಗೆ ಎಂದು ನಮೂದಿಸಲಾಗಿದೆ.

ತಮಾಷೆ ಎಂದರೆ ತಾವು ನೆಲೆಸಿರುವ ಜಾಗದ ಹಕ್ಕುಪತ್ರ ಕೊಡಿ ಅಂತ ನಿಯಮ 90ರ ಅಡಿಯಲ್ಲಿ ಗ್ರಾಮಸ್ಥರು ಸಲ್ಲಿಸಿದ್ದ ಅರ್ಜಿಯನ್ನು ಜಿಲ್ಲಾಡಳಿತ ತಿರಸ್ಕರಿಸಿದೆ. ಯಾಕೆಂದರೆ ಆ ನಿಯಮದ ಅಡಿಯಲ್ಲಿ ಅರ್ಜಿ ಸಲ್ಲಿಸಬೇಕಾದರೆ ಸಂಬಂಧಪಟ್ಟ ಗ್ರಾಮ ಪಂಚಾಯತಿಯಿಂದ ತೆರಿಗೆ ಪಾವತಿಸಿರುವುದಕ್ಕೆ ದಾಖಲಾತಿಗಳನ್ನು ಒದಗಿಸಬೇಕು. ತೀರಾ ಇತ್ತೀಚಿನವರೆಗೆ ಅವರಿಗೆ ಸಂಬಂಧಪಟ್ಟ ಗ್ರಾಮ ಪಂಚಾಯತಿಯು ಜಮೀನು ಮಂಜೂರು ಮಾಡುವಂತೆ ನಿರ್ಣಯವನ್ನು ಕೈಗೊಂಡಿತ್ತು. ಜಮೀನು ನೀಡದಿದ್ದರೂ ಅವರಿಗೆ ಸ್ಮಶಾನವನ್ನು ಮೀಸಲಿಟ್ಟಿದೆ. ಇದಕ್ಕಿಂತ ದೊಡ್ಡ

▶▶| 14

## ಈ ಭಾಗಕ್ಕೆ ಕ್ರಿಕೆಟ್ ಸ್ಟೇಡಿಯಂ ಅಗತ್ಯವಿಲ್ಲ


ಕೆ.ಆರ್.ವಿದ್ಯಾಧರ

ಒಂದು ಕ್ರಿಕೆಟ್ ಸ್ಟೇಡಿಯಂ ಬಂದರೆ ಅದರ ಸುತ್ತ ಕ್ರೀಡಾ ಗ್ರಾಮವೊಂದು ಬೆಳೆಯಬೇಕಾಗುತ್ತದೆ. ಮುಖ್ಯ ಪಿಚ್ ಇರುವ ಪ್ರದೇಶಕ್ಕೆ ಪರ್ಯಾಯವಾಗಿ ಹೊರಭಾಗದಲ್ಲಿ ಪಿಚ್‌ಗಳನ್ನು ನಿರ್ಮಾಣ ಮಾಡಬೇಕಾಗುತ್ತದೆ. ಕ್ರಿಕೆಟ್ ಸ್ಟೇಡಿಯಂ ಎಂದ ನಂತರ ಕ್ರಿಕೆಟ್ ಪಂದ್ಯಾಟಗಳು ನಡೆಯುವಾಗ ವಾಹನಗಳು ಪಾರ್ಕ್ ಮಾಡಲು ಸ್ಥಳ ಬೇಕಾಗುತ್ತದೆ. ಅಲ್ಲಿಗೆ ಬರಬೇಕಾದ ರಸ್ತೆಯನ್ನು ನಿರ್ಮಾಣ ಮಾಡಬೇಕಾಗುತ್ತದೆ. ಇದಕ್ಕೆಲ್ಲಾ ಹೆಚ್ಚಿನ ಜಾಗ ಬೇಕಾಗುತ್ತದೆ. ಹಾಗಾಗಿ ಅಲ್ಲಿ ಕ್ರಿಕೆಟ್ ಸ್ಟೇಡಿಯಂ ತರುವ ಉದ್ದೇಶ ಸ್ಟೇಡಿಯಂ ನಿರ್ಮಾಣವಲ್ಲ, ಬದಲಿಗೆ ಅಲ್ಲಿಯ ನಿವಾಸಿಗರನ್ನು ಅಲ್ಲಿಂದ ಎತ್ತಂಗಡಿ ಮಾಡುವುದಾಗಿದೆ ಎಂದು ಭೂಮಿ ಮತ್ತು ವಸತಿ ವಂಚಿತರ ಹಕ್ಕು ಹೋರಾಟ ಸಮಿತಿಯ ಜಿಲ್ಲಾ ಪದಾಧಿಕಾರಿ ಹಾಗೂ ವಕೀಲರಾದ ಕೆ.ಆರ್.ವಿದ್ಯಾಧರ ಪ್ರತಿಪಾದಿಸುತ್ತಾರೆ.


ಈ ಭಾಗದಲ್ಲಿ ಮಳೆ ಹೆಚ್ಚಾಗಿ ಆಗುತ್ತದೆ. ಮಳೆ ಇರುವ ಪ್ರದೇಶದಲ್ಲಿ ಕ್ರಿಕೆಟ್ ಸ್ಟೇಡಿಯಂ ಪ್ರಯೋಜನವಿಲ್ಲ. ಇನ್ನು ಬೇಸಿಗೆಯ ವೇಳೆಯಲ್ಲಿ ನೀರಿನ ಸಮಸ್ಯೆ ಇದ್ದು, ಪಿಚ್ಚನ್ನು ಕ್ಯೂರೇಟ್ ಮಾಡಲು ಬೇಕಾದ ನೀರು ಖಂಡಿತವಾಗಿಯೂ ಸಿಗುವುದಿಲ್ಲ. ಹಾಗಾಗಿ ಇದು ಕ್ರಿಕೆಟ್ ಸ್ಟೇಡಿಯಂ ನಿರ್ಮಾಣ ಮಾಡಲು ಯೋಗ್ಯವಾದ ಜಾಗವಲ್ಲ ಎನ್ನುವ ಅವರು ಸೋಮವಾರಪೇಟೆ ತಾಲೂಕಿನಲ್ಲಿ ಇದಕ್ಕೆ ಅವಕಾಶಗಳು ಇವೆ ಎಂಬ ಆಯ್ಕೆಗಳನ್ನೂ ಸೂಚಿಸುತ್ತಾರೆ. ಅಂದಹಾಗೆ, ಕೊಡಗಿನಲ್ಲಿ ಹಾಕಿ ಆಟಕ್ಕೆ ಜನಪ್ರಿಯತೆ ಇದೆಯೇ ವಿನಹ, ಕ್ರಿಕೆಟ್‌ಗೆ ಅಲ್ಲ!


ಇನ್ನು ಈ ಸ್ಥಳ ಮಂಜೂರಾದರೆ ಕೆ.ಎಸ್.ಸಿ.ಎ. ಸಂಸ್ಥೆಯವರು ತಾವು ಕೋರಿದ ಪ್ರಮಾಣದ ಸ್ಥಳ ತಮಗೆ ಮಂಜೂರಾಗಿಲ್ಲ, ಹಾಗಾಗಿ ಕ್ರಿಕೆಟ್ ಸ್ಟೇಡಿಯಂ ನಿರ್ಮಾಣ ಮಾಡಲು ಸಾಧ್ಯವಿಲ್ಲ ಎಂದು ಹೇಳಿಕೊಂಡು ಅಲ್ಲಿ ಕ್ರಿಕೆಟ್ ತಾರೆಯರಿಗೆ ಐಷಾರಾಮಿ ವಾಸ್ತವ್ಯಕ್ಕೆ ರೆಸಾರ್ಟ್ ನಿರ್ಮಾಣ ಮಾಡುವ ಅಪಾಯವನ್ನೂ ತಳ್ಳಿಹಾಕುವಂತಿಲ್ಲ. ಆದ್ದರಿಂದ ಈ ಭಾಗಕ್ಕೆ ಕ್ರಿಕೆಟ್ ಸ್ಟೇಡಿಯಂ ಅಗತ್ಯವಿಲ್ಲ.

# ದಾವಣಗೆರೆ ಬಿಜೆಪಿಯಲ್ಲಿ ಕಾಲೆಳೆಯುವ ಕಬಡ್ಡಿ

ದಾವಣಗೆರೆ ಜಿಲ್ಲೆಯ ಬಿಜೆಪಿಯಲ್ಲೀಗ ಆಂತರಿಕ ಗುದುಮುರಗಿಯದ್ದೇ ಕಾರುಬಾರು. ರಾಜ್ಯಮಟ್ಟದಲ್ಲಿ ಯಡಿಯೂರಪ್ಪ ಈಶ್ವರಪ್ಪ ಎಂಬೆರಡು ಕೇಸರಿ ಕಿಲಾಡಿಗಳ ಕಾಲೆಳೆದಾಟದ ನಡುವೆ ದಾವಣಗೆರೆ ಮಟ್ಟಿಗೆ ಆವರಿಬ್ಬರ ವಾರಸುದಾರರಂತಿರುವ ಹಾಲಿ ಸಂಸದ ಸಿದ್ದೇಶ್ವರ, ಮಾಜಿ ತರ್‍ನಾರಿ ಮಂತ್ರಿ ರವೀಂದ್ರನಾಥನ ತಿಕ್ಕಾಟವೂ ಕಾರ್ಯಕರ್ತರನ್ನು ಗೊಂದಲಕ್ಕೆ ದೂಡಿದೆ. ಯಡಿಯೂರಪ್ಪ-ಈಶ್ವರಪ್ಪನ ಬ್ರಿಗೇಡ್ ಕುಸ್ತಿಯನ್ನು ದಾವಣಗೆರೆಯಲ್ಲಿ ಪ್ರತಿನಿಧಿಸಿದ್ದೇ ಈ ಸಿದ್ದೇಶ್ವರ ಮತ್ತು ರವೀಂದ್ರನಾಥ. ಅಸಲಿಗೆ, ರವೀಂದ್ರನಾಥನಿಗೆ ಮೊದಲಿಂದಲೂ ಯಡಿಯೂರಪ್ಪನ ಕಂಡರೆ ಅಷ್ಟಕ್ಕಷ್ಟೆ. ಯಡಿಯೂರಪ್ಪ ಬಿಜೆಪಿ ಬಿಟ್ಟು ಕೆಜೆಪಿ ಕಟ್ಟಿಕೊಂಡು ತೆಂಗಿನಕಾಯಿ ಬಿಕರಿಗೆ ಕೂತಾಗ ಈಶ್ವರಪ್ಪನ ಜೊತೆಗೂಡಿ ಹಾಲು ಕುಡಿದವರಲ್ಲಿ ಈ ರವೀಂದ್ರನೂ ಒಬ್ಬ. ಜೊತೆಗೆ, ಅದೇ ಯಡಿಯೂರಪ್ಪ ಮೋದಿಯ ಜಪ (ನೆಪ) ಮಾಡುತ್ತಾ ಮತ್ತೆ ಬಿಜೆಪಿಗೆ ವಾಪಾಸಾದಾಗಲೂ ಈಶ್ವರಪ್ಪನಷ್ಟೇ ರವೀಂದ್ರನಾಥನೂ ವ್ಯಥೆಪಟ್ಟಿದ್ದುಂಟು. ಆದರಲ್ಲೂ 'ಡೋಂಟ್‌ಕೇರ್' ಯಡಿಯೂರಪ್ಪ ಬಿಜೆಪಿ ಮುಸುಡಿಗಳನ್ನೆಲ್ಲ ಸೈಡ್‌ಲೈನ್ ಮಾಡಿ ಕೆಜೆಪಿ ಕಟ್ಟಾಳುಗಳನ್ನೇ ಬಿಜೆಪಿ ಪದಾಧಿಕಾರಿಗಳನ್ನಾಗಿಸಿದ ತರುವಾಯವಂತೂ ರವೀಂದ್ರನಾಥನ ತಳ ಅಕ್ಷರಶಃ ಉರಿದು ಹೋಗಿತ್ತು. ಯಾಕೆಂದರೆ, ಯಡಿಯೂರಪ್ಪ ದಾವಣಗೆರೆ ಜಿಲ್ಲಾ ಬಿಜೆಪಿ ಅಧ್ಯಕ್ಷನನ್ನಾಗಿ ಪ್ರತಿಷ್ಠಾಪಿಸಿದ್ದು ಯಶವಂತ ರಾವ್ ಅನ್ನೋ ಪೈಲ್ವಾನನನ್ನು. ಈತ ಸಿದ್ದೇಶ್ ಬಳಗದ ಪರಮ ಭಂಟ. ಖುದ್ದು ಮೋದಿಯೇ ದಾವಣಗೆರೆ ಸಮಾವೇಶಕ್ಕೆ ಬರುವ ಹೊತ್ತಿನಲ್ಲಿ ಜಿಲ್ಲಾ ಬಿಜೆಪಿ ಕಚೇರಿಯೊಳಗೆ ಎರಡೂ ಬಣಗಳು ತಾರಾಮಾರಿ ಹೊಡೆದಾಡಿಕೊಳ್ಳುವಷ್ಟರ ಮಟ್ಟಕ್ಕೆ ಈ ಬೇಗುದಿ ಬಂದು ತಲುಪಿತ್ತು.

ಇದೀಗ ಬಣ ರಾಜಕಾರಣದ ದುಶ್ಮನಿ 2018ರ ಚುನಾವಣಾ ಟಿಕೆಟ್ ಸಮರದತ್ತ ತಿರುಗಿಕೊಂಡಿದೆ. ಯಡಿಯೂರಪ್ಪ ಒಡ್ಡೋಲಗದ ಕುಲಪುರೋಹಿತನಂತಿರುವ


ರವೀಂದ್ರನಾಥ


ಸಿದ್ದೇಶ್ವರ್

ಹಾಗಾಗಿ ರಾಜ್ಯ ರಾಜಕಾರಣದಲ್ಲಿ ಶಾಮನೂರು ಫ್ಯಾಮಿಲಿ ನಮ್ಮನ್ನು ಪ್ರತಿನಿಧಿಸಲಿ, ದಿಲ್ಲಿ ಗದ್ದುಗೆಯಲ್ಲಿ ಬಿಜೆಪಿಯ ಸಿದ್ದೇಶ್ವರ್ ನಮ್ಮ ಮುಖವಾಡವಾಗಿರಲಿ, ಆ ಮೂಲಕ ಕಾಂಗ್ರೆಸ್-ಬಿಜೆಪಿ ಎರಡೂ ಪಾರ್ಟಿಗಳು ನಮ್ಮ ಕೈ ಅಳತೆಯಲ್ಲೇ ಇರಲಿ ಅನ್ನೋದು ಸಾಧು ಲಿಂಗಾಯತ ಮತಗಳ ಟ್ರಿಕ್ಕು. ಎಂಎಲ್‌ಎ ಆಗಿ ಗೆಲುವು ಸಾಧಿಸುತ್ತಿರುವ ಎಸ್.ಎಸ್.ಮಲ್ಲಿಕಾರ್ಜುನ್ ಪದೇಪದೇ ಎಂಪಿ ಎಲೆಕ್ಷನ್‌ನಲ್ಲಿ ಸೋಲುತ್ತಿರೋದಕ್ಕೆ ಇದೇ ಕಾರಣ.

ಆದರೆ ಶಾಮನೂರು ಫ್ಯಾಮಿಲಿಯ ಗಡಸು ಪ್ರಭಾವದೆದುರು ಗೂಂಡಾ ಯಶವಂತನೇ ನನಗೆ ಗೆಲವು ತಂದುಕೊಡುತ್ತಿದ್ದಾನೆ ಅನ್ನೋ ಭ್ರಮೆ ಸಿದ್ದೇಶ್ವರನದ್ದು. ಆ ಕಾರಣಕ್ಕೇ ಆತನನ್ನು ಜಿಲ್ಲಾ ಬಿಜೆಪಿ ಅಧ್ಯಕ್ಷ ಗಾದಿಯಲ್ಲಿ ಕೂರಿಸಿದ್ದು ಮತ್ತು ಮುಂಬರುವ ಚುನಾವಣೆಯಲ್ಲಿ ದಾವಣಗೆರೆ ದಕ್ಷಿಣ ಕೇತ್ರದ ಕೇಸರಿ ಅಭ್ಯರ್ಥಿಯಾಗಿಸಲು


ಚನ್ನಗಿರಿಯಲ್ಲೂ ಹಾಲಿ ಕಾಂಗ್ರೆಸ್ ಶಾಸಕ ವಡ್ನಾಳು ರಾಜಣ್ಣನಿಗೆ ಮತ್ತೊಮ್ಮೆ ಲಕ್ ಒಲಿಯುವಂತೆ ಕಾಣುತ್ತೆ. 2013ರ ಎಲೆಕ್ಷನ್‌ನಲ್ಲಿ ಅಂದಿನ ಶಾಸಕ ಮಾಡಾಳು ವಿರೂಪಾಕ್ಷಪ್ಪ ಯಡ್ಡಿಯ ಕೆಜೆಪಿಯಿಂದ ಕಣಕ್ಕಿಳಿದಿದ್ದರೆ, ಬಿಜೆಪಿ ಹುರಿಯಾಳಾಗಿ ಶಿವಕುಮಾರ್ ಎಂಬ ಅಜ್ಞಾತ ಆಸಾಮಿ ಸ್ಪರ್ಧಿಸಿದ್ದ. ಇವರಿಬ್ಬರೂ ಸಾಧು ಲಿಂಗಾಯತರಾದ್ದರಿಂದ ಬಿಜೆಪಿಯ ಸಾಂಪ್ರದಾಯಿಕ ಮತಗಳು ಇವರಿಬ್ಬರ ನಡುವೆ ಹಂಚಿಹೋದದ್ದರಿಂದ ವಡ್ನಾಳು ರಾಜಣ್ಣ ಗೆದ್ದು ಶಾಸಕನಾಗಲು ಸಾಧ್ಯವಾದದ್ದು. 2018ರ ಚುನಾವಣೆಗೂ ಇದೇ ಲೆಕ್ಕಾಚಾರ ಮುಂದುವರೆಯುವ ಸಾಧ್ಯತೆಯುಂಟು. ಯಾಕೆಂದರೆ ಮಾಡಾಳು ವಿರೂಪಾಕ್ಷಪ್ಪನನ್ನು ಬಿಜೆಪಿ ಅಭ್ಯರ್ಥಿಯಾಗಿಸಲು ಯಡ್ಡಿ-ಸಿದ್ದೇಶ್ ಜೋಡಿ ಸಜ್ಜಾಗಿದ್ದರೆ ಕಳೆದ ಬಾರಿಯ ಶಿವಕುಮಾರ್‌ನನ್ನೇ ಕಣಕ್ಕಿಳಿಸುವಂತೆ ರವೀಂದ್ರನಾಥ


ಇನ್ನು ಹರಪನಹಳ್ಳಿಯಿಂದ 2013ರಲ್ಲಿ ಯ... ಕಣಕ್ಕಿಳಿದಿದ್ದ ಆತನ ಚಾತಸ್ಥ ಕೊಟ್ರೇಶನಿಗೆ ... ಕೊಡಿಸಬೇಕೆನ್ನುವುದು ಸಿದ್ದೇಶ್ವರ ಪ್ಲ್ಯಾನ್. ಆದರ... ಬ್ರದರ್ಸ್ ಖ್ಯಾತಿಯ ಕರುಣಾಕರ ರೆಡ್ಡಿಯನ್ನು ಭೂ... ಗದ್ದಲ ಎಬ್ಬಿಸಬೇಕೆನ್ನುವುದು ರವೀಂದ್ರನಾಥನ ತಂತ್ರ...


## ಶಾಮನೂರು ಫ್ಯಾಮಿಲಿಯ ಲೆಕ್ಕಾಚ...


ಬಿಜೆಪಿ ರಾಜಕೀಯ ಬಣಗಳ ಕಿತ್ತಾಟ... ಶಾಮನೂರು ಫ್ಯಾಮಿಲಿ ಹೇಗೆ ಎನ್‌ಕ್ಯಾಶ್ ಮಾಡಿಕ... ಅನ್ನೋದೆ ಚುನಾವಣಾ ಫಲಿತಾಂಶದ ಚಿತ್ರಣ... ನಿರ್ಧರಿಸಲಿದೆ. ಯಾಕೆಂದರೆ ಕೈಪಾಳೆಯದಲ್ಲೂ ... ಸುಗಮವಾಗಿಲ್ಲ. ಈಗಾಗಲೇ ಶಾಮನೂರು ... ಹಿಡಿತದಿಂದ ಜಿಲ್ಲಾ ಕಾಂಗ್ರೆ ಪಾರ್ಟಿ ಸಡಿಲಗೊ... ಅವರ ರಾಜಕೀಯ ವಾರಸುದಾರನಾಗಿ ಗುರುತಿಸಿಕೊಂ... ಮಗ, ಮಂತ್ರಿ ಎಸ್.ಎಸ್. ಮಲ್ಲಿಕಾರ್ಜುನ್ ... ವರ್ಚಸ್ಸನ್ನು ದಾವಣಗೆರೆ ಸಿಟಿಯಿಂದಾಚೆ ವಿಸ್ತರಿಸುವ... ಆದ್ಯಾಕೋ ನಿರ್ಲಕ್ಷಿಸುತ್ತಲೇ ಬಂದಿದ್ದಾರೆ. 201... ಮಾಯಕೊಂಡ, ಹೊನ್ನಾಳಿ, ಜಗಳೂರು, ಹರಪ... ವಿಧಾನಸಭಾ ಕ್ಷೇತ್ರಗಳಿಂದ ಗೆದ್ದು ಕಾಂಗ್ರೆಸ್ ಶಾಸಕ... ಮುಖಗಳು ಆದಾಗಲೇ ಜನರ ವಿಶ್ವಾಸವನ್ನೇ ಕಳೆದುಕ... ಸೊರಗಿವೆ. ಹರಪನಹಳ್ಳಿಯ ರವೀಂದ್ರ ಗೆದ್ದ ... ಕ್ಷೇತ್ರದತ್ತ ಮುಖ ಮಾಡುವುದನ್ನು ಮರೆತರೆ, ಮಾ... ಕೊಂಡದ ಶಾಸಕ ಶಿವಮೂರ್ತಿನಾಯ್ಕ ಮಂತ್ರಿಗಿ... ವಿಧಾನಸೌಧದ ಮುಂದೆ ಅಂಬೋ ಅಂದರೂ ಒಬ್ಬ... ಬೆಂಬಲಿಗನೂ ಅವನತ್ತ ಸುಳಿಯದಷ್ಟು ಬೇಡಿಕೆ ... ಕೊಂಡಿದ್ದಾನೆ. ಹೊನ್ನಾಳಿಯ ಶಾಸಕ ಶಾಂತನಗೌಡ... ಮತದಾರನ ಕೈಗೆ ಸಿಗುವುದೇ ಅಪರೂಪ.


ದಾವಣಗೆರೆ ಉತ್ತರ, ದಕ್ಷಿಣ ಕ್ಷೇತ್ರಗಳ... ಶಾಮನೂರು ಮನೆತನದ ಮುಷ್ಟಿಯಲ್ಲಿವೆ. ಆದರೆ 20... ಹೊತ್ತಿಗೆ ಪರಿಸ್ಥಿತಿ ಯಾವ್ಯಾವ ದಿಕ್ಕಿನತ್ತ ಹೊರಳಿಕೊ...


ಶ್ಯಾಮನೂರು ಶಿವ... ರಪ್ಪ


ವಡ್ನಾಳ್ ರಾಜಣ್ಣ


ಎಸ್.ಎಸ್. ಮಲ್ಲಿಕಾರ್ಜುನ


ರಾಜೇಶ್


ರವೀಂದ್ರ

ಸಂಸದ ಸಿದ್ದೇಶ್ವರ ಈಗಾಗಲೇ ದಾವಣಗೆರೆಯ ಏಳು ವಿಧಾನಸಭಾ ಕ್ಷೇತ್ರಗಳಿಗೆ ತನ್ನದೇ ಪಟಾಲಮ್ಮಿಗರಿಗೆ ಟಿಕೆಟು ಕೊಡಬೇಕೆಂದು ಪಟ್ಟಿ ಸಿದ್ಧ ಮಾಡಿಕೊಂಡಿದ್ದಾರೆ. ದಾವಣಗೆರೆ ದಕ್ಷಿಣದಿಂದ ಯಶವಂತರಾವ್, ಹೊನ್ನಾಳಿಯಿಂದ 'ನರ್ಸ್' ರೇಣುಕಾ, ಹರಿಹರದಿಂದ ಮಾಜಿ ಶಾಸಕ ಹರೀಶ, ಜಗಳೂರಿನಿಂದ ಮಾಜಿ ಶಾಸಕ ಎಸ್.ವಿ. ರಾಮಚಂದ್ರ, ಚನ್ನಗಿರಿಯಿಂದ ಮಾಜಿ ಶಾಸಕ ಮಾಡಾಳು ವಿರುಪಾಕ್ಷಪ್ಪ, ಹರಪನಹಳ್ಳಿಯಿಂದ ಕೊಟ್ರೇಶ, ಮಾಯಕೊಂಡದಿಂದ ಲಿಂಗಪ್ಪನಿಗೆ ಟಿಕೆಟು ಬೇಕೆನ್ನುವುದು ಸಿದ್ದೇಶ್ವರರ ಪಟ್ಟಿ. ಹಾಗೆ ನೋಡಿದರೆ ಇವರೆಲ್ಲ ಯಡ್ಡಿಯ ಪರಮನಿಷ್ಠರು.

ಯಶವಂತರಾವ್ ಸಿದ್ದೇಶ್ವರನ ಬಲಗೈ ಬಂಟ. ತಾನು ಎಂ.ಪಿ. ಚುನಾವಣೆಯಲ್ಲಿ ಗೆಲ್ಲಲು ಈ ಯಶವಂತರಾವ್‌ನ ಗೂಂಡಾಪಾತ್ರವೇ ಪ್ರಧಾನ ಅನ್ನೋದು ಸಿದ್ದೇಶನ ಭ್ರಮೆ. ಅದಕ್ಕೇ ಆತನಿಗೆ ಇನ್ನಿಲ್ಲದ ಮಣೆ ಹಾಕುತ್ತಿದ್ದಾನೆ. ವಾಸ್ತವ ಸಂಗತಿಯೇನೆಂದರೆ, ಸಿದ್ದೇಶ್ವರನ ಗೆಲುವಿನಲ್ಲಿ ಪಾತ್ರ ವಹಿಸುತ್ತಿರೋದು ಸಾಧು ಲಿಂಗಾಯತ ಮತಗಳ 'ಸೇಫ್' ಪೊಲಿಟಿಕ್ಸ್. ಸಿದ್ದೇಶ್ವರ್ ಮತ್ತು ಶಾಮನೂರು ಫ್ಯಾಮಿಲಿಗಳೆರಡೂ ಇದೇ ಸಮುದಾಯಕ್ಕೆ ಸೇರಿದವು.

ತಯಾರಿ ನಡೆಸಿರೋದು. ಅದೇರೀತಿ, ತಾನು ಬಿಜೆಪಿಯಲ್ಲೇ ಉಳಿದರೂ, ಚನ್ನಗಿರಿಯ ಮಾಜಿ ಶಾಸಕ ಮಾಡಾಳು ವಿರುಪಾಕ್ಷಪ್ಪ ಮತ್ತು ಹರಿಹರದ ಹರೀಶನನ್ನು 2013ರ ಚುನಾವಣೆಯಲ್ಲಿ ಯಡ್ಡಿ ಬೆನ್ನಿಗೆ ಕಳಿಸಿದ್ದ ಸಿದ್ದೇಶ್ವರ್, ಆ ನಂಬಿಕಸ್ಥರಿಗೆ ಅನುಕ್ರಮವಾಗಿ ಚೆನ್ನಗಿರಿ, ಹರಿಹರದ ಟಿಕೆಟು ಕೊಡಿಸಲು ಟೊಂಕ ಕಟ್ಟಿದ್ದಾರೆ.

ಸದ್ಯದ ಪರಿಸ್ಥಿತಿಯಲ್ಲಿ, ಹರಿಹರದಲ್ಲಿ ಜೆಡಿಎಸ್ ಶಾಸಕ ಶಿವಶಂಕರನೆದುರು ಬಿಜೆಪಿ-ಕೈ ಪಾರ್ಟಿಗಳಿಂದ ಯಾವ ಮುಖಗಳೂ ಜನರಿಗೆ ನೆನಪಾಗದ ಸ್ಥಿತಿಯಿದೆ. ಯಡ್ಡಿಯನ್ನು ಅನುಸರಿಸಿ ಕೆಜೆಪಿಗೆ ಹೋಗಿ, ನಂತರ ಶಾಮನೂರು ಅಂಗಳದಲ್ಲಿ ಉರುಳಾಡಿ ಇದೀಗ ಬಿಜೆಪಿ ಪಾದಕ್ಕೆ ಮರಳಿ ಅಪ್ಪಳಿಸಿರುವ ಹರೀಶನನ್ನು ಹರಿಹರದ ಜನ ನಂಬುವುದಿರಲಿ, ಶಾಸಕನಾಗಿ ಕಲ್ಪಿಸಿಕೊಳ್ಳುವುದಕ್ಕೂ ಸಿದ್ಧರಿಲ್ಲ. ಇನ್ನು 2013ರಲ್ಲಿ ಕೈಪಾರ್ಟಿಯಿಂದ ಕಣಕ್ಕಿಳಿದು ಸೋತಿದ್ದ ಕುರುಬರ ರಾಮಪ್ಪ, ಸೋತ ನಂತರ ಕ್ಷೇತ್ರದತ್ತ ಮುಖ ಮಾಡಿಲ್ಲ, ಆತನ ಹೆಸರನ್ನೇ ಜನ ಮರೆತುಹೋಗಿದ್ದಾರೆ. ಕಾಂಗ್ರೆಸ್ ಪಕ್ಷ ಅವನಿಗೇ ಮತ್ತೊಮ್ಮೆ ಟಿಕೆಟ್ ಕೊಟ್ಟು ಕಣಕ್ಕಿಳಿಸಿದರೆ ಜೆಡಿಎಸ್‌ನ ಗೆಲುವು ಮತ್ತಷ್ಟೂ ಸುಲಭವಾಗುತ್ತದೆ ಅಷ್ಟೆ.

ಮುಲುಕಾಡುತ್ತಿದ್ದಾನೆ. ಮಾಡಾಳು ವಿರೂಪಾಕ್ಷಪ್ಪನಿಗೇ ಟಿಕೆಟ್ ಸಿಗುವ ಚಾನ್ಸ್ ದಟ್ಟವಾಗಿದೆಯಾದರೂ ಟಿಕೆಟ್ ತಪ್ಪಿಸಿಕೊಂಡ ಶಿವಕುಮಾರನ ಮೂಲಕ ಆಟ ಆಡಿಸಲು ರವೀಂದ್ರ ಮಸಲತ್ತು ನಡೆಸಿದರೆ ವಡ್ನಾಳು ರಾಜಣ್ಣ ಮಗದೊಮ್ಮೆ ಶಾಸಕನಾಗುವ ಸಂಭವವುಂಟು.

ಇನ್ನು ಜಗಳೂರಿನ ರಾಮಚಂದ್ರ ಯಡ್ಡಿಗೆ ಪರಮಾಪ್ತ. ಆತನಿಗೆ ತಾಲ್ಲೂಕು ಬಿಜೆಪಿಯೊಳಗೆ ಪರ್ಯಾಯ ನಾಯಕನೇ ಇಲ್ಲ, ಹಾಗಾಗಿ ಟಿಕೆಟು ಸಿಗುವುದು ಕಷ್ಟವಲ್ಲ, ಕಾಂಗ್ರೆಸ್‌ನ ಹಾಲಿ ಶಾಸಕ ರಾಜೇಶ್ ಎಸ್.ವಿ. ರಾಮಚಂದ್ರನ ಮುಂದೆ ಸಪ್ಪೆ ಎನಿಸುತ್ತಾನೆ. ಹಾಗಾಗೇ ಎಸ್‌ವಿಯ ನಸೀಬು 2018ರಲ್ಲಿ ಮಿಂಚಿದರೂ ಅಚ್ಚರಿಯಿಲ್ಲ.


ಮಾಯಕೊಂಡದಿಂದ ಲಿಂಗಪ್ಪನನ್ನು ಕಣಕ್ಕಿಳಿಸಲು ಯಡ್ಡಿ ಪಟಾಲಮ್ಮು ರೆಡಿಯಾಗಿದೆ. ಈತ ಕಳೆದ ಬಾರಿ ಕೆಜೆಪಿಯಿಂದ ಅಖಾಡದಲ್ಲಿದ್ದ. ಅಸಲಿಗೆ ಈ ಲಿಂಗಪ್ಪ ರವೀಂದ್ರನಾಥನ ಪಾದಕ್ಕು. ಆದರೂ ಯಡ್ಡಿ ಸೈಡಿಗೆ ಜಂಪಾಗಿದ್ದಾನೆ. ಸಿದ್ದೇಶ್ವರನ ಟೀಮಿಗೆ ಅಡ್ಡಗಾಲು ಹಾಕಬೇಕು ಅಂತಲೇ ರವೀಂದ್ರನಾಥ, ಕಳೆದ ಬಾರಿ ಬಿಜೆಪಿಯಿಂದ ಸ್ಪರ್ಧಿಸಿದ್ದ ಬಸವರಾಜ ನಾಯ್ಕನಿಗೇ ಟಿಕೆಟು ಕೊಡಬೇಕೆನ್ನುವ ಫಾರ್ಮುಲ ತೇಲಿಬಿಟ್ಟಿದ್ದಾನೆ.


ಬಲ್ಲವರಿಲ್ಲ. ಸದ್ಯ ದಕ್ಷಿಣ ಕ್ಷೇತ್ರದಿಂದ ಶಿವಶಂಕರಪ್ಪ ... ಕ್ಷೇತ್ರದಿಂದ ಮಲ್ಲಿಕಾರ್ಜುನ ಶಾಸಕರಾಗಿ ಆಯ್ಕೆಯಾಗಿ... ದಾವಣಗೆರೆ- ಸ್ಮಾರ್ಟ್‌ಸಿಟಿಯಾಗುವ ಭರ್ಜರಿ ತ... ನಡೆದಿರುವುದು ಮಲ್ಲಿಕಾರ್ಜುನರಿಗೆ ಲಾಭವಾಗಬಹು... 2013ರ ಚುನಾವಣೆಯಲ್ಲಿ ಶಾಮನೂರು ಶಿವಶ... "ಇದೇ ನನ್ನ ಕೊನೆಯ ಚುನಾವಣೆ. 2018ರಲ್ಲಿ ... ಸ್ಪರ್ಧಿಸುವುದಿಲ್ಲ, ಮುಂದೆ ಮುಸ್ಲಿಮರಿಗೇ ಟಿಕೆಟು" ... ಹೇಳಿ ಅನಾಯಾಸವಾಗಿ ಗೆದ್ದು ಬಂದಿದ್ದರು. ... ಶಿವಶಂಕರಪ್ಪ ತಮ್ಮ ಮನಸ್ಸನ್ನು ಬದಲಾಯಿಸಿಕೊ... ಬಹಳ ಸಮಯವೇನೂ ಬೇಕಾಗಿಲ್ಲ. ಹಾಗೊಂದು... ಮುಸ್ಲಿಮ್ ನಾಯಕರು ಕೈಪಾರ್ಟಿಯ ... ಮುನಿಸಿಕೊಂಡರೂ ಮತದಾರ ಶಿವಶಂಕರಪ್ಪನವರಿಗೆ ... ಎನ್ನುವುದು ಅನುಮಾನವಿಲ್ಲ. ಯಾಕೆಂದರೆ ಬಿಜೆಪಿಯ... ಮಾಜಿ ಪೈಲ್ವಾನ, ಎಂ.ಪಿ ಸಿದ್ದೇಶ್ವರ ಪಾಲಿನ ಗ... ಯಶವಂತ ಕಣಕ್ಕಿಳಿದಿರುತ್ತಾನಾದ್ದರಿಂದ ಜನರಿಗೆ ಶಿವಶ... ಮತ್ತೆ ಅನಿವಾರ್ಯವಾದರೂ ಆಗಬಹುದು.

ಇನ್ನು ಉತ್ತರ ಕ್ಷೇತ್ರದಲ್ಲಿ ಎಸ್.ಎಸ್. ಗೆಲ್ಲುವ ಸ... ಹೆಚ್ಚಿದೆ. ಯಾಕೆಂದರೆ ಮಂತ್ರಿ ಮಲ್ಲಿಕಾರ್ಜುನನ... ಮಾಜಿಮಂತ್ರಿ ಬಿಜೆಪಿಯ ರವೀಂದ್ರನಾಥ ಸ್ಪರ್ಧಿಸುವ... ಗ್ಯಾರಂಟಿ. ರವೀಂದ್ರನಾಥನನ್ನು ಸೋಲಿಸಲು ಕಾಂಗ್ರೆಸ್... ಸಿದ್ದೇಶ್ವರರ ಬಿಜೆಪಿ ಪಟಾಲಮ್ಮೇ ಹೆಚ್ಚು ಕಸರತ್ತು ನಡ... ಸಾಧ್ಯತೆ ಇರೋದರಿಂದ ಮಲ್ಲಿಕಾರ್ಜುನ್ ... ಶ್ರಮಪಡುವ ಅಗತ್ಯವಿಲ್ಲ.


ಇದು ದಾವಣಗೆರೆ ಜಿಲ್ಲೆಯ ಸದ್ಯದ ರಾಜ... ಚಿತ್ರಣ. ಬಿಜೆಪಿಯೊಳಗೆ ಕಾಲೆಳೆಯುವ ಕಬಡ್ಡಿ ಜೋ... ನಡೆಯುತ್ತಿದ್ದು ಶಾಮನೂರು ಧಣಿಯ ಕಾಂ... ಖೋ-ಖೋ ಆಟ ಪಕ್ಕಕ್ಕಿಟ್ಟು ಮತತಂತ್ರ ... ಆದಲ್ಲಿ ಜಿಲ್ಲೆಯಲ್ಲಿ ಮತ್ತೊಮ್ಮೆ ತಮ್ಮ ಪ್ರ... ಸಾಧಿಸಬಹುದು.

■ ಟಿ.ಎನ್.ಷಣ್ಮು...



ಕರುಣಾಕರ ರೆಡ್ಡಿ


ರೇಣು...


ರಾಮಚಂದ್ರ


ಹರೀಶ

# ಮೈಸೂರು: ಸಿದ್ದು ದುಶ್ಮನ್‌ಗಳ ಸಾಲಿಗೆ ಎಚ್.ವಿಶ್ವನಾಥ್!


...ನಾಥ್

2018ರ ನಿರ್ಣಾಯಕ ದಿನಗಳು ಸನಿಹಕ್ಕೆ ಸರಿದಂತೆ ...ನೊಳಗಿನ ಒಳಜಗಳ ತಾರಕಕ್ಕೇರುತ್ತಿದೆ. ಒಂದುಕಡೆ ...ಇಬ್ರಾಹಿಂ ಜೆಡಿಎಸ್ ಸೇರಿಕೊಳ್ಳಲು ಒಂದು ಕಾಲು ...ಇಟ್ಟು ನಿಂತಿದ್ದಾರೆ. ಅದಕ್ಕಾಗಿ ಹೋದಲೆಲ್ಲ ...ಗೌಡರನ್ನು ಹಾಡಿಹೊಗಳುತ್ತಿದ್ದಾರೆ. ಕಳೆದ ...ವಣೆಯಲ್ಲಿ ಸೋತರೂ ಯೋಜನಾ ಆಯೋಗದ ...ಧ್ಯಕ್ಷರನ್ನಾಗಿ ಮಾಡಿ ಸಚಿವಗಿರಿಯ ಸ್ಥಾನಮಾನ ಕೊಟ್ಟಿದ್ದ ...ಮಂತ್ರಿ ಸಿದ್ದರಾಮಯ್ಯನ ವಿಶ್ವಾಸಕ್ಕೆ ಇಬ್ರಾಹಿಂ ಬೆನ್ನು ...ಇರುವುದರ ಹಿಂದೆ ಏನಡಗಿದೆಯೋ ಗೊತ್ತಿಲ್ಲ.

...ನ್ನು ಸೊಸೆ ಹೊಕ್ಕ ಮನೆಯ ಅತ್ತೆಯಂತಾಗಿರುವ ...ನ ಪೂಜಾರಿ ಸದಾ ಸಿದ್ದರಾಮಯ್ಯ ಹಾಗೂ ... ಮಂತ್ರಿಮಂಡಲ ಕೆಣಕುವುದನ್ನೇ ಕಾಯಕ ...ಕೊಂಡಿದ್ದಾರೆ. ಜಾಫರ್ ಷರೀಫ್ ಅಧಿಕಾರ ಸಿಕ್ಕರೆ ...ನಿರುವುದು ಇಲ್ಲದಿದ್ರೆ ಬಾಯಿ ಬಡಕೊಳ್ಳುವುದು ...ತಾಗಿದ್ದಾರೆ.

...ತ್ತ ಶಿವಮೊಗ್ಗ ರಾಜಕಾರಣದಲ್ಲಿ ಬಾಹರ್ ದುಶ್ಮನಿ, ... ಕಾ ದುಶ್ಮನಿಗಳ ಜೊತೆ ಕಾದಾಡಲಾಗದೆ


ಅಂತವರನ್ನು ಸಿದ್ದರಾಮಯ್ಯ ಕಡೆಗಣಿಸಿದ್ದಾರೆ ಅನ್ನೋದು ಹಾಸ್ಯಾಸ್ಪದ. ವಾಸ್ತವವೇನೆಂದರೆ ಕಡೆಗಣಿಸಿರೋದು ಸಿದ್ದರಾಮಯ್ಯನ ಸರ್ಕಾರವಲ್ಲ, ಸ್ವತಃ ಕಾಂಗ್ರೆಸ್ ಹೈಕಮಾಂಡೇ ಕೃಷ್ಣರನ್ನು ಮೂಲೆಗೆ ತಳ್ಳಿತ್ತು. ಹಿಂದಿನ ಅವಧಿಯಲ್ಲಿ ಕಾಡಾ ರಾಜ್ಯದ ಕಾಂಗ್ರೆಸ್ ಕಾರ್ಯಾಧ್ಯಕ್ಷರಾಗಿದ್ದ ಕೃಷ್ಣ ಅವರ ಪರಮಾಪ್ತ, ದಿನದ 24 ಗಂಟೆಯೂ ಕೃಷ್ಣರವರ ಮನೆಯಲ್ಲೇ ಬಿದ್ದು ಒದ್ದಾಡುತ್ತಿದ್ದ ವ್ಯಕ್ತಿಯನ್ನು ಸಚಿವನಾಗಿ ನೇಮಕ ಮಾಡಿದ್ದು ಅವರಿಗೆ ಸಿಗಬೇಕಾದ ಸ್ಥಾನಮಾನ ಸಿಕ್ಕಿತ್ತು ಅನ್ನೋದಕ್ಕೆ ಸಾಕ್ಷಿ.

ಮಾಜಿ ಸಚಿವ, ಮಾಜಿ ಸಂಸದ ಅಡಗೂರು ಎಚ್.ವಿಶ್ವನಾಥ್ ಕೂಡಾ ಇದಕ್ಕೆ ಹೊರತಾಗಿಲ್ಲ ಎಂಬುದು ವಿಪರ್ಯಾಸ. ಸಿದ್ದರಾಮಯ್ಯರನ್ನು ಕಾಂಗ್ರೆಸ್‌ಗೆ ಕರೆತಂದ ವಿಶ್ವನಾಥ್‌ರೇ ಈಗ ಸಿದ್ದು ನೇತೃತ್ವದ ಕಾಂಗ್ರೆಸ್ ಸರ್ಕಾರದ ವಿರುದ್ಧ ಕೂಗಾಡುತಿದ್ದಾರೆ. ಸಿದ್ದು ಮುಖ್ಯಮಂತ್ರಿಯಾದರೆ ಒಂದಿಷ್ಟು ಬದಲಾವಣೆ ತರಬಹುದು ಎಂಬುದು ಅವರ ಉದ್ದೇಶವಾಗಿತ್ತಲ್ಲವೆ. ಆ ಕಾರಣದಿಂದಲೇ ವಿಶ್ವನಾಥ್ ಅವರು ಸಿದ್ದರಾಮಯ್ಯ ಅವರನ್ನು ಕಾಂಗ್ರೆಸ್‌ಗೆ ಕರೆತಂದು ಅವರು ಮುಖ್ಯಮಂತ್ರಿಯಾಗಲು ಒಂದು ರೀತಿ ಕಾರಣರಾಗಿದ್ದರು. ಒಂದಂತೂ ನಿಜ: ವಿಶ್ವನಾಥ್ ಪಕ್ಷದೊಳಗಿನ ವಿಮರ್ಶಕ, ಅಲ್ಲದೇ ಕವಿ ಮನಸ್ಸಿನ ವ್ಯಕ್ತಿ, ಹಾಗೆ ಯಾರನ್ನೂ ಸುಖಾಸುಮ್ನೆ ಅಷ್ಟೊಂದು ಕಠಿಣವಾಗಿ ನಿಂದಿಸಲಾರರು. ಆದರೆ ಇತ್ತೀಚೆಗೆ ಸಿದ್ದು ನೇತೃತ್ವದ ರಾಜ್ಯ ಸರ್ಕಾರ ಹಾಗೂ ಪಕ್ಷದ ಹೈಕಮಾಂಡ್ ನಾಯಕರ ಮಾನ ಮರ್ಯಾದೆಯನ್ನು ಬೀದಿಯಲ್ಲಿ ಹರಾಜು ಹಾಕುತ್ತಿದ್ದಾರೆ. ಏಕೆ ಹೀಗಾಯಿತು ಎಂದು ಹೇಳಲಾಗುತ್ತಿಲ್ಲ, ವಿಶ್ವನಾಥ್ ತನಗನ್ನಿಸಿದ್ದನ್ನು ಪಕ್ಷದ ಸಭೆಗಳಲ್ಲಿ ನೇರವಾಗಿ ಹೇಳುವ ಮನುಷ್ಯ. ಅದರೆ ಅದೇಕೋ ಇತ್ತೀಚೆಗೆ ಪೂಜಾರಿಯಂತೆ ಅವಕಾಶ ಸಿಕ್ಕಾಗಲೆಲ್ಲ ಸಿದ್ದು ಸರ್ಕಾರವನ್ನು ಹಣಿಯಲು ಶುರು ಮಾಡಿದ್ದಾರೆ. ಇದನ್ನು ನೋಡಿದರೆ ವಿಶ್ವನಾಥ್ ಸಿದ್ದು ಮೇಲೆ ದ್ವೇಷ ಸಾಧಿಸುತ್ತಿರುವಂತೆ ಕಾಣುತ್ತಿದೆ. ಮೊನ್ನೆ ಕೂಡಾ ಮೈಸೂರಿನ ಹೊಟೇಲ್ ಒಂದರಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಮತ್ತು ಮುಖಂಡರ ಸಭೆ ನಡೆಸಿ ಸಿದ್ದು ಸರ್ಕಾರವನ್ನು,


ಅದು ಪಕ್ಷವಿರೋಧಿ ಅಲ್ಲವೇ? ಪಕ್ಷದ ಕಾರ್ಯಕರ್ತರು ಮಾತಾಡದೇ ಹೋದರೆ ಪಕ್ಷ ಮರೆತು ಬಿಡಬೇಕು. ಪಕ್ಷದ ಬಗ್ಗೆ ಮಾತಾಡುವ ನನ್ನನ್ನು 'ಅವನೊಬ್ಬ ಹುಚ್ಚ ಬಿಡಿ ಮಾತಾಡುತ್ತಾರೆ' ಅಂತಾರೆ. ನಾನು ಪಕ್ಷದಲ್ಲಿ ಉಳಿಯಬೇಕಾ, ಅವಮಾನ ಸಹಿಸಿಕೊಂಡು ಇರಬೇಕಾ? ಸರ್ಕಾರ ನಡೆಸುವ ವಿಚಾರದಲ್ಲಿ ಮತ್ತು ಪಕ್ಷದಲ್ಲಿ ನಡೆಯುತ್ತಿರುವ ಬೆಳವಣಿಗೆ ಬಗ್ಗೆ ನಾವು ಕೊಡುವ ಸಲಹೆಯನ್ನು ತಪ್ಪಾಗಿ ಅರ್ಥೈಸಿಕೊಂಡರೆ ಅದು ನನ್ನ ತಪ್ಪೇ" ಎಂದು ಪಕ್ಷದ ಅಧ್ಯಕ್ಷ ಮತ್ತು ಸಿದ್ದರಾಮಯ್ಯ ಅವರ ವಿರುದ್ಧ ಕೂಗಾಡಿದ್ದಾರೆ.


"ಕಳೆದ 40 ವರ್ಷಗಳಿಂದ ಕಾಂಗ್ರೆಸ್‌ನಲ್ಲಿ ದುಡಿದಿರುವ ನನ್ನ ಸೇವೆ ಗಮನಿಸದೆ ನೋಟಿಸ್ ಕೊಡುತ್ತಾರೆ. ಸರ್ಕಾರದ ಚುಕ್ಕಾಣಿ ಹಿಡಿದಿರುವವರು, ಕೆಪಿಸಿಸಿ ಅಧ್ಯಕ್ಷರು ಸೇರಿದಂತೆ ಮುಖಂಡರು ತಮ್ಮ ನಡವಳಿಕೆಗಳನ್ನು ಬದಲಾಯಿಸಿಕೊಳ್ಳಬೇಕು. ಜನರನ್ನು, ಕಾರ್ಯಕರ್ತರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಬೇಕು. ಇಲ್ಲದಿದ್ದರೆ ಜನರೇ ನಿಮಗೆ ಪಾಠ ಕಲಿಸುತ್ತಾರೆ" ಎಂದಿರುವ ವಿಶ್ವನಾಥ್, "ಡೈರಿ ಬಗ್ಗೆ ಹೈಕಮಾಂಡ್ ಗಮನಿಸಬೇಕು. ಈ ಷಡ್ಯಂತ್ರ ಗೊತ್ತಾಗಬೇಕು. ನಾವು ಎಚ್ಚರ, ಜಾಗೃತ, ಧೈರ್ಯದಿಂದ ನಿಂತು ಪ್ರಶ್ನಿಸದಿದ್ದರೆ ನಾವು ಕಾಂಗ್ರೆಸ್ ಮರೆತುಬಿಡಬೇಕು" ಎಂದರು. "ನಾನೊಬ್ಬ ನಿಷ್ಠಾವಂತ ಕಾಂಗ್ರೆಸ್ಸಿಗ. ಪಕ್ಷದಲ್ಲಿ ಅವಮಾನ ಸಹಿಸಿಕೊಂಡು ಇರಬೇಕಾ?" ಎಂದು ಸಭೆಯಲ್ಲಿ ಹಾಜರಿದ್ದ ಮುಖಂಡರಲ್ಲಿ ಪ್ರಶ್ನಿಸುವ ಮೂಲಕ ಅಭಿಪ್ರಾಯ ಸಂಗ್ರಹಿಸಿದ್ದಾರೆ. ಹಾಜರಿದ್ದವರು ವಿಶ್ವನಾಥ್‌ಗೆ ಜೈ ಎಂದು ಜೈಕಾರ ಹಾಕಿದ್ದಾರೆ.


ಆದರೆ ಆ ಸಭೆಯಲ್ಲಿ ಹಾಜರಿದ್ದ ಇತ್ತೀಚೆಗೆ ಕಾಂಗ್ರೆಸ್‌ನಲ್ಲಿ ಚಿಗುರೊಡೆಯುತ್ತಿರುವ ಎನ್.ಧ್ರುವರಾಜ್ ಮಾತನಾಡಿದ್ದನ್ನು ಕೇಳಿದರೆ ಅವನ ಒಳಗಿನ ಅಧಿಕಾರ ಆಸೆ ಎಷ್ಟಿದೆ ಎಂಬುದು ತಿಳಿಯುತ್ತದೆ. "ರಾಜ್ಯದಲ್ಲಿ 4 ವರ್ಷ ಅಧಿಕಾರದಲ್ಲಿದ್ದು ಕಾಂಗ್ರೆಸ್ ಅನ್ನು ಸರ್ವನಾಶ ಮಾಡಿ ಕೊಳ್ಳೆ ಹೊಡೆದಿದ್ದಾರೆ. ಇನ್ನು ಉಳಿದಿರುವ 1 ವರ್ಷವೂ ಅಧಿಕಾರದಲ್ಲಿದ್ದು ಕೊಳ್ಳೆ ಹೊಡೆಯಬೇಕೆಂದು ಕೊಂಡಿದ್ದಾರೆ. ಆ ಮೂಲಕ ಕಾಂಗ್ರೆಸ್ ಅನ್ನು ರಾಜ್ಯದಲ್ಲಿ



ಸಿದ್ದರಾಮಯ್ಯ


ಸದಸ್ಯರೂ ಆದ ಪುಷ್ಪಲತಾ ಟಿ.ಬಿ.ಚಿಕ್ಕಣ್ಣ, ಎಚ್.ಎನ್.ಶ್ರೀಕಂಠಯ್ಯ, ಮಾಜಿ ಉಪ ಮಹಾಪೌರರಾದ ಪುಷ್ಪವಲ್ಲಿ, ಮಾಜಿ ಮಹಾಪೌರ ಟಿ.ಬಿ.ಚಿಕ್ಕಣ್ಣ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸೋಮಶೇಖರ್, ಜಿಲ್ಲಾ ಕಾಂಗ್ರೆಸ್ ಹಿಂದುಳಿದ ವರ್ಗಗಳ ವಿಭಾಗದ ಅಧ್ಯಕ್ಷ ಕೋಟೆಹುಂಡಿ ಮಹದೇವ್, ನಗರ ಯುವ ಕಾಂಗ್ರೆಸ್ ಮಾಜಿ ಅಧ್ಯಕ್ಷ ಶೌಕತ್ ಅಲಿ, ಹಿರಿಯ ಮುಖಂಡರಾದ ವಕೀಲ ಎಚ್.ಅರವಿಂದ್, ಕೃಷ್ಣಪ್ಪ, ಲೋಕನಾಥ್ ಗೌಡ, ಎನ್‌ಎಸ್‌ಯುಐ ಮಾಜಿ ಅಧ್ಯಕ್ಷ ಚೇತನ್, ರೇಣುಪ್ರಸನ್ನ, ಬ್ಲಾಕ್ ಕಾಂಗ್ರೆಸ್ ಮಾಜಿ ಅಧ್ಯಕ್ಷ ರೇವಣ್ಣ, ಅಲ್ಲಾಭಕ್ಷ್, ಎಂ.ಎ.ಅರ್ಕೇಶ್ವರಯ್ಯ, ವಕೀಲ ಜೆ.ಎನ್.ಲಕ್ಷ್ಮಣ್, ಕುರುಬರಹಳ್ಳಿ ಜಿ.ಪ್ರಕಾಶ್, ಮುಡಾ ಮಾಜಿ ಸದಸ್ಯರಾದ ನಾರಾಯಣಸ್ವಾಮಿ, ಲತಾ ಮೋಹನ್, ಎಂಡಿಸಿಸಿ ಬ್ಯಾಂಕ್ ನಿರ್ದೇಶಕ ಯು.ಎಸ್.ರಮೇಶ್, ನಗರ ಕಾಂಗ್ರೆಸ್ ಕಾರ್ಯದರ್ಶಿ ಈಶ್ವರ ಚಕ್ಕಡಿ, ವೆಂಕಟಸುಬ್ಬಯ್ಯ, ಪಾರ್ಥಸಾರಥಿ... ಇವರೆಲ್ಲ ಅಧಿಕಾರಕ್ಕಾಗಿ ಹಪಹಪಿಸಿ ಬಾಯಿ ಒಣಗಿಸಿಕೊಂಡವರು.


ಇಬ್ರಾಹಿಂ


ಜನಾರ್ದನ ಪೂಜಾರಿ


ಜಾಫರ್ ಶರೀಫ್


ಎಸ್.ಎಂ. ಕೃಷ್ಣ


ಕುಮಾರ್ ಬಂಗಾರಪ್ಪ

...ಮೋರೆ ಹಾಕಿಕೊಂಡಿರುವ ಕುಮಾರ್ ಬಂಗಾರಪ್ಪ ... ತಂದೆಯಂತೆಯೇ ಪಕ್ಷಾಂತರ ಫಾರ್ಮುಲಾಕ್ಕೆ ...ಬಿದ್ದಿದ್ದಾರೆ. ಈ ಸಲ ಯಡಿಯೂರಪ್ಪನ ಹಣಬಲ, ...ಲದ ಮುಂದೆ ಮಂಡಿಯೂರಿ ಕೂತು, ಕಾಂಗ್ರೆಸ್ ...ರ ವಿರುದ್ಧವೇ ತಿರುಗಾಮುರುಗ ಮಾತನಾಡಲು ...ಾಡಿದ್ದಾರೆ. ಸಿದ್ದರಾಮಯ್ಯ ಸರ್ಕಾರದಲ್ಲಿ ಹಿರಿಯರನ್ನು ...ಸಲಾಗುತ್ತಿದೆ, ಆದಕ್ಕೆ ನನಗೆ ಬೇಸರವಾಗಿ ಪಕ್ಷ ...ಬಿಡುತ್ತಿದ್ದೇನೆ ಅಂತ ಕುಮಾರ ಬಂಗಾರಪ್ಪ ಸಬೂಬು ...ಕರೂ ಆತನ ತಲೆಯೊಳಗೆ ಓಡುತ್ತಿರುವ ...ಚನೆಯೇ ಬೇರೆ. ಹೇಳಿಕೇಳಿ ಶಿವಮೊಗ್ಗ ಸುತ್ತಮುತ್ತ ...ಯೂರಪ್ಪ ಪ್ರಬಲವಾಗಿ ಬೇರೂರಿದ್ದಾರೆ. ಅವರನ್ನು ...ಯಾರಿಂದಲೂ ಅಲ್ಲಾಡಿಸಲು ಸಾಧ್ಯವಿಲ್ಲ, ಅವರನ್ನು ...ಸಬೇಕೆಂದರೆ ಪ್ರಬಲ ನಾಯಕನೇ ಬರಬೇಕು. ಆತ ...ಂತಲೂ ಸ್ಮಾರ್ಟ್ ರಾಜಕಾರಣಿಯಾಗಿರಬೇಕು. ... ಯಾವ ಲಕ್ಷಣಗಳೂ ತನ್ನಲ್ಲಿಲ್ಲ, ಸುಮ್ನೆ ಸೋತು ...ಭಂಗ ಅನುಭವಿಸುವುದಕ್ಕಿಂತ ಗೆದ್ದೆತ್ತಿನ ಬಾಲ ...ಬಿಡೋಣ ಅನ್ನೋದು ಕು.ಬಂ ಲೆಕ್ಕ. ಆದಕ್ಕೆ ...ಂಬಂತೆ ಮೊನ್ನೆ ಯಡಿಯೂರಪ್ಪನ ಹುಟ್ಟುಹಬ್ಬದ ... ಅವರ ಮನೆಗೇಹೋಗಿ ಅಭಿನಂದಿಸಿ ಬಂದಿದ್ದಾರೆ.

...ಗಾಗಲೇ ಹಿರಿತನಕ್ಕೆ ಅಗೌರವದ ಕಾರಣಕೊಟ್ಟು ...ರಿನ ಕೃಷ್ಣ ಗಾರುಡಿಯ ಡ್ರಾಮಾ ಒಂದು ಹಂತ ...ದೆ. ಅಷ್ಟಕ್ಕೂ, ಕೃಷ್ಣ ಅವರೇನು ಪಕ್ಷದ ಸಣ್ಣ ...ಕರ್ತರಲ್ಲ, ಸಿದ್ದರಾಮಯ್ಯನವರಿಗಿಂತ ಪ್ರಭಾವಿ ... ಹೈಕಮಾಂಡ್‌ನಲ್ಲಿ ಪ್ರಭಾವ ಹೊಂದಿರುವವರು.

ಹೈಕಮಾಂಡನ್ನು ವಾಚಾಮಗೋಚರ ತೆಗಳಿದ್ದಾರೆ.

ಅವರು ಆ ಸಭೆ ಸೇರಿಸಿದ್ದ ಉದ್ದೇಶ, ವಿಶ್ವನಾಥ್ ಫೋನ್‌ಗೆ ಕಾಂಗ್ರೆಸ್ ಪಕ್ಷದ ಕಚೇರಿಯಿಂದ ಒಂದು ವಾಟ್ಸ್‌ಆಪ್ ಸಂದೇಶ ಬಂದಿತ್ತು, ಅದರಲ್ಲಿ ಪಕ್ಷದ ವಿರುದ್ಧ ಹರಿಹಾಯುವುದನ್ನು ನಿಲ್ಲಿಸಿ ಅನ್ನೋ ಸಾಫ್ಟ್ ಎಚ್ಚರಿಕೆಯಿತ್ತು. ಅಷ್ಟಕ್ಕೇ ಸಭೆ ಕರೆದು ಗೋಳಾಡಿದ್ದಾರೆ, ಕೂಗಾಡಿದ್ದಾರೆ.

"ಈ ನೋಟಿಸ್ ನನಗೆ ತೀವ್ರ ಮುಜುಗರ ಉಂಟುಮಾಡಿದೆ" ಅಂತಲೇ ಮಾತು ಶುರುಮಾಡಿದ ವಿಶ್ವನಾಥರು ಪಕ್ಷದವರನ್ನು ಕುರಿತು ನಿಮಗೇನಾದರೂ ತಲೆ ಇದೆಯಾ, ಕಾಮನ್‌ಸೆನ್ಸ್ ಇದೆಯಾ, ನೋಟಿಸ್ ಕೊಡುವುದಾದರೆ ಕೊಡಿ, ಎಲ್ಲೆಲ್ಲೂ ಅದನ್ನೇ ಹೇಳಿಕೊಂಡು ತಿರುಗುತ್ತೀರಲ್ಲ, ಪಕ್ಷದಿಂದ ತೆಗೆಯಬೇಕಾದರೆ ತೆಗೆದುಬಿಡಿ ಸ್ವಾಮಿ, ಅದು ಬಿಟ್ಟು ಈ ರೀತಿ ಅವಮಾನ ಮಾಡಬೇಡಿ ಅಂತ ಕಾಂಗ್ರೆಸ್ ನಾಯಕರನ್ನು ತೀವ್ರ ತರಾಟೆಗೆ ತೆಗೆದುಕೊಂಡಿದ್ದರು.

"ಶಾಸಕಾಂಗ ಸಭೆಯಲ್ಲಿ ನನ್ನ ವಿರುದ್ಧ ಶಾಸಕರಿಂದ ಮಾತಾಡಿಸುತ್ತೀರಾ, ಆ ಮೂಲಕ ಶಾಸಕರನ್ನು ಎತ್ತಿಕಟ್ಟುತ್ತೀರಾ. ನಮಗೆ ಅಧಿಕಾರ ಕೊಡಿ ಅಂತಾ ಕೇಳುತ್ತಿಲ್ಲ, ಹಿರಿಯರಿಗೆ ಗೌರವಕೊಡಿ ಎಂದು ಕೇಳುತ್ತೇವೆ. ನೀವು ನಮಗೆ ದ್ವೇಷ ಮನೋಭಾವದಿಂದ ನೋಟಿಸ್ ಕೊಡುತ್ತೀರಿ" ಎಂದಿದ್ದಾರೆ. "ನಮ್ಮ ಜೊತೆ ಕೆಪಿಸಿಸಿ ಅಧ್ಯಕ್ಷರು ಅಥವಾ ಮುಖ್ಯಮಂತ್ರಿ ಆಗಲಿ ಒಂದು ಬಾರಿ ಮಾತಾಡಿದ್ದಾರಾ, ನನ್ನನ್ನು ಲೋಕಸಭೆ ಚುನಾವಣೆಯಲ್ಲಿ ಸೋಲಿಸಿದವರು ಇವತ್ತು ಪಕ್ಷದಲ್ಲಿ ಅಧಿಕಾರದಲ್ಲಿ ಇಲ್ವಾ?

ಧೂಳೀಪಟ ಮಾಡುತ್ತಿದ್ದಾರೆ. ಅಧಿಕಾರದಲ್ಲಿರುವವರು ನಿಷ್ಠಾವಂತ ಕಾಂಗ್ರೆಸಿಗರನ್ನು ಕಡೆಗಣಿಸಿದ್ದಾರೆ. ಈಗಲಾದರೂ ಉಳಿದಿರುವ 1 ವರ್ಷದಲ್ಲಿ ಬದಲಾವಣೆ ತರದಿದ್ದರೆ, ಕಾಂಗ್ರೆಸ್ ಏನಾಗುತ್ತದೆ ಎಂಬುದು ಊಹಿಸಲೂ ಸಾಧ್ಯವಿಲ್ಲ" ಎಂದು ಎಗರಾಡಿರುವ ಈ ಧ್ರುವರಾಜ್ ತನ್ನಲ್ಲಿರುವ ಹಣದಿಂದ ಕಾಂಗ್ರೆಸ್‌ನಲ್ಲಿ ಗುರುತಿಸಿಕೊಂಡು ಸರ್ಕಾರ ಸಂಸ್ಥೆಗಳಲ್ಲಿ ಆಯಕಟ್ಟಿನ ಜಾಗ ನಿರೀಕ್ಷೆ ಇಟ್ಟುಕೊಂಡಿದ್ದವನು. ಆದರೆ ಕಾರ್ಯಕರ್ತರಂತೆ ಕೆಲಸವನ್ನೆ ಮಾಡದೆ ಅಧಿಕಾರ ಬಯಸಿ ಅದು ಸಿಗದಿದ್ದಾಗ ಈ ರೀತಿ ಪರಚಿಕೊಂಡರೆ ಜನ ಒಪ್ಪಿಬಿಡುತ್ತಾರೆಯೇ.

ಆ ಸಭೆಯಲ್ಲಿ ಭಾಗವಹಿಸಿದ್ದ ಬಹುತೇಕ ಮುಖಂಡರು ಅಧಿಕಾರ ಸಿಗದ ಹತಾಶೆಯಿಂದಲೇ ಅಲ್ಲಿ ಮೈಕೈ ಪರಚಿಕೊಂಡರು.

ಆ ಸಭೆಯಲ್ಲಿ ಹಾಜರಿದ್ದ ಮುಖಂಡರುಗಳು: ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ಪಿ.ಗೋವಿಂದರಾಜು, ಜಿಲ್ಲಾ ಕಾಂಗ್ರೆಸ್ ಪರಿಶಿಷ್ಟ ಜಾತಿ ವಿಭಾಗದ ಅಧ್ಯಕ್ಷ ಆರ್.ಸೋಮಸುಂದರ್, ಮಾಜಿ ಮಹಾಪೌರರಾದ ದಕ್ಷಿಣಾ ಮೂರ್ತಿ, ಮೋದಾಮಣಿ, ಎಂಡಿಸಿಸಿ ಬ್ಯಾಂಕ್ ಅಧ್ಯಕ್ಷ ಎಸ್.ಚಂದ್ರಶೇಖರ್, ಕೆಎಸ್‌ಐಸಿ ಮಾಜಿ ಅಧ್ಯಕ್ಷ ಅಬು ಅಹಮದ್, ಕರ್ನಾಟಕ ಮೃಗಾಲಯ ಪ್ರಾಧಿಕಾರದ ಮಾಜಿ ಅಧ್ಯಕ್ಷೆ ಸುಶೀಲಾ ಕೇಶವಮೂರ್ತಿ, ಮಹಾನಗರ ಪಾಲಿಕೆ ಸದಸ್ಯರಾದ ಎಂ.ಡಿ.ನಾಗರಾಜ್, ಪ್ರಶಾಂತಗೌಡ, ಕೆ.ಸಿ.ಶೌಕತ್ ಪಾಶಾ, ರಮೇಶ್, ಪಿ.ದೇವರಾಜು, ಭಾಗ್ಯ ಮಾಜಿ ಮಹಾಪೌರರು ಹಾಲಿ


ಈ ಮುಂಚೆ ಪಕ್ಷ ತ್ಯಜಿಸಿದ ಪ್ರಸಾದ್ ಅಧಿಕಾರಕ್ಕಾಗಿ ಪಕ್ಷ ಬಿಟ್ಟರು. ಅವರನ್ನು ಫಾಲೋ ಮಾಡಿದ ಮುಡಾ ಮಾಜಿ ಅಧ್ಯಕ್ಷ ಮೋಹನ್‌ಕುಮಾರ್, ಸಿ.ಬಸವೇಗೌಡ ಅವರೂ ಅಧಿಕಾರ ಇಲ್ಲವಲ್ಲ ಎಂದು ಪ್ರಸಾದ್ ಹಿಂದೆ ಹೋದರು. ಕೃಷ್ಣ ಅವರದ್ದೂ ಅದೇ ಕಥೆ. ಇನ್ನು ಕುಮಾರು ಬಂಗಾರಪ್ಪ ಅಧಿಕಾರ ಸಿಗಲಿಲ್ಲ ಅಂತ ಬಿಜೆಪಿ ಸೇರುತ್ತಿದ್ದಾರೆ. ಈಗ ವಿಶ್ವನಾಥ್ ಕೂಡ ಅಧಿಕಾರ ಇಲ್ಲ ಅಂತ ಪಕ್ಷ ಬಿಡುವ ಯೋಚನೆಯಲ್ಲಿದ್ದಾರ ಎಂಬ ಅನುಮಾನ ಮೂಡುತ್ತದೆ. ಯಾಕೆಂದರೆ ಕೆ.ಆರ್.ನಗರದಲ್ಲಿ ಕಾಂಗ್ರೆಸ್‌ನಿಂದ ನಾಯಕರಿದ್ದಾರೆ. ಆದರೆ ಬಿಜೆಪಿಯಿಂದ ಯಾವುದೇ ಪ್ರಬಲ ನಾಯಕರಿಲ್ಲ, ಹಾಗಾಗಿ ತಮಗೆ ಅಥವಾ ತಮ್ಮ ಮಗನಿಗೆ ಬಿಜೆಪಿಯಲ್ಲಿ ಜಾಗ ಮಾಡಿಕೊಡುವ ದೃಷ್ಟಿಯಿಂದ ಈ ರೀತಿ ವರ್ತಿಸುತ್ತಿದ್ದಾರೆ ಎಂದು ಅಲ್ಲಿಯ ಜನ ಮಾತನಾಡಿಕೊಳ್ಳುತ್ತಿದ್ದಾರೆ. ಯಾಕೆಂದರೆ 40 ವರ್ಷದಿಂದ ಕಾಂಗ್ರೆಸ್‌ನಲ್ಲಿರುವ ವಿಶ್ವನಾಥ್ ದಿಢೀರ್ ಅಂತ ಕಾಂಗ್ರೆಸ್ ತ್ಯಜಿಸಿದರೆ ಈಗ ಕೃಷ್ಣ ಪಕ್ಷ ಬಿಟ್ಟಿರುವವರಂತೆಯೆ ಈ ವಿಶ್ವನಾಥ್ ಕೂಡ ಅಧಿಕಾರ ದೃಷ್ಟಿಯಿಂದ ಪಕ್ಷ ತ್ಯಜಿಸಿದರು ಅನ್ನಿಸಿಕೊಳ್ಳಬೇಕಾಗುತ್ತದೆ. ಇವರು ಹೀಗೆಲ್ಲ ಅರಚಾಡಿ ಕಿರುಚಾಡಿ ಪಕ್ಷದಿಂದ ಹೊರ ಹಾಕಿಸಿಕೊಂಡರೆ 40 ವರ್ಷ ಪಕ್ಷವನ್ನು ಕಟ್ಟಿ ಬೆಳೆಸಿದವರನ್ನು ನಿರ್ದಾಕ್ಷಿಣ್ಯವಾಗಿ ಪಕ್ಷದವರು ಹೊರ ಹಾಕಿದರು ಎಂದು ಸಿಂಪಥಿ ಬರುತ್ತದೆ. ಆಗ ತಮ್ಮ ಬಿಜೆಪಿ ಸೇರುವ ದಾರಿ ಸುಗಮವಾಗುತ್ತದೆ ಎಂದು ಜನ ಮಾತಾಡಿಕೊಳ್ಳುತ್ತಿದ್ದಾರೆ.

■ ಶರ


# ಗೋವಿಂದರಾಜು ಡೈರಿ ಸುಳ್ಳೆಷ್ಟು ಜೊಳ್ಳೆಷ್ಟು?



ಅರುಣ್ ಜೇಟ್ಲಿ





ಯಡ್ಡಿ

ಡೈರಿ ಬರೆಯುವ ಯಾರಾದರೂ ಅದನ್ನು ಬೇರೆಯವರ ಕೈಯಲ್ಲಿ ಬರೆಸಿ ತನ್ನ ಮನೆಯಲ್ಲಿಟ್ಟುಕೊಂಡಿರುತ್ತಾರಾ? ಖುದ್ದು ಬರೆಯುವುದು ಗೊತ್ತಿದ್ದೂ ಮತ್ಯಾರಿಂದಲೋ ತನ್ನ ಅತ್ಯಂತ ಖಾಸಗಿ ವಿಷಯಗಳನ್ನು ಬರೆಸಿಡುವ ಹರಕತ್ತಾದರೂ ಏನಿರಲು ಸಾಧ್ಯ? ಹಾಗೊಮ್ಮೆ ಬೇರೆ ಯಾರಿಂದಲೋ ತನ್ನ ಡೈರಿ ಬರೆಸುವ ವ್ಯಕ್ತಿ ಅದರಲ್ಲಿ ದುಡ್ಡುಕಾಸಿನ ವಿಷಯದ ಹೊರತಾಗಿ ಬೇರೆ ಏನನ್ನೂ ಬರೆಯುವುದೇ ಇಲ್ಲವೆ? ಅದೂ ಕೂಡ ನಿರ್ದಿಷ್ಟ ವಿಷಯವೊಂದರ ಹೊರತಾಗಿ ಡೈರಿಯಲ್ಲಿ ಬೇರೆ ಯಾವ ವಿಷಯಗಳೂ ಇರುವುದಿಲ್ಲವೆ? ಡೈರಿ ಎಂದಮೇಲೆ ಅದರಲ್ಲಿ ದಿನಾಂಕವನ್ನಾದರೂ ನಮೂದಿಸಬೇಕಲ್ಲವೆ?

ಸುಳ್ಳೊಂದನ್ನು ಪದೇಪದೇ ಪುನರುಚ್ಚರಿಸುತ್ತಲೇ ಇದ್ದರೆ ಮುಂದೊಂದು ದಿನ ಅದೇ 'ಸತ್ಯ'ದ ರೂಪ ತಾಳುತ್ತದೆ ಯೆಂಬ ಗೋಬೆಲ್ಸ್‌ನ ತಂತ್ರವನ್ನೇ ಮೋದಿ ಪ್ರಭುತ್ವ ರಾಷ್ಟ್ರಮಟ್ಟದಲ್ಲಿ ಶುರು ಹಚ್ಚಿಕೊಂಡಿದೆ ಎಂಬುದಕ್ಕೆ ಗೋವಿಂದರಾಜು ಡೈರಿಗಿಂತಲೂ ಬೇರೆ ನಿದರ್ಶನಬೇಕೆ?

ಖುದ್ದು ಎಮ್ಮೆಲ್ಸಿ ಗೋವಿಂದರಾಜುವೇ ವಾಸ್ತವವೇನೆಂದು ಪರಿಷತ್ತಿನಲ್ಲಿ ವಿವರಣೆ ನೀಡಲಿ ಎನ್ನುವ ಯಡಿಯೂರಪ್ಪ ಅದೇ ಬಾಯಿಯಿಂದ ಉಕ್ಕಿನ ಸೇತುವೆಯ 65 ಕೋಟಿ ನೇರವಾಗಿ ಮುಖ್ಯಮಂತ್ರಿಯವರ ಮನೆಗೇ ತಲುಪಿಸಿದ್ದನ್ನು ನಾನು ನೋಡಿದ್ದೇನೆ ಎಂಬಂತೆ ಬೊಬ್ಬೆ ಹಾಕುತ್ತಿದ್ದಾರೆ. ಹೈಕಮಾಂಡಿಗೆ ಸಾವಿರ ಕೋಟಿ ಕಪ್ಪ ಕೊಟ್ಟಿದ್ದಾರೆಂಬುದಕ್ಕೆ ಯಾರೋ ಬರೆದಿಟ್ಟಿದ್ದಾರೆಂಬ ಡೈರಿಯನ್ನು 'ಪುರಾವೆ'ಯಾಗಿ ಬಳಸುತ್ತಾರೆ. ತಾನು ಮಾಡಿದ ಆರೋಪವನ್ನೇ 'ಟೈಮ್ಸ್ ನೌ' ಎಂಬ ನ್ಯೂಸ್ ಚಾನಲ್ ಡೈರಿಯ ದಾಖಲೆ ಸಮೇತ ಬಯಲಿಗೆಳೆದಿದೆಯಾದ್ದರಿಂದ ಸಿದ್ದರಾಮಯ್ಯ ರಾಜೀನಾಮೆ ಕೊಡಲಿ ಎಂದು ಬಾಲಿಶವಾಗಿ ಬಾಯಿಚಪಲ ಮಾಡುತ್ತಾರೆ. ಬಿಜೆಪಿ ನಾಯಕರಾದ ಈಶ್ವರಪ್ಪ ಸುರೇಶ್‌ಕುಮಾರ್, ಶೆಟ್ಟರ್ ಇತ್ಯಾದಿಗಳ ಪೈಕಿ ಯಾರಾದರೂ ಒಬ್ಬರು ಬಯಲಾದ ಡೈರಿಯ ಕೈಬರಹಕ್ಕೂ ಗೋವಿಂದರಾಜು ಕೈಬರವಣಿಗೆಗೂ ಯಾವುದೇ ವ್ಯತ್ಯಾಸವಿಲ್ಲ ಎಂಬ ಸಣ್ಣ ದಾಖಲೆಯನ್ನಾದರೂ ಕೊಟ್ಟಿದ್ದರೆ ಆ ಮಾತು ಬೇರೆ-

ಕಳೆದೊಂದು ವಾರದಿಂದ ಗೋವಿಂದರಾಜು ಡೈರಿಯ ಕುರಿತಂತೆ ನಡೆಯುತ್ತಿರುವ ಪ್ರಹಸನಗಳು, ಕಣ್ಣಾಮುಚ್ಚಾಲೆ, ವಾದವಿವಾದಗಳನ್ನೇ ಸೂಕ್ಷ್ಮವಾಗಿ ಗಮನಿಸುತ್ತಿದ್ದರೆ ಬಿಜೆಪಿ ರಾಷ್ಟ್ರಮಟ್ಟದಲ್ಲಿ ಗೋಬೆಲ್ಸ್‌ನ ಸುಳ್ಳು ಸತ್ಯವಾಗಿಸುವ ತಂತ್ರವನ್ನೇ 'ಒರು ಖಾದಿಯಿನ್ ಡೈರಿ' ರೂಪದಲ್ಲಿ ಆಟವಾಡಲು ಹೊರಟಿದೆ. ಅಂದರೆ ಸುಳ್ಳೇ ಇದರ ಬಂಡವಾಳ. ಸುಳ್ಳೇ ಇದರ ಉದ್ದೇಶ ಮತ್ತು ಸುಳ್ಳಲ್ಲದೆ ಬೇರೇನೂ ಇದರಲ್ಲಿ ಇಲ್ಲ!

ಹಾಗೆ ನೋಡಿದರೆ ಎಮ್ಮೆಲ್ಸಿ ಗೋವಿಂದರಾಜು ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ಪರಮಾಪ್ತರೇನಲ್ಲ, ಹಲವಾರು ಆಪ್ತರ ಪೈಕಿ ಒಬ್ಬರಷ್ಟೇ. ಮಾಗಡಿ ರೇವಣ್ಣ, ಭೈರತಿ ಬಸವರಾಜು, ಭೈರತಿ ಸುರೇಶ್, ಎಂಟಿಬಿ ನಾಗರಾಜು, ಮಂತ್ರಿ ಮಹದೇವಪ್ಪ ಹೆಚ್. ಆಂಜನೇಯ, ಪಿರಿಯಾಪಟ್ಟಣದ ವೆಂಕಟೇಶ್ ಮುಂತಾದವರಿಗೆ ಹೋಲಿಸಿದರೆ ಗೋವಿಂದರಾಜುವನ್ನು ಸಿಎಂ ತೀರ ಹಚ್ಚಿಕೊಂಡಿಲ್ಲ.

ಪಕ್ಷದ ಫಂಡು ಎತ್ತುವಳಿ, ಯಾರ್‍ಯಾರಿಗೆ ಏನೇನು ಮುಟ್ಟಬೇಕು, ಏನೆಲ್ಲ ಮಾಡಬೇಕು ಇತ್ಯಾದಿಗಳ ವಿಷಯದಲ್ಲಿ ಗೋವಿಂದರಾಜು ಅನುಭವಸ್ಥ. ಹೇಗೆ ಯಡ್ಡಿಗೆ ಲೆಹರ್‌ಸಿಂಗ್, ಅನಂತ್‌ಕುಮಾರ್‌ಗೆ ಸುಬ್ಬಣ್ಣರಂಥ ಎತ್ತುವಳಿ ನಿಸ್ಸೀಮ ಚೇಲಾಗಳಿದ್ದಾರೋ ಹಾಗೆಯೇ ಗೋವಿಂದರಾಜು. ಕೃಷ್ಣ ಮುಖ್ಯಮಂತ್ರಿಯಾಗಿದ್ದಾಗಲೂ ಅಷ್ಟೇ ಧರ್ಮಸಿಂಗ್ ಮುಖ್ಯಮಂತ್ರಿಯಾದಾಗಲೂ ಅಷ್ಟೆ. ಗೋವಿಂದರಾಜುವಿನ ಕಾರ್ಯಾಚರಣೆಗೆ ಅದರದ್ದೇ ನಿಗೂಢವಿತ್ತು ಕುಖ್ಯಾತಿಯಿತ್ತು, ಯಾರೇ ಮುಖ್ಯಮಂತ್ರಿಯಾದರೂ ಅಂಥವರನ್ನು ಹೇಗೆ ಬುಟ್ಟಿಗೆ ಹಾಕಿಕೊಳ್ಳಬೇಕೆಂಬ 'ವಿದ್ಯೆ' ಗೋವಿಂದರಾಜುವಿಗೆ ಗೊತ್ತಿತ್ತಲ್ಲ; ಈ ಕಾರಣಕ್ಕೆ ಸಿದ್ದರಾಮಯ್ಯ ತೀರ ಹತ್ತಿರಕ್ಕೂ ಬಿಟ್ಟುಕೊಳ್ಳಲಿಲ್ಲ ದೂರಕ್ಕೂ ಅಟ್ಟಲಿಲ್ಲ.

ಏಕೆಂದರೆ ಗೋವಿಂದರಾಜು ಹೈಕಮಾಂಡ್ ವರಿಷ್ಠ ದಿಗ್ವಿಜಯ್ ಸಿಂಗ್‌ಗೆ ಆ ಹೊತ್ತಿಗಾಗಲೇ ಆಪ್ತನಾಗಿಬಿಟ್ಟಿದ್ದ. ಆ ಕಾರಣಕ್ಕಾಗೇ ಎಮ್ಮೆಲ್ಸಿಯೂ ಆದ, ಮುಖ್ಯಮಂತ್ರಿಗಳ ಸಂಸದೀಯ ಕಾರ್ಯದರ್ಶಿಯೆಂಬ ರಾಜಕೀಯ ಪ್ರತಿಷ್ಠೆಗೂ ಏರಿಬಿಟ್ಟ. ಆದಾಗ್ಯೂ ಮುಖ್ಯಮಂತ್ರಿಗಳ ಆಪ್ತ ವಲಯದಲ್ಲಿ ಕೇಳಿಬರುತ್ತಿದ್ದದ್ದು ಮಾಗಡಿ ರೇವಣ್ಣ, ಭೈರತಿ ಬಸವರಾಜ್, ಸುರೇಶ್, ಎಂಟಿಬಿಯಂಥವರ ಹೆಸರೇ ಹೊರತು ಗೋವಿಂದರಾಜು ಹೆಸರು ಅಷ್ಟಾಗಿ ಕೇಳಿಬರುತ್ತಿರಲಿಲ್ಲ. ಈ ಮಧ್ಯೆ ಇದ್ದಕ್ಕಿದ್ದಂತೆ 2016ರ ಮಾರ್ಚ್ 15ರಂದು ದೊಮ್ಮಲೂರಿನ ಈತನ ಮನೆ ಮೇಲೆ ಐಟಿ ರೇಡಾಗುತ್ತದೆ.

ಮಂತ್ರಿ ಮಹದೇವಪ್ಪ ಅಥವಾ ಡೀಕೆ, ಭೈರತಿ, ಮಾಲಿನ್ಯ ಮಂಡಳಿಯ ಲಕ್ಷ್ಮಣ್ ಮುಂತಾದವರ ಮನೆ ಮೇಲೆ ರೇಡಾಗಿದ್ದರೆ ಅದಕ್ಕೊಂದು ಕಾರಣವಿರುತ್ತಿತ್ತು. ಗೋವಿಂದರಾಜು ಮನೆ ಮೇಲಿನ ರೇಡು ನೇರವಾಗಿ ಕಾಂಗ್ರೆಸ್ ಹೈಕಮಾಂಡನ್ನು ಗುರಿಯಾಗಿಸಿಯೇ ನಡೆದಿತ್ತೆಂಬುದಕ್ಕೆ ಬೇರೆ ಕಾರಣವೇ ಬೇಕಿರಲಿಲ್ಲ. ಆವತ್ತು ರೇಡು ನಡೆದಾಗ ನಡೆದ ವಿಚಿತ್ರವೆಂದರೆ ರೇಡಿಗೆ ಬಂದವರಲ್ಲೊಬ್ಬ ಪಂಚನಾಮೆ ಮಾಡಿಕೊಳ್ಳುವ ವೇಳೆ ಇದ್ದಕ್ಕಿದ್ದಂತೆ ಡೈರಿಯೊಂದನ್ನು ತೋರಿಸಿದ್ದು. ಅದು ಎಲ್ಲಿತ್ತು? ಎಲ್ಲಿ ಸಿಕ್ಕಿತು? ಎಂದು ಹೌಹಾರಿದ ಗೋವಿಂದರಾಜು ಐಟಿ ಅಧಿಕಾರಿಗಳನ್ನು ಪ್ರಶ್ನಿಸುತ್ತಿದ್ದರೆ ಅವರಲ್ಲೊಬ್ಬ ಇದು ನಿಮ್ಮದಲ್ಲ ಅಂದರೆ ಯಾರದು? 'ಈ ಡೈರಿ ನನಗೆ ಸಂಬಂಧಪಟ್ಟಿದ್ದಲ್ಲ...!' ಎಂದು ವಿಶೇಷ ಷರಾ ಬರೆದೇ ಸಹಿ ಹಾಕಿದ್ದರೆ ಅದಕ್ಕೆ ಐಟಿ ಅಧಿಕಾರಿಯೂ ಸಾಕ್ಷಿಯೆಂಬಂತೆ ಸಹಿ ಹಾಕಿದ್ದ.

ಇಲ್ಲದ ಡೈರಿ ಎಲ್ಲಿಂದ ಬಂತು? ಅದರಲ್ಲಿ ಏನೇನು ಬರೆದಿರಬಹುದು ಅಥವಾ ಮುಂದೊಮ್ಮೆ ಯಾರಾದರೂ ಏನೆಲ್ಲ ಬರೆಯಲು ಸಾಧ್ಯ? ಎಂದೆಲ್ಲ ತಲೆಕೆಡಿಸಿಕೊಂಡ ಗೋವಿಂದರಾಜು ಇದಾಗಿ ವಾರಕ್ಕೇ ಅಂದರೆ 2016ರ ಮಾರ್ಚ್ 21ರಂದು ಇಂದಿರಾನಗರ ಪೊಲೀಸ್ ಠಾಣೆಗೆ ಬಂದು ದೂರು ದಾಖಲಿಸಿದ್ದಾರೆ. ನೇರವಾಗಿ ಐಟಿ ಅಧಿಕಾರಿಗಳ ಮೇಲೆ ದೂರು ಕೊಟ್ಟರೆ ಇನ್ನೇನು ತಾಪತ್ರಯ ತಂದಿಟ್ಟಾರೋ ಎಂದು 'ನನ್ನ ಮನೆಯಲ್ಲಿ ನಿಗೂಢ ಡೈರಿಯನ್ನು ತಂದಿಟ್ಟವರನ್ನು ಪತ್ತೆ ಹಚ್ಚಿ ಕ್ರಮ ಜರುಗಿಸಿ' ಎಂಬುದು ಗೋವಿಂದರಾಜು ದೂರು. ಪೊಲೀಸರಾದರೂ ಕೇಂದ್ರ ಸರ್ಕಾರದ ಐಟಿ ಅಧಿಕಾರಿಗಳ ಮೇಲೆ ಏನೆಂದು ಕ್ರಮ ಜರುಗಿಸಲು ಸಾಧ್ಯ?

ಇದು ಅಲ್ಲಿಗೇ ನಿಲ್ಲುವುದಿಲ್ಲ, ಇದಾದಮೇಲೆ ಮತ್ತೆ ಜಾರಿ ನಿರ್ದೇಶನಾಲಯ ಗೋವಿಂದರಾಜುರನ್ನು ಕರೆಸಿಕೊಂಡು 'ನಿಮ್ಮ ವತಿಯಿಂದ, ದಿಗ್ವಿಜಯ್ ಸಿಂಗ್‌ಗೆ ಎಷ್ಟು ಕೋಟಿ ಸಂದಾಯವಾಯಿತು, ಕಾಂಗ್ರೆಸ್ ಖಜಾಂಚಿ ಮೋತಿ ಲಾಲ್ ವೋರಾಗೆ ನೀವು ಇಂತಿಷ್ಟು ಕೊಟ್ಟಿರಲೇಬೇಕಲ್ಲಾ? ಮೇಡಂ ಆಫೀಸಿಗೆ ಎಂಟು ಕೋಟಿ ಕೊಟ್ಟಿರಲೇಬೇಕಲ್ಲಾ?' ಇತ್ಯಾದಿ ಚಿತ್ರವಿಚಿತ್ರ ಪ್ರಶ್ನೆ ಹಾಕಿದಾಗಲೇ ಗೋವಿಂದರಾಜುಗೆ ಇನ್ನೇನೋ ನಡೆಯುತ್ತಿದೆಯೆಂಬ ಗುಮಾನಿ ಬಂದಿದೆ. ಅದು ಕೇಂದ್ರ ಹಣಕಾಸು ಇಲಾಖೆಯ ಸಚಿವಾಲಯದಿಂದಲೆ ನಡೆದ ಷಡ್ಯಂತ್ರವೆಂಬುದು ಆ ಕ್ಷಣಕ್ಕೆ ಗೋವಿಂದರಾಜು ತಲೆಗೆ ಹೊಳೆಯಲಿಲ್ಲ, ಆದರೆ ಡೈರಿಯ ಹಿಂದಿದ್ದ ಕಾಣದ ಕೈ ಇಷ್ಟಕ್ಕೇ ಬಿಡುವಂತಿರಲಿಲ್ಲವಲ್ಲ!

ಇದಾಗಿ ತಿಂಗಳಿಗೇ ಗೃಹ ಇಲಾಖೆಯ ಸಲಹೆಗಾರ ಕೆಂಪಯ್ಯನವರಿಗೆ ಜಾರಿ ನಿರ್ದೇಶನಾಲಯದಿಂದ ನೋಟಿಸು ಹೋಗಿದೆ. ಐಟಿ ರೇಡ್, ಡೈರಿ, ಗೋವಿಂದರಾಜು ಇತ್ಯಾದಿ ಏನೊಂದೂ ಗೊತ್ತಿಲ್ಲದ ಕೆಂಪಯ್ಯ ವಿಷಯದ ತಲೆಬುಡವೇ ಗೊತ್ತಿಲ್ಲದೆ **Blind** ಆಗಿ ಜಾರಿ ನಿರ್ದೇಶನಾಲಯಕ್ಕೆ ಹೋಗಿದ್ದಾರೆ. ಅಲ್ಲಿ ಅಧಿಕಾರಿಗಳು ಕೇಳಿದ ಪ್ರಶ್ನೆಗೆ ಕಕ್ಕಾಬಿಕ್ಕಿಯಾಗಿ 'ಗೋವಿಂದರಾಜು ಯಾರು ಅಂತಲೇ ನನಗೆ ಗೊತ್ತಿಲ್ಲ, ನಾನು ಆತನ ಜೊತೆ ಮಾತಾಡಿಯೇ ಇಲ್ಲವೆಂದ ಮೇಲೆ ದುಡ್ಡು ಕೊಡುವುದಾಗಲಿ ತೆಗೆದುಕೊಳ್ಳುವುದಾಗಲಿ ಪ್ರಶ್ನೆಯೇ ಇಲ್ಲವಲ್ಲ' ಎಂದು ಹೇಳಿಬಂದಿದ್ದಾರೆ. ಪ್ರಶ್ನಿಸುತ್ತಿದ್ದ ಅಧಿಕಾರಿ ಕೂಡ ಏನೋ ಕಾಟಾಚಾರದ ಪ್ರಹಸನ ನಟಿಸಿದಂತಿದ್ದರಿಂದ, ಅಧಿಕಾರಿಯೇ ಹಲ್ಲುಗಿಂಜುತ್ತಿದ್ದರಿಂದ ಏನೋ ಇದು ರಾಜಕೀಯವಿರಬೇಕೆಂದುಕೊಂಡು ನಗಾಡಿಕೊಂಡೇ ಬಂದಿದ್ದಾರೆ.

ಆದರೆ ಕೆಂಪಯ್ಯ ಜಾರಿ ನಿರ್ದೇಶನಾಲಯದಿಂದ ಹೊರಬೀಳುತ್ತಿದ್ದಂತೆ ಪತ್ರಕರ್ತರು ನ್ಯೂಸ್ ಚಾನಲ್ಲುಗಳ ಹಿಂಡೇ ಮುತ್ತಿಗೆ ಹಾಕಿತ್ತು, ಐಟಿ ರೇಡ್ ಸಂಬಂಧಿ ಯಾವುದೇ ಮಾಹಿತಿಯನ್ನೂ ಜಾರಿ ನಿರ್ದೇಶನಾಲಯ ಬಹಿರಂಗ ಪಡಿಸುವಂತಿಲ್ಲ, ಅಂಥಾದ್ದರಲ್ಲಿ ಕೆಂಪಯ್ಯ ಬಂದಿದ್ದ ವಿಷಯವನ್ನು ಮೀಡಿಯಾಗಳಿಗೆ ಬಹಿರಂಗಪಡಿಸಿದವರ್‍ಯಾರು? ಜಾರಿ ನಿರ್ದೇಶನಾಲಯವರಲ್ಲದೆ ಬೇರೆ ಯಾರು ತಾನೇ ನ್ಯೂಸ್ ಚಾನಲ್ಲುಗಳಿಗೆ ಮಾಹಿತಿ ನೀಡಲು ಸಾಧ್ಯ?

ಅಂದರೆ ಉದ್ದೇಶಪೂರ್ವಕವಾಗಿಯೇ ಕೆಂಪಯ್ಯ ವಿಚಾರಣೆಗೆ ಬಂದಿದ್ದಾರೆಂಬುದನ್ನು ಸುದ್ದಿ ಮಾಡುವುದು ಜಾರಿ ನಿರ್ದೇಶನಾಲಯದ ಉದ್ದೇಶವಾಗಿತ್ತು ಮತ್ತು ಇದಕ್ಕೆಂದೇ ದೆಹಲಿ ಮೂಲದ ಇಂಗ್ಲಿಷ್ ಚಾನಲ್ಲೊಂದರ ವರದಿಗಾರ್ತಿಯೊಬ್ಬಳನ್ನು ಬಳಸಿಕೊಳ್ಳಲಾಗಿತ್ತು. ಇಲ್ಲದ ಡೈರಿ ಪ್ರತ್ಯಕ್ಷವಾಗಿದ್ದು, ಕೆಂಪಯ್ಯನವರನ್ನು ವಿಚಾರಣೆಗೆ ಕರೆಸಿದ್ದು, ಇದೆಲ್ಲವನ್ನೂ ವ್ಯವಸ್ಥಿತವಾಗಿ ಸುದ್ದಿಯಾಗುವಂತೆ ಮಾಡಿದ್ದು ಇದೆಲ್ಲದರಿಂದ ಹುಷಾರಾದ ಸಿದ್ದರಾಮಯ್ಯಗೆ ತನ್ನ ಸುತ್ತ ಕೇಂದ್ರ ಸರ್ಕಾರ ಏನೋ ಷಡ್ಯಂತ್ರ ನಡೆಸುತ್ತಿರುವುದರ ವಾಸನೆ ಹತ್ತಿದೆ. ಮುಖ್ಯ ಕಾರ್ಯದರ್ಶಿಯನ್ನು ಕರೆದು ಸರ್ಕಾರದ ವತಿಯಿಂದ ಅಧಿಕೃತವಾಗೇ ಡೈರಿಯ ವಿವರಗಳನ್ನು ನೀಡುವಂತೆ ಜಾರಿ ನಿರ್ದೇಶನಾಲಯಕ್ಕೆ ಪತ್ರ ಬರೆದಿದ್ದಾರೆ. ಆದರೆ ಬಂದ ಉತ್ತರ ಅಷ್ಟೇ ವಿಚಿತ್ರವಾಗಿತ್ತು, ಐಟಿ ದಾಳಿಯ ವಿವರಗಳನ್ನು ಬಹಿರಂಗಪಡಿಸಲು ಸಾಧ್ಯವಿಲ್ಲವಾದ್ದರಿಂದ ಡೈರಿಯ ವಿವರಗಳನ್ನು ನೀಡಲು ಸಾಧ್ಯವಿಲ್ಲ ಎಂದು ಜಾರಿ ನಿರ್ದೇಶನಾಲಯ ಹಿಂಬರಹ ರವಾನಿಸಿತ್ತು.

ಅಲ್ಲಿಗಿದು ಕೇವಲ ರಾಜಕೀಯ ಗಿಮಿಕ್ ಎಂದು ಸಿದ್ದುಗೆ ಮನದಟ್ಟಾಗಿತ್ತು. ಇದಾಗಿ ಎಂಟು ತಿಂಗಳುಗಳೇ ಕಳೆದವು. ಗೋವಿಂದರಾಜು ಮನೆಮೇಲಿನ ಐಟಿ ರೇಡ್‌ನ ಮುಂದುವರಿಕೆಯೆಂಬಂತೆ ಸಿ.ವಿ. ರಾಮನ್ ನಗರಕ್ಕೆ ಕಾಂಗ್ರೆಸ್ ಅಭ್ಯರ್ಥಿಯಾಗಿದ್ದ ಪಿ. ರಮೇಶ್, ಇಂಜಿನಿಯರ್‌ಗಳಾದ ಜಯಚಂದ್ರ ಮತ್ತು ಚಿಕ್ಕರಾಯಪ್ಪ, ತದನಂತರ ಲಕ್ಷ್ಮೀ ಹೆಬ್ಬಾಳ್ಕರ್, ಮಂತ್ರಿ ರಮೇಶ್ ಜಾರಕಿಹೊಳಿ, ಎಂಟಿಬಿ ನಾಗರಾಜ್ ಹೀಗೆ ಮುಖ್ಯಮಂತ್ರಿ ಆಪ್ತವಲಯದ ಒಬ್ಬೊಬ್ಬರನ್ನೇ ಆಯ್ದು ದಾಳಿ ನಡೆಸಲಾಯಿತು. ಇದು ಕೂಡ ಡೈರಿ ಕತೆಯ ಮುಂದುವರಿದ ಭಾಗವೇ ಆಗಿತ್ತು, ಆದರೆ 2017ರ ಫೆಬ್ರವರಿ ಮೊದಲ ವಾರದಲ್ಲಿ ರಾಜ್ಯ ಬಿಜೆಪಿ ಅಧ್ಯಕ್ಷ ಯಡಿಯೂರಪ್ಪನವರ ಬಾಯಿಂದ 'ಕಾಂಗ್ರೆಸ್ ಹೈಕಮಾಂಡ್‌ಗೆ ಸಿದ್ದು ಸಾವಿರ ಕೋಟಿ ಕಪ್ಪ ಸಲ್ಲಿಸಿದ್ದಾರೆಂಬ ಮಾಹಿತಿ ಗೋವಿಂದರಾಜು ಡೈರಿಯ ಮೂಲಕ ಬಯಲಾಗಿದೆ' ಎಂಬ ಹೇಳಿಕೆ ಹೊರಬೀಳುವವತನಕ ಷಡ್ಯಂತ್ರದ ಸ್ಪಷ್ಟ ಚಿತ್ರಣವಿರಲಿಲ್ಲ.

ಗೋವಿಂದರಾಜು ಮನೆಯಲ್ಲಿ ಸಿಕ್ಕಿತೆಂಬ ಆ ನಿಗೂಢ ಡೈರಿಯ ಉದ್ದೇಶವೇ ಮುಖ್ಯಮಂತ್ರಿ ಸಿದ್ದು ಮತ್ತು ಕಾಂಗ್ರೆಸ್ ಹೈಕಮಾಂಡ್ ಅನ್ನು ಹಣಿಯಲು ಬಿಜೆಪಿ ತೋಡಿದ್ದ ಹಳ್ಳವೆಂಬುದರಲ್ಲಿ ಯಾವುದೇ ಅನುಮಾನವಿರಲಿಲ್ಲ. ಮೊದಲೇ ಹೇಳಿದ ಚಿತ್ರಕತೆಯೆಂಬಂತೆ ಒಂದರಮೇಲೊಂದು ನಡೆಯುತ್ತಿತ್ತು, ಅಂದರೆ ರಾಜ್ಯ ಬಿಜೆಪಿ ನಾಯಕರಿಗೆ ಡೈರಿಯ ವಿವರಗಳನ್ನು ಒದಗಿಸಿದ್ದು ಬಿಜೆಪಿ ಹೈಕಮಾಂಡ್. ಹನ್ನೊಂದು ತಿಂಗಳ ಹಿಂದೆ ಸಿಕ್ಕ ಡೈರಿಯಲ್ಲಿ ಇತ್ತೀಚಿನ ಉಕ್ಕಿನ ಸೇತುವೆಯ ಪ್ರಸ್ತಾಪ ಹೇಗೆ ತಾನೇ ಬರಲು ಸಾಧ್ಯ? ಕಳೆದ ಲೋಕಸಭಾ ಚುನಾವಣೆ ಹೊತ್ತಿಗೆ ಮುಖ್ಯಮಂತ್ರಿ ಸಿದ್ದು ಹೈಕಮಾಂಡಿಗೆ ಸಾವಿರ ಕೋಟಿ ಕಪ್ಪ ಸಲ್ಲಿಸಿದ್ದೇ ಆಗಿದ್ದರೆ ಅದನ್ನು ಗೋವಿಂದರಾಜು ಇನ್ನಾರದೋ ಕೈಬರಹದಲ್ಲಿ ಬರೆಸಿ ತನ್ನ ಮನೆಯಲ್ಲಿಟ್ಟುಕೊಳ್ಳುವುದು? ಕಳೆದ ಮೂರ್‍ನಾಲ್ಕು ತಿಂಗಳ ಹಿಂದೆ ರೂಪುಗೊಂಡ ಸ್ಟೀಲ್ ಬ್ರಿಡ್ಜ್ (SB)ನ ಕಮೀಶನ್ ಎಂದು ಲೋಕಸಭಾ ಚುನಾವಣೆಯ ಹೊತ್ತಿಗೆ ಅಂದರೆ ವರ್ಷದ ಹಿಂದೆಯೇ 65 ಕೋಟಿ ನಮೂದಿಸಿದ್ದು ಇತ್ಯಾದಿಗಳೆಲ್ಲವೂ ಹಾಸ್ಯಾಸ್ಪದವಾಗಿ ಕಾಣಿಸಬಹುದೆಂಬ ಕನಿಷ್ಠ ತಿಳಿವಳಿಕೆಯೂ ಡೈರಿಯ ಸೃಷ್ಟಿಕರ್ತರಿಗಿರಲಿಲ್ಲ!

ಮೋದಿ ಪ್ರಭುತ್ವದ ಇಂಥ ಕಳ್ಳಾಟ ಬಟ್ಟಬಯಲಾಗಿದ್ದು ಮೊನ್ನೆ ಅಂದರೆ 2017ರ ಫೆಬ್ರವರಿ 23ರ ಗುರುವಾರ ರಾತ್ರಿಯಂದು. ಮೋದಿ ಪ್ರಭುತ್ವದ ಮುಖವಾಣಿಯೆಂದೇ ಕುಖ್ಯಾತಿ ಗಳಿಸಿದ್ದ ಆಂಗ್ಲ ಸುದ್ದಿ ಚಾನಲ್ Times Now ಏನೋ ಬಾಂಬ್ ಹಾಕಿದ ಗತ್ತಿನಲ್ಲಿ ಡೈರಿಯನ್ನು ಬ್ರೇಕಿಂಗ್ ನ್ಯೂಸ್ ಹೊಡೆಯುತ್ತಿತ್ತು, ಗೋವಿಂದರಾಜು ಡೈರಿಯೆಂದು ಅದು ತೋರಿಸುತ್ತಿದ್ದ ಪುಟಗಳಲ್ಲಿ ಬೇರೆ ಯಾರದೋ ಕೈಬರಹ!

KJG ಎಂಬ ಇನಿಷಿಯಲ್‌ನ ಅರ್ಥ ಕೆ.ಜೆ. ಜಾರ್ಜ್ ಎಂದೂ M. Vora ಎಂದು ಬರೆದಿದ್ದು ಎಐಸಿಸಿ ಖಜಾಂಚಿ ಮೋತಿಲಾಲ್ ವೋರಾ ಎಂದು KJG+MBP ಸೇರಿಕೊಂಡು 219 ಕೋಟಿ ಸಂಗ್ರಹಿಸಿ ಕೊಟ್ಟಿದ್ದಾರೆಂದೂ HCM ಎಂದು ಬರೆದದ್ದು ಲೋಕೋಪಯೋಗಿ ಸಚಿವ ಹೆಚ್.ಸಿ. ಮಹದೇವಪ್ಪ ಎಂದೂ ಆವರು 47 ಕೋಟಿ ಕೊಟ್ಟಿದ್ದಾರೆಂದೂ ಡೈರಿಯಲ್ಲಿ ನಮೂದಿಸಿದ್ದ ದೃಶ್ಯವಿತ್ತು, ಮೇಲುನೋಟಕ್ಕೇ ಇದು ಬಿಜೆಪಿ ಪ್ರಾಯೋಜಿತ ಐಟಿ ಅಧಿಕಾರಿಗಳು ಸೃಷ್ಟಿಸಿದ ಡೈರಿಯಂತಿತ್ತು. RG ಕಚೇರಿಗೆ ಅಂದರೆ ರಾಹುಲ್‌ಗಾಂಧಿ ಕಚೇರಿಗೆ 6 ಕೋಟಿ, SG Office ಎಂದರೆ ಸೋನಿಯಾ ಗಾಂಧಿ ಕಚೇರಿಗೆ 8 ಕೋಟಿ ಎಂದು ಬರೆಯಲಾಗಿತ್ತು.


ರಾಜಕಾರಣದ ಒಳಮರ್ಮ ಬಲ್ಲ ಯಾರೇ ಆಗಲಿ ಇದೊಂದು ಬಾಲಿಶ ಗಿಮ್ಮಿಕ್ ಎಂದು ಸಲೀಸಾಗಿ ಹೇಳುವಂತಿತ್ತು ಡೈರಿಯ ಕತೆ. ಅಂದರೆ ಬಿಜೆಪಿ ಏನೆಲ್ಲ ಕಲ್ಪಿಸಿಕೊಳ್ಳಲು ಸಾಧ್ಯವೋ ಅದೇ ಡೈರಿಯ ರೂಪದಲ್ಲಿತ್ತು. ಸೋನಿಯಾ ಗಾಂಧಿ ಆಫೀಸಿಗೆ ಇಷ್ಟೊಂದು ಹುಡುಗಾಟದ ರೀತಿಯಲ್ಲಿ ದುಡ್ಡು ಕೊಡಲು ಸಾಧ್ಯವೇ ಇಲ್ಲ. ರಾಹುಲ್‌ಗಾಂಧಿ ಕಚೇರಿಗೆ ಕೊಟ್ಟಿದ್ದೇ ಆದರೆ ಯಾರಿಗೆ, ಹೇಗೆ, ಯಾವ ದಿನಾಂಕದಂದು ಎಂದು ಬರೆದಿರಬೇಕಿತ್ತಲ್ಲವೇ? ಫೆಬ್ರವರಿ 24ರಂದು ಡೈರಿಯ ವಿವರ ಬಿಡುಗಡೆ ಮಾಡುತ್ತೇವೆಂದು ಬೆಂಗಳೂರಿನಲ್ಲಿ ಯಡ್ಡಿ ಕೊಟ್ಟ ಹೇಳಿಕೆಗೂ ಅದರ ಹಿಂದಿನ ದಿನವೇ Times Now ಬಿತ್ತರಿಸಿದ ಡೈರಿಯ ವಿವರಗಳಿಗೂ ವ್ಯತ್ಯಾಸವೇ ಇರಲಿಲ್ಲ.

ಬೇರೆ ಯಾರಿಗೂ ಸಿಗಲು ಸಾಧ್ಯವೇ ಇಲ್ಲದ ಐಟಿ ದಾಖಲೆಗಳು ಬಿಜೆಪಿ ನಾಯಕ ಯಡ್ಡಿಗೆ ಸಿಕ್ಕಿದ್ದಾದರೂ ಹೇಗೆ? Times Now ನಂಥ ಬಿಜೆಪಿ ನಿಷ್ಠ ಚಾನಲ್ಲಿಗೇ ಏಕೆ ಸಿಗುತ್ತದೆ? ಅದು ತನ್ನ ಕೈಬರಹವಲ್ಲ ಎಂದು ಎಷ್ಟೇ ಹೇಳಿದರೂ ಮೀಡಿಯಾಗಳೇಕೆ ಮತ್ತೆ ಮತ್ತೆ ಅದು ಗೋವಿಂದರಾಜು ಡೈರಿಯೆಂದು ಸಾಧಿಸುತ್ತಿದ್ದಾರೆ? ಗೋವಿಂದರಾಜು ಕೈಬರಹಕ್ಕೂ ಡೈರಿಯ ಕೈಬರಹಕ್ಕೂ ಯಾರೂ ಏಕೆ ತಾಳೆ ಹಾಕಿ ನೋಡುತ್ತಿಲ್ಲ? ನಾಲ್ಕು ತಿಂಗಳ ಇತ್ತೀಚಿನ ಉಕ್ಕಿನ ಸೇತುವೆ ವರ್ಷದ ಹಿಂದೆಯೇ ಯಾವ ಮಾಯೆಯಿಂದ ಅಸ್ತಿತ್ವಕ್ಕೆ ಬಂತು? ಗೋವಿಂದರಾಜು ಜೊತೆ ಯಾವತ್ತೂ ಮಾತಾಡದ ಕೆಂಪಯ್ಯ ಅದು ಹೇಗೆ ಮೂರು ಕೋಟಿ ತಲುಪಿಸಲು ಸಾಧ್ಯ? ಮುಖ್ಯಮಂತ್ರಿ ತನ್ನ ಪರಮಾಪ್ತರೆಲ್ಲರನ್ನೂ ಬಿಟ್ಟು ಅಷ್ಟೇನೂ ಆಪ್ತನಲ್ಲದ ಗೋವಿಂದರಾಜು ಮೂಲಕ ನೂರಾರು ಕೋಟಿ ಹೈಕಮಾಂಡಿಗೂ ಏಕೆ ತಲುಪಿಸುತ್ತಾರೆ? ಇತ್ಯಾದಿ ಎಲ್ಲ ಪ್ರಶ್ನೆಗಳಿಗೂ ಬರುವ ಉತ್ತರವೊಂದೆ -

ಇದು ಮೋದಿ ಪ್ರಭುತ್ವದ ಗೋಬೆಲ್ಸ್ ತಂತ್ರ. ಸತ್ಯ ಯಾರಿಗೂ ಬೇಕಿಲ್ಲ. ಅಪಪ್ರಚಾರದ ಹೊರತಾಗಿ ಡೈರಿ ಭೂತಕ್ಕೆ ಆಧಾರವೂ ಇಲ್ಲ ತರ್ಕವೂ ಇಲ್ಲ ಸತ್ಯವಂತೂ ಸಾಧ್ಯವೇ ಇಲ್ಲ.

■ ರಾ. ಸೋಮನಾಥ್

# ...ಂಡ್ಯ: ಕಸಾಪ ಹೆಸರಲ್ಲಿ ರವಿಯ ಎತ್ತುವಳಿ ಸಮ್ಮೇಳನ



...ಹಿತ್ಯಲೋಕಕ್ಕೆ ಏನೆಲ್ಲ ಗರಿಷ್ಠ ಅವಮಾನಗಳು ...ದೋ ಅವೆಲ್ಲವೂ ಮಂಡ್ಯ ಕಸಾಪಗೆ ಬಡ್ಡಿದಂಧೆಯ ...ರ ಅಧ್ಯಕ್ಷನಾಗಿ ಕುಂತ ಮೇಲೆ ಎಗ್ಗಿಲ್ಲದೆ ಆಗುತ್ತಿವೆ. ... ನಡೆದ ಸಾಹಿತ್ಯ ಸಮ್ಮೇಳನ ಕೂಡಾ ಬಡ್ಡಿ ...ರ ಅಂಡ್ ಪಟಾಲಂನ ವಸೂಲಿ ಸಮ್ಮೇಳನವಾಗಿ ...ಡಾದದ್ದು ದುರಂತ. ಕಸಾಪ ಅಧ್ಯಕ್ಷನಾಗಲು ... ಖರ್ಚು ಮಾಡಿದ್ದ ರವಿಕುಮಾರ ಅದರ ಪೈಸೆಪೈಸೆ ... ಮಾಡಿಕೊಳ್ಳಲೆಂದೇ ಮಂಡ್ಯ ಜಿಲ್ಲೆಯ ಭೀಕರ ... ಅಣಕಿಸುವಂತೆ, ರೈತರ ಆತ್ಮಹತ್ಯೆಗಳನ್ನು ...ನಿಸುವಂತೆ ತಾಲ್ಲೂಕು, ಜಿಲ್ಲಾ ಎತ್ತುವಳಿ ಸಮ್ಮೇಳನ ...ತ್ತಾ ತಿರುಗುತ್ತಿದ್ದಾನೆ.

...ಡ್ಯ ಜಿಲ್ಲೆಯ ಇತಿಹಾಸದಲ್ಲಿಯೇ ಹಿಂದೆಂದೂ ...ಳರಿಯದ ಬರ ರುದ್ರತಾಂಡವ ನಡೆಸುತ್ತಿದೆ. ...ು ರೈತರು ಆತ್ಮಹತ್ಯೆಗೆ ಶರಣಾಗಿದ್ದಾರೆ. ...ದಕ್ಕೂ ಕ್ಯಾರೇ ಅನ್ನದ ಜಿಲ್ಲಾ ಕಸಾಪ ಅಧ್ಯಕ್ಷ ರವಿ ... ವಸೂಲಿ ಟೀಂ ಸಾಹಿತ್ಯ ಸಮ್ಮೇಳನದ ಹೆಸರಿನಲ್ಲಿ ... ಭೋಜನ ಮಾಡಿದೆ. ಕನ್ನಡಕ್ಕಾಗಿ ಕೈ ಎತ್ತು ನಿನ್ನ ...ಕ್ಷವಾಗುತ್ತೆ ಅಂತ ಕುವೆಂಪು ಹೇಳಿದ್ದು ರವಿಕುಮಾರ ...ಟೀಂಗೆ ಕೈತುಂಬಾ ಕಾಸಿನ ದಾರಿಯಾಗಿದೆ. ಫೆಬ್ರವರಿ ...8, 19ರಂದು ಮಂಡ್ಯದ ವಿಶ್ವೇಶ್ವರಯ್ಯ ...ಗಣದಲ್ಲಿ ನಡೆದ 14ನೇ ಜಿಲ್ಲಾ ಕನ್ನಡ ಸಾಹಿತ್ಯ ... ನೋಡಿದ ಎಲ್ಲರ ಬಾಯಲ್ಲೂ ಬಡ್ಡಿ ರವಿಕುಮಾರ ...ಟೀಂನ ವಸೂಲಿ ಪರಾಕ್ರಮ ಅನುರಣಿಸುತ್ತಿತ್ತು.


...ಡ್ಯ ಕಸಾಪ ಸಾಹಿತಿಗಳಿಂದ ದೂರ ಸರಿದು ಬಹಳ ...ೇ ಸಂದಿದೆ. ಕಸಾಪ ಚುನಾವಣೆ ಲಕ್ಷಾಂತರ ರೂ.ಗಳ ... ಪರಿವರ್ತಿತವಾಗಿರುವುದರಿಂದ ಬಡ ಸಾಹಿತಿಗಳು ...ಣೆಯಿಂದ ದೂರ ಸರಿದಿದ್ದಾರೆ. ಹೀಗಾಗಿ ...ಕರು, ಲೇವಾದೇವಿಗಾರರು ಕಸಾಪಕ್ಕೆ ನುಗ್ಗಿ ಸಾಹಿತ್ಯ ...ನ್ನೇ ಅಲ್ಲೋಲಕಲ್ಲೋಲ ಮಾಡಿದ್ದಾರೆ. ಕಸಾಪ ...ಣೆಯಲ್ಲಿ ಲಕ್ಷಾಂತರ ರೊಕ್ಕ ಸುರಿದು ಅಧ್ಯಕ್ಷ ...ೀದಿಸುವ ಸಂಸ್ಕೃತಿ ಪ್ರಾರಂಭ ಮಾಡಿದ್ದೇ ಮೀರಾ ...ಯ್ಯ ಎಂಬ ರೊಕ್ಕಸ್ಥ ಹೆಂಗುಸು. ಗುರುತರ ಸಾಹಿತ್ಯ ...ದ ಅಧ್ಯಕ್ಷ ಪಟ್ಟವೇರಿದ ಮೀರಾ ಮೇಡಂ ...ಲ್ಲೇ ಪಳಗಿದ ರವಿಕುಮಾರ ಬಡ್ಡಿ ದಂಧೆಯಲ್ಲಿ ... ಹಣ ಮಾಡಿದ್ದಾನೆ. ಈ ಹಣವನ್ನು ಚೆಲ್ಲಿಯೇ ...ಲ್ಲಿ ಕಸಾಪ ಅಧ್ಯಕ್ಷ ಸ್ಥಾನಕ್ಕೆ ಲಗ್ಗೆಯಿಟ್ಟು ಇದೀಗ ...ಮಾಡಿಕೊಳ್ಳುವ ಭಾಗವಾಗಿ ಸಮ್ಮೇಳನಗಳ ಹಿಂದೆ ...ೆ. ತನ್ನ ಪಟಾಲಂನ ಕಾಯಂ ಸದಸ್ಯರಾದ ...ಮೇಶ, ಹುಸ್ಕೂರು ಕೃಷ್ಣೇಗೌಡ, ಶಿವರಾಂ, ಹರ್ಷ ...ದವರನ್ನು ಕಟ್ಟಿಕೊಂಡು ಭರ್ಜರಿಯಾಗೇ ವಸೂಲಿ ...ದ್ದಾನೆ.

...ೇಳನದ ಪೂರ್ವಭಾವಿ ಸಭೆಯಲ್ಲಿ ರವಿಕುಮಾರ ...ಕ್ಕೆ 35 ಲಕ್ಷ ಹಣ ಬೇಕು ಎಂದು ಪ್ರಸ್ತಾವನೆ ...ದನ್ನು ಕೇಳಿ ಸಾಹಿತ್ಯ ಪ್ರೇಮಿಗಳು ಹೌಹಾರಿದ್ದರು. ...ು ಬೆಂಗಳೂರಿನಲ್ಲಿ ನಡೆದ ಸಮ್ಮೇಳನಗಳಲ್ಲೇ ...ದು ಹಣ ಖರ್ಚು ಮಾಡದಿರುವಾಗ ಏಕೆ ...ು ಹಣ ಖರ್ಚು ಮಾಡಬೇಕು ಎಂದು ಕೇಳಿದ್ದರು. ...ಸ್ಥಿತಿಯ ಸಂದರ್ಭದಲ್ಲಿ ಅದನ್ನು ಸರಳವಾಗಿ ... ಮಾಡಬೇಕೆಂಬ ಅಭಿಪ್ರಾಯವೂ ಪೂರ್ವಭಾವಿ ... ಕೇಳಿಬಂದಿತ್ತು, ಆದರೆ ಕಸಾಪ ಚುನಾವಣೆಯಲ್ಲಿ ...ರ್ಚು ಮಾಡಿರುವ ಹಣವನ್ನು ಬಡ್ಡಿ ಸಮೇತ ಪಡೆಯಲು ಹೊರಟ ರವಿ ಅದ್ದೂರಿ ಸಮ್ಮೇಳನದ ಹೆಸರಿನಲ್ಲಿ ಲೂಟಿಗೆ ಸ್ಕೆಚ್ ಹಾಕಿದ್ದ. ಸರ್ಕಾರಿ ಅಧಿಕಾರಿಗಳು, ಇಲಾಖೆಗಳು, ಉದ್ಯಮಿಗಳು ಹಾಗೂ ರಾಜಕಾರಣಿಗಳ ಪಟ್ಟಿಯನ್ನು ಸಿದ್ಧ ಮಾಡಿ ವಸೂಲಿ ಮಾಡಲು ರವಿಕುಮಾರ ಅಂಡ್ ಟೀಂ ಸಿದ್ಧವಾಗಿತ್ತು.

ಕನ್ನಡ ಸಾಹಿತ್ಯ ಸಮ್ಮೇಳನ ಯಾವುದೇ ಅಡೆತಡೆಯಿಲ್ಲದಂತೆ ನಡೆಯಬೇಕೆಂದು ಅದಕ್ಕಾಗಿ ವಿವಿಧ ಇಲಾಖೆಗಳಿಂದ ಸಮ್ಮೇಳನದ ಖರ್ಚಿಗೆ ಹಣ ಸಂಗ್ರಹಣೆ ಮಾಡಿಕೊಟ್ಟಿದ್ದ ಜಿಲ್ಲಾಧಿಕಾರಿ ಜಿಯಾವುಲ್ಲ ಅಧ್ಯಕ್ಷ ರವಿಕುಮಾರನ ಗುಳುಂ ಪರಾಕ್ರಮ ಕಂಡು ಖರ್ಚಿನ ವಿವರ ಕೊಡು ಎಂದು ಖಡಕ್ಕಾಗೇ ಕೇಳಿದ್ದಾರೆ. ಜಿಲ್ಲಾಧಿಕಾರಿಗೆ ಲೆಕ್ಕ ಕೊಡಲು ತಡಕಾಡುತ್ತಿರುವ ಬಡ್ಡಿ ರವಿ ಅಂಡ್ ಟೀಂ ರಾಮ-ಕೃಷ್ಣ ಲೆಕ್ಕ ಕೊಡಲು ಮುಂದಾಗಿದೆ.

## ಹೆಂಡದ ಕಾಸಲ್ಲಿ ಸಮ್ಮೇಳನ


ಸಾಹಿತ್ಯ ಸಮ್ಮೇಳನ ಎಂದರೆ ಅಲ್ಲೊಂದು ಪಾವಿತ್ರ್ಯತೆ ಇರಬೇಕು. ಆದರೆ ನುಡಿಯ ಹಬ್ಬಕ್ಕೆ ಮದ್ಯದ ಅಂಗಡಿಗಳಿಂದಲೂ ಹಣ ವಸೂಲಿ ಮಾಡಲಾಯಿತು. ಮಂಡ್ಯ ಜಿಲ್ಲೆಯೊಂದರಲ್ಲೇ ಸುಮಾರು 260 ಬಾರ್ ಅಂಡ್ ರೆಸ್ಟೋರೆಂಟ್‌ಗಳಿವೆ. 2000 ರೂ. ಎಂದರೆ 5 ಲಕ್ಷಕ್ಕೂ ಹೆಚ್ಚು ಹಣ ಹೆಂಡದ ಅಂಗಡಿಗಳಿಂದಲೇ ವಸೂಲಾಗಿ ಹೋಯಿತು. ಹೆಂಡದಂಗಡಿಯ ಹಣದಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನ ಮಾಡಿಸಿಕೊಂಡ ಕನ್ನಡಾಂಬೆ ಪುನೀತಳಾಗಿ ಹೋದಳು...



ಮಂಡ್ಯ ನಗರಸಭೆಯಿಂದ ಒಂದು ಲಕ್ಷ, ಜಿಲ್ಲೆಯ ಪ್ರತಿ ಹಾಸ್ಟೆಲ್‌ಗಳಿಂದ 1000 ರೂ., ಮಂಡ್ಯ ಜಿಲ್ಲಾ ಹಾಲು ಒಕ್ಕೂಟ, ಸಕ್ಕರೆ ಕಾರ್ಖಾನೆಗಳು, ವಾಣಿಜ್ಯ ಇಲಾಖೆ ಸೇರಿದಂತೆ ವಿವಿಧ ಇಲಾಖೆಗಳಿಂದ ಹಣ ಸಂಗ್ರಹಿಸಲಾಗಿತ್ತು. ಜಿಲ್ಲಾ ಉಸ್ತುವಾರಿ ಮತ್ತು ವಸತಿ ಸಚಿವ ಎಂ.ಕೃಷ್ಣಪ್ಪ ಮಾತಿಗೆ ಬೆಲೆ ನೀಡಿದ ಜಿಲ್ಲಾಧಿಕಾರಿ ಜಿಯಾವುಲ್ಲಾ ತಮ್ಮ ಶಕ್ತಿ ಮೀರಿ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಹಣ ಸಂಗ್ರಹಿಸಿಕೊಟ್ಟರು. ಕೇಂದ್ರ ಸಾಹಿತ್ಯ ಕನ್ನಡ ಪರಿಷತ್ ಐದು ಲಕ್ಷ ಹಣ ನೀಡಿತು.

ಜಿಲ್ಲಾ ಸಮ್ಮೇಳನಕ್ಕೆ ರಾಜ್ಯ ಸರ್ಕಾರ ಇದುವರೆಗೂ 5 ಲಕ್ಷ ಹಣ ಮಾತ್ರ ನೀಡುತ್ತಿತ್ತು. ಆದರೆ ಸ್ವತಃ ವಸತಿ ಸಚಿವ ಕೃಷ್ಣಪ್ಪನವರೇ ಖುದ್ದಾಗಿ ಸಿಎಂ ಸಿದ್ದರಾಮಯ್ಯನವರನ್ನು ಭೇಟಿ ಮಾಡಿಸಿ 10 ಲಕ್ಷ ಹಣವನ್ನು ಬಿಡುಗಡೆ ಮಾಡಿಸಿಕೊಟ್ಟರು. ತಾವು ಕೂಡ ವಿವಿಧ ಮೂಲಗಳಿಂದ ಒಂದಷ್ಟು ಹಣ ಕೊಡಿಸಿಕೊಟ್ಟರು. ಇನ್ನು ರಾಜಕಾರಣಿಗಳು, ಉದ್ಯಮಿಗಳು ಸಮಾಜ ಸೇವಕರು ಕೂಡ ಕೈ ಬಿಚ್ಚಿ ಹಣ ಕೊಟ್ಟರು. ವಾಣಿಜ್ಯ ಇಲಾಖೆಯನ್ನು ಕೂಡ ಬಿಟ್ಟರಲಿಲ್ಲ. ಕೆಎಸ್‌ಟಿ/ಸಿಎಸ್‌ಟಿ ಲೈಸೆನ್ಸ್ ರಿನೀವಲ್ ಮಾಡಿಸಲು ಹೋದವರಿಂದಲೂ 500 ರೂ. ವಸೂಲಿ ಮಾಡಲಾಯಿತು. ಮಂಡ್ಯದಲ್ಲಿ ಡಾ.ಅನಿಲ್ ಆನಂದ್ ಎಂಬಾತ ಬರದ ಸಂದರ್ಭದಲ್ಲಿಯೂ ಕೆಲ ದಿನಗಳ ಹಿಂದೆ ಮೂರು ದಿನಗಳ ಕಾಲ ಸರ್‌ಎಂವಿ ಕ್ರೀಡಾಂಗಣದಲ್ಲಿ ಆಹಾರ ಮೇಳ ಆಯೋಜಿಸಿದ್ದ. ಪ್ರತಿ ಅಂಗಡಿಗೆ ಇಂತಿಷ್ಟು ಬಾಡಿಗೆ ಫಿಕ್ಸ್ ಮಾಡಿ ನೂರಾರು ಅಂಗಡಿಗಳಿಂದ ಬಾಡಿಗೆ ಸಂಗ್ರಹಿಸಿದ್ದನ್ನು ನೋಡಿದ ರವಿಕುಮಾರ ಸಾಹಿತ್ಯ ಸಮ್ಮೇಳನದಲ್ಲೂ ಚುರುಮುರಿ, ಗೋಬಿ ಮಂಚೂರಿ, ಬಿರಿಯಾನಿಯಂತಹ ಫಾಸ್ಟ್ ಫುಡ್ ಅಂಗಡಿಗಳಿಂದ 6 ಸಾವಿರದಂತೆ ಬಾಡಿಗೆ ಫಿಕ್ಸ್ ಮಾಡಿ 42 ಮಳಿಗೆಗಳಿಂದ ಲಕ್ಷಾಂತರ ಹಣ ಎತ್ತಿದ್ದು ವ್ಯಾಪಾರ ಬುದ್ಧಿಯ ರವಿಕುಮಾರನ ಹಣ ಮಾಡುವ ಚಾಣಾಕ್ಷತೆಗೆ ಸಾಕ್ಷಿಯಾಗಿದೆ.

ಸುಮಾರು 30 ಲಕ್ಷಕ್ಕೂ ಅಧಿಕ ಹಣವನ್ನು ಸಾಹಿತ್ಯ ಸಮ್ಮೇಳನಕ್ಕೆ ವಸೂಲಿ ಮಾಡಲಾಯಿತು. ಸಂಸದ ಸಿ.ಎಸ್.ಪುಟ್ಟರಾಜು, ಜಿ.ಪಂ. ಸದಸ್ಯ ಯೋಗೇಶ್, ಒಕ್ಕಲಿಗರ ಸಂಘದ ಅಧ್ಯಕ್ಷ ಚಿಟ್ಟೇಗೌಡ, ರಾಜ್ಯ ಸರ್ಕಾರಿ ನೌಕರರ



ಸಂಘದ ರಾಜ್ಯಾಧ್ಯಕ್ಷ ಮಂಜೇಗೌಡ, ರಿಯಲ್ ಎಸ್ಟೇಟ್‌ಕುಳ ಲಕ್ಷ್ಮೀನಾರಾಯಣ, ಅನಿವಾಸಿ ಭಾರತೀಯ ಸಂಘದ ಅಧ್ಯಕ್ಷೆ ಆರತಿ ಕೃಷ್ಣ ಜಿಲ್ಲೆಯ ಶಾಸಕರು, ಜಿ.ಪಂ. ಸದಸ್ಯರು, ಉದ್ಯಮಿಗಳು ಕೂಡ ಸಮ್ಮೇಳನಕ್ಕೆಂದೇ ಹಣ ನೀಡಿದ್ದರು. ವಸೂಲಿ ವೀರ ರವಿಕುಮಾರ್ ಸಮ್ಮೇಳನಕ್ಕೆ ಹಣ ನೀಡಿದ ಎಲ್ಲರಿಗೂ ಸಮ್ಮೇಳನದ ವೇದಿಕೆಯಲ್ಲಿ ಅವಕಾಶ ನೀಡಿದ್ದ. ಸಮ್ಮೇಳನದ ಕರಪತ್ರ ನೋಡಿದರೆ ಸಾಕು, ಸಾಹಿತಿಗಳಿಗಿಂತ ರಾಜಕಾರಣಿಗಳು ಹಾಗೂ ಉದ್ಯಮಿಗಳ ಹೆಸರೇ ತುಂಬಿ ಅಸಹ್ಯ ಬರಿಸಿತ್ತು. ಸಮ್ಮೇಳನಕ್ಕೆ ಅಷ್ಟೆಲ್ಲ ನೆರವು ನೀಡಿದ ಜಿಲ್ಲಾಧಿಕಾರಿ ಜಿಯಾವುಲ್ಲರಿಗೇ ರವಿಕುಮಾರ ಆಹ್ವಾನ ಪತ್ರಿಕೆ ನೀಡಿರಲಿಲ್ಲ. ಹಿರಿಯ ಸಾಹಿತಿಗಳು, ಯುವ ಸಾಹಿತಿಗಳಿಗೆ ಆಹ್ವಾನ ಪತ್ರಿಕೆಯನ್ನೇ ನೀಡಲಿಲ್ಲ.

ತಾನು ಕಸಾಪ ಅಧ್ಯಕ್ಷನಾಗಲು ಸಹಕರಿಸಿದ ಎಲ್ಲರಿಗೂ ವೇದಿಕೆ ಹಂಚಿದ್ದ ರವಿಕುಮಾರ ತನ್ನ ವಿರುದ್ಧ ನಿಂತಿದ್ದ ಸಾಹಿತಿಗಳನ್ನು ವೇದಿಕೆಯಿಂದ ದೂರವೇ ಇಟ್ಟಿದ್ದ. ಜೆಡಿಎಸ್ ಪಕ್ಷದ ಮುಖಂಡನೂ ಆಗಿರುವ ರವಿಕುಮಾರ ಹೆಚ್ಚಾಗಿ ಜೆಡಿಎಸ್ ಮುಖಂಡರಿಗೆ ಮಣೆ ಹಾಕಿ ಇಡೀ ಸಮ್ಮೇಳನವನ್ನೇ ಜೆಡಿಎಸ್ ಮಾಡಲು ಹೊರಟಿದ್ದ. ವೇದಿಕೆಗೆ ಬೆಸಗರಹಳ್ಳಿ ರಾಮಣ್ಣರ ಹೆಸರನ್ನು ಇಡುತ್ತೇನೆಂದು ಅವರ ಮಗಳಾದ ಅಪರ ಜಿಲ್ಲಾಧಿಕಾರಿ ಪೂರ್ಣಿಮಾ ಅವರಿಂದಲೂ ಸಹಕಾರ ಪಡೆದ ರವಿಕುಮಾರ ಬೆಸಗರಹಳ್ಳಿ ರಾಮಣ್ಣರ ಭಾವಚಿತ್ರವನ್ನು ವೇದಿಕೆಯಲ್ಲಿ ಹಾಕದೆ ರಾಜಕಾರಣಿಗಳ ಭಾವಚಿತ್ರವನ್ನು ಹಾಕಿ ರಾಜಕಾರಣ ಮಾಡಿದ್ದ. ಭವಿಷ್ಯದಲ್ಲಿ ಜೆಡಿಎಸ್ ಪಕ್ಷದಿಂದ ಅಧಿಕಾರ ಹಿಡಿಯುವ ಸ್ಕೆಚ್ ಹಾಕಿರುವ ರವಿಕುಮಾರ ಸಮ್ಮೇಳನದ ಉದ್ಘಾಟನೆಗೆಂದು ಹೆಚ್.ಡಿ.ಕುಮಾರಸ್ವಾಮಿಯನ್ನು ಆಹ್ವಾನಿಸಿದ್ದ. ಸಾಹಿತ್ಯ ಸಮ್ಮೇಳನದಲ್ಲಿ ರಾಜಕಾರಣಿಗೆ ಕೆಲಸವಿಲ್ಲ. ಹೀಗಿದ್ದರೂ ವಿವಿಧ ಪಕ್ಷಗಳ ಮುಖಂಡರನ್ನು ತುಂಬಿ ಕನ್ನಡ ಸಾಹಿತ್ಯ ಸಮ್ಮೇಳನವನ್ನು ರಾಜಕೀಯ ಸಮ್ಮೇಳನವನ್ನಾಗಿ ಮಾಡಿದ ಅಪಕೀರ್ತಿ ರವಿಕುಮಾರನದ್ದು. ಸಮ್ಮೇಳನದ ಸಾನಿಧ್ಯ ವಹಿಸಬೇಕಿದ್ದ ಆದಿಚುಂಚನಗಿರಿ ಮಠದ ಪೀಠಾಧ್ಯಕ್ಷ ನಿರ್ಮಲಾನಂದನಾಥ ಶ್ರೀಗಳು ರವಿಕುಮಾರನ ಬಗ್ಗೆ ತಿಳಿದೇ ಬರಲಿಲ್ಲ ಎಂಬುದು ಸಾಹಿತ್ಯಾಸಕ್ತರ ಮಾತು.

## ಅಧ್ವಾನದ ಗೋಷ್ಠಿ

ತಾಲ್ಲೂಕು ಮತ್ತು ಜಿಲ್ಲಾ ಸಾಹಿತ್ಯ ಸಮ್ಮೇಳನದಲ್ಲಿ ಸ್ಥಳೀಯ ಸಾಹಿತ್ಯ ಕಲೆ, ಸಂಗೀತ ಕ್ಷೇತ್ರಕ್ಕೆ ಹೆಚ್ಚು ಪ್ರಾಧಾನ್ಯತೆ ನೀಡಬೇಕು. ಆದರೆ ಜಿಲ್ಲಾ ಸಮ್ಮೇಳನದಲ್ಲಿ ಒಂದೆರಡು ಗೋಷ್ಠಿಗಳನ್ನು ಬಿಟ್ಟರೆ ಉಳಿದೆಲ್ಲ ಗೋಷ್ಠಿಗಳು ಅಧ್ವಾನವಾಗಿದ್ದವು. ಹಾಸ್ಯಗಾರ ಪ್ರೊ. ಕೃಷ್ಣೇಗೌಡರೇ ಸಮ್ಮೇಳನಾಧ್ಯಕ್ಷರಾಗಿದ್ದರಿಂದ ಅವರ ಹಾಸ್ಯ ಜೊತೆಗಾರರಾದ ರಿಚರ್ಡ್ ಲೂಯಿಸ್, ವೈ.ವಿ.ಗುಂಡೂರಾವ್, ಕಿರ್ಲೋಸ್ಕರ್ ಸತ್ಯ ಮೊದಲಾದವರು ಒಂದು ಹಾಸ್ಯಗೋಷ್ಠಿ ನಡೆಸಿಕೊಟ್ಟರು. ಈ ಹಾಸ್ಯ ಗೋಷ್ಠಿಯಲ್ಲಿ ಜನ ತುಂಬಿದ್ದರೇ ಹೊರತು ಉಳಿದ ಗೋಷ್ಠಿಗಳು ಜನರಿಲ್ಲದೆ ಖಾಲಿ ಹೊಡೆಯುತ್ತಿದ್ದವು. ಸಾಹಿತ್ಯ ಸಮ್ಮೇಳನಗಳ ಪ್ರಮುಖ ಆಶಯ ಎಂದರೆ ಗೋಷ್ಠಿಗಳನ್ನು ಆಯೋಜಿಸಿ ಅದರಿಂದ ಹೊರಬರುವ ಉಪಯುಕ್ತ ಮಾಹಿತಿಗಳನ್ನು ಸಂಗ್ರಹಿಸಿ ಜ್ಞಾನ ತುಂಬಿಸುವ ಕೆಲಸವನ್ನು ಮಾಡುವುದು. ಆದರೆ ರವಿಕುಮಾರ್ ಅಂಡ್ ಟೀಂ ಮಾಡಿದ ವಿಚಾರಗೋಷ್ಠಿಗಳು ಅಧ್ವಾನವಾಗಿ ಹೋಗಿದ್ದವು.

ಮಂಡ್ಯ ಜಿಲ್ಲೆಯ ಬರ, ರೈತರ ಆತ್ಮಹತ್ಯೆ, ಕಡೇಪಕ್ಷ ಕಾವೇರಿ ವಿವಾದ ಚರ್ಚೆಯಲ್ಲಿ ಜಾಗ ಪಡೆಯಲೇ ಇಲ್ಲ. ಬರದ ಸಂದರ್ಭದಲ್ಲಿ ಸಮ್ಮೇಳನವನ್ನು ಸರಳವಾಗಿ ಮಾಡಿ, ಸಂಗ್ರಹಿಸಿದ್ದ ಹಣವನ್ನು ಆತ್ಮಹತ್ಯೆಗೆ ತುತ್ತಾದ ರೈತರ ಮಕ್ಕಳ ಶಿಕ್ಷಣಕ್ಕೆ, ದನ-ಕರುಗಳ ಮೇವು ಖರೀದಿಗೆ ನೀಡಿದ್ದರೆ ಅದೊಂದು ಅಪರೂಪದ ಕೆಲಸವಾಗುತ್ತಿತ್ತು, ಆದರೆ ಬಡ್ಡಿ ರವಿಯಿಂದ ಅಂತಹುದನ್ನು ನಿರೀಕ್ಷಿಸಲು ಸಾಧ್ಯವೇ?

■ ವರದಿಗಾರ

## ಸಮ್ಮೇಳನಾಧ್ಯಕ್ಷರ ಆಯ್ಕೆಯಲ್ಲೂ ವ್ಯಾಪಾರಿ ಬುದ್ಧಿ

14ನೇ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರನ್ನಾಗಿ ಹಾಸ್ಯಗಾರ ಪ್ರೊ. ಕೃಷ್ಣೇಗೌಡರನ್ನು ಆಯ್ಕೆ ಮಾಡುವ ಮೂಲಕ ಲೇವಾದೇವಿಗಾರ ರವಿಕುಮಾರ ಇಲ್ಲೂ ತನ್ನ ವ್ಯಾಪಾರಿ ಬುದ್ಧಿಯನ್ನು ತೋರಿಸಿದ್ದಾನೆ. ತಮ್ಮ ಹಾಸ್ಯದ ಮೂಲಕವೇ ಜನರನ್ನು ಹಿಡಿದಿಟ್ಟುಕೊಳ್ಳುವ ಮಾಂತ್ರಿಕ ಶಕ್ತಿ ಹೊಂದಿರುವ ಕೃಷ್ಣೇಗೌಡರಂತವರಿದ್ದರೆ ಹಣ ವಸೂಲಿ ಸುಲಭ, ಸೆಲೆಬ್ರಿಟಿಯಾಗಿರುವ ಕೃಷ್ಣೇಗೌಡರನ್ನು ಬಿಟ್ಟು ಬೇರೆ ಯಾರನ್ನು ಆಯ್ಕೆ ಮಾಡಿದರೂ ಹಣ ಸಂಗ್ರಹಣೆ ಇಷ್ಟೊಂದು ದೊಡ್ಡ ಮಟ್ಟದಲ್ಲಿ ಸಾಧ್ಯವಿಲ್ಲ ಎಂಬ ಕಾರಣಕ್ಕೆ ರವಿಕುಮಾರ ಜಿಲ್ಲೆಯ ಇತರ ಸಾಹಿತಿಗಳತ್ತ ದೃಷ್ಟಿಯನ್ನೇ ಹಾಯಿಸಲಿಲ್ಲ.

ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಲು ನಿಜವಾಗಿಯೂ ಅರ್ಹರಾದ ಅನೇಕ ಸಾಹಿತಿಗಳಿದ್ದರು. ಚಂದ್ರಶೇಖರ ಆಲೂರು, ಹಿರಿಯ ಸಾಹಿತಿ ತೈಲೂರು ವೆಂಕಟಕೃಷ್ಣ ಮೂರು ವಿವಿಧ ಅಕಾಡೆಮಿ ಪ್ರಶಸ್ತಿ ಪಡೆದಿರುವ ಸಾಹಿತಿ, ಪತ್ರಕರ್ತ ಜಗದೀಶ್ ಕೊಪ್ಪ ಡಾ.ಪ್ರದೀಪ್‌ಕುಮಾರ್ ಹೆಬ್ರಿ, ಕೆ.ಸತ್ಯನಾರಾಯಣ ತರಹದ ಅನೇಕ ಸಾಹಿತಿಗಳು ಇದ್ದರು. ಆದರೆ ಇವರನ್ನೆಲ್ಲ ಕಡೆಗಣಿಸಿ ಹಾಸ್ಯಗಾರ ಪ್ರೊ.ಕೃಷ್ಣೇಗೌಡರನ್ನು ಆಯ್ಕೆ ಮಾಡಿದ್ದು ಎಷ್ಟು ಸರಿ? ಎಂಬುದು ಸಾಹಿತ್ಯ ಪ್ರೇಮಿಗಳ ಪ್ರಶ್ನೆ.

ಹಾಗೆಯೇ ಕೇಂದ್ರ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷರಾಗಿ ಮನು ಬಳಿಗಾರ್ ಬಂದನಂತರ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಸಿನಿಮಾ, ಹಾಸ್ಯ ಕಲಾವಿದರನ್ನು ಆಯ್ಕೆ ಮಾಡುವ ಪರಿಪಾಠ ಆರಂಭವಾಗಿದೆ. ಇತ್ತೀಚೆಗೆ ಹಲ್ಗೆರೆಯಲ್ಲಿ ನಡೆದ ಮಂಡ್ಯ ತಾಲ್ಲೂಕು ಸಮ್ಮೇಳನದ ಅಧ್ಯಕ್ಷರನ್ನಾಗಿ ಮಂಡ್ಯ ರಮೇಶ್‌ರನ್ನು ಆಯ್ಕೆ ಮಾಡಿದ ರವಿಕುಮಾರ್ ಅಂಡ್ ಪಟಾಲಂ ಸಾಹಿತಿಗಳಿಗೆ ಅವಕಾಶವನ್ನೇ ನೀಡಲಿಲ್ಲ. ಸಿನಿಮಾ, ರಂಗಭೂಮಿಯಲ್ಲಿ ಮಂಡ್ಯ ರಮೇಶ್ ಅವರದ್ದು ದೊಡ್ಡ ಸಾಧನೆ ಎಂಬುದರಲ್ಲಿ ಎರಡು ಮಾತಿಲ್ಲ. ಆದರೆ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಆಯ್ಕೆಯಾಗುವ ಅರ್ಹತೆಯಿರಲಿಲ್ಲ. ಲಿಂಗಣ್ಣ ಬಂಧೂಕರ್, ಪ್ರೊ.ಸಿದ್ದರಾಜು ಆಲಕೆರೆ, ಕೆ.ಕಾಳೇಗೌಡ, ಕಥೆಗಾರ ಸಂತೆಕಸಲಗೆರೆ ಪ್ರಕಾಶ್, ಬಿ.ಆರ್. ಉಮಾ, ಡಾ.ಪ್ರದೀಪ್‌ಕುಮಾರ್ ಹೆಬ್ರಿ, ಕೃಷ್ಣ ಸ್ವರ್ಣಸಂದ್ರ, ಮಂಗಲ ಸತೀಶ್‌ಜವರೇಗೌಡ ಸೇರಿದಂತೆ ಹಲವು ಸಾಹಿತಿಗಳು ಸಾಹಿತ್ಯ, ಶಿಕ್ಷಣ, ಸಾಂಸ್ಕೃತಿಕ ಸಂಘಟನೆ, ಪತ್ರಿಕೋದ್ಯಮ ಸೇರಿದಂತೆ ಹಲವು ರಂಗಗಳಲ್ಲಿ ಕ್ರಿಯಾಶೀಲರಾಗಿದ್ದವರು. ಹಾಗೆಯೇ ನಿವೃತ್ತ ಐಎಎಸ್ ಅಧಿಕಾರಿ ಮಂಗಲ ಟಿ.ತಿಮ್ಮೇಗೌಡರವರು ಕರ್ನಾಟಕ ಜಾನಪದ ಪರಿಷತ್ತಿನ ಹಾಲಿ ಅಧ್ಯಕ್ಷರಾಗಿ ಜಾನಪದ ಸಾಹಿತ್ಯದ ಅಭಿವೃದ್ಧಿಗೆ ಶ್ರಮಿಸುತ್ತಿದ್ದಾರೆ. ಮೂರು ಪುಸ್ತಕಗಳನ್ನು ಬರೆದಿರುವ ತಿಮ್ಮೇಗೌಡರನ್ನು ತಾಲ್ಲೂಕು ಅಧ್ಯಕ್ಷರ ಆಯ್ಕೆಗೆ ಪರಿಗಣಿಸಬಹುದಿತ್ತು. ಆದರೆ ಇವರ್‍ಯಾರನ್ನೂ ಪರಿಗಣಿಸದೆ ಸಾಹಿತ್ಯೇತರ ವ್ಯಕ್ತಿಯಾದ ಮಂಡ್ಯ ರಮೇಶ್‌ರನ್ನು ಆಯ್ಕೆ ಮಾಡುವ ಮೂಲಕ ರವಿಕುಮಾರ್ ಅಂಡ್ ಟೀಂ ಚಂದಾ ಹಣ ಸಂಗ್ರಹಣೆ ಮಾಡಲು ಸೆಲೆಬ್ರಿಟಿಯೊಬ್ಬನನ್ನು ಬಳಸಿಕೊಂಡಿತು.

ಲೇವಾದೇವಿಯವರಿಂದ ಕನ್ನಡ ನಾಡು-ನುಡಿಯ ಉದ್ಧಾರವಾಗುವುದು ಸಾಧ್ಯವೇ?




06 ⏮

ಖಾಲೀದ್‌ನನ್ನೂ ತನ್ನ ಟಾರ್ಗೆಟ್ ಮಾಡಿಕೊಂಡಿತ್ತು. ಆತ ಕಾಶ್ಮೀರಿ ಮುಸ್ಲಿಮನೆನ್ನುವ (ವಾಸ್ತವವಾಗಿ ಆತ ದೆಹಲಿಯವನು) ಐಡೆಂಟಿಟಿಯ ಕಾರಣಕ್ಕೆ ಎಬಿವಿಪಿ ಖಾಲೀದ್‌ನ ಮೇಲೆ ದೇಶದ್ರೋಹದ ಕಟ್ಟುಕತೆ ತೂರಿಬಿಟ್ಟಿತ್ತು. ಅದೇ ಖಾಲೀದ್ ಸೆಮಿನಾರ್‌ಗೆ ಬರುತ್ತಾನೆಂದರೆ ಅದು ಸುಮ್ಮನಿರುತ್ತಾ. ಯಥಾಪ್ರಕಾರ ರಮ್‌ಜಾಸ್ ಕಾಲೇಜಿನ ಎಬಿವಿಪಿ ಘಟಕ ಸೆಮಿನಾರ್‌ಗೆ ಅವಕಾಶ ನೀಡುವುದಿಲ್ಲ ಅಂತ ತಕರಾರು ತೆಗೆದು ಕೂತಿತ್ತು. ಕೊನೆಗೆ ಕಾಲೇಜಿನ ಆಡಳಿತ ಮಂಡಳಿಯವರು ಇಲ್ಲದ ಉಸಾಬರಿ ಯಾಕೆ ಅಂತ ಖಾಲೀದ್ ಭಾಗವಹಿಸಬೇಕಿದ್ದ ಗೋಷ್ಠಿಯನ್ನು ರದ್ದು ಮಾಡಿ ಕೈತೊಳೆದುಕೊಂಡಿದ್ದರು.

ಯಾವ ಸಮರ್ಪಕ ಸಬೂಬೂ ಇಲ್ಲದೇ ಕೇವಲ ಎಬಿವಿಪಿ ಬೆದರಿಕೆ ಹಾಕಿದ ಕಾರಣಕ್ಕೆ ಗೋಷ್ಠಿಯನ್ನು ರದ್ದು ಮಾಡಿದ್ದರ ವಿರುದ್ಧ ಮಾರನೇ ದಿನ ಕಾಲೇಜಿನ ಐಸಾ ವಿದ್ಯಾರ್ಥಿ ಸಂಘಟನೆ ಪ್ರತಿಭಟನೆಗೆ ಕರೆಕೊಟ್ಟಿತ್ತು. ಅವತ್ತು ಸರ್ವ ಸನ್ನದ್ಧರಾಗಿಯೇ ಬಂದಿದ್ದ ಎಬಿವಿಪಿ ಕಾರ್ಯಕರ್ತರು ಪ್ರತಿಭಟನಾಕಾರರ ಮೇಲೆ ಮುಗಿಬಿದ್ದು ಹಿಗ್ಗಾಮುಗ್ಗಾ ಥಳಿಸಿದ್ದಲ್ಲದೆ ಪ್ರತಿಭಟನೆಯಲ್ಲಿ ಭಾಗಿಯಾಗಿದ್ದ ತಮಗೆ ಪಾಠ ಹೇಳುವ ಪ್ರೊಫೆಸರ್‌ಗಳನ್ನೂ ಎಳೆದಾಡಿ ಬಡಿದಿದ್ದರು. 'ಗುರು ಸಾಕ್ಷಾತ್ ಪರಬ್ರಹ್ಮ' ಎಂದು ಬಾಯ್ತುಂಬ ಶ್ಲೋಕ ಉದುರಿಸುವ ಕೇಸರಿವಾಲಾಗಳ ಅಸಲೀ ಸಂಸ್ಕೃತಿ ಅವತ್ತು ಬೀದಿಯಲ್ಲಿ ಬಿದ್ದು ಹೊರಳಾಡಿದ್ದು ಹೀಗೆ. ಸಾಕಷ್ಟು ಸಂಖ್ಯೆಯಲ್ಲಿ ಪೊಲೀಸರಿದ್ದರೂ ಅವರು ಕೈಕಟ್ಟಿ ನಿಂತದ್ದಲ್ಲದೆ, ಕೊನೆಯ ಹಂತದಲ್ಲಿ ಪ್ರತಿಭಟನಾಕಾರರ ಮೇಲೆಯೇ ಲಾಠಿ ಚಾರ್ಜ್ ಮಾಡಿದ್ದು ಇಡೀ ಘಟನೆಯ 'ರಾಜಕೀಯ' ವ್ಯೂಹವನ್ನು ಬೆತ್ತಲಾಗಿಸಿತ್ತು. ಆ ಪ್ರತಿಭಟನೆಯಲ್ಲಿ ಗುರ್‌ಮೆಹರ್‌ಳ ಸ್ನೇಹಿತೆಯರೂ ಭಾಗಿಯಾಗಿದ್ದರು.

ಆ ಬಡಿದಾಟದಲ್ಲಿ ಏಟು ತಿಂದು ರೂಮಿಗೆ ಬಂದ



ಸ್ನೇಹಿತೆಯರನ್ನು ಕಂಡ ಗುರ್‌ಮೆಹರ್‌ಗೆ ಸಹಜವಾಗಿಯೇ ಎಬಿವಿಪಿಯ ದಬ್ಬಾಳಿಕೆ ಸಂಪ್ರದಾಯದ ವಿರುದ್ಧ ಆಕ್ರೋಶ ಉಕ್ಕಿ ಬಂದಿತ್ತು, ಕೂಡಲೇ ಆಕೆ ಮೇಲಿನಂತೆ ಪ್ಲೇಕಾರ್ಡ್ ಬರೆದುಕೊಂಡು, ಫೋಟೋವನ್ನು ಫೇಸ್‌ಬುಕ್‌ಗೆ ಅಪ್‌ಲೋಡ್ ಮಾಡುವ ಮೂಲಕ ತನ್ನ ಪ್ರತಿಭಟನೆಯನ್ನು ದಾಖಲಿಸಿದ್ದಳು. ಆ ತಾರ್ಕಿಕ ಪ್ರತಿಭಟನೆಯನ್ನೆ ಎಬಿವಿಪಿ ಕುತರ್ಕದ 'ದೇಶದ್ರೋಹ'ದ ಹಳ್ಳಕ್ಕೆ ತಳ್ಳಿ ರಾಡಿ ಎಬ್ಬಿಸಿದೆ. ಅಷ್ಟಕ್ಕೂ ಅದು ಅವಳೊಬ್ಬಳ ಏಕಾಂಗಿ ಪ್ರತಿಭಟನೆಯೇನೂ ಅಲ್ಲ, ದಿಲ್ಲಿ ವಿವಿಯ ಕ್ಯಾಂಪಸ್‌ನ ವಿದ್ಯಾರ್ಥಿಗಳೇ 'ಎಬಿವಿಪಿಯನ್ನು ಹೊರಗಿಡುವ' ಅಭಿಯಾನ ಆಯೋಜಿಸಿಕೊಂಡು ಇಂಥಾ ಪ್ರತಿಭಟನೆ ನಡೆಸುತ್ತಿವೆ. ಅದರಲ್ಲಿ ಕೌರ್ ಕೂಡಾ ಒಬ್ಬಳಷ್ಟೆ.

## ಗುಮ್ಮನಂತ ಸಿಮ್ಮ!

ಸ್ತ್ರೀಯರಿಗೆ ಗೌರವ ಕೊಡೋದು ತಮ್ಮ ರಕ್ತದಲ್ಲೇ ಬಂದುಬಿಟ್ಟಿದೆ ಅಂತೆಲ್ಲ ಭಾಷಣ ಬಿಗಿಯುವ ಕೇಸರಿವ್ಯಾಧಿಗಳು ಗುರ್‌ಮೆಹರ್ ವಿಚಾರದಲ್ಲಿ ವರ್ತಿಸಿದ ಬಗೆ ಇದೆಯಲ್ಲ ಅದು ಅವರ ಇಬ್ಬಂದಿತನವನ್ನು ಬಯಲು ಮಾಡಿದೆ. ತಮ್ಮ ವಿಚಾರವನ್ನು ಒಪ್ಪಲಿಲ್ಲ ಎಂಬ ಏಕೈಕ ಕಾರಣಕ್ಕೆ ತನಗೆ ಎಬಿವಿಪಿ ಕಾರ್ಯಕರ್ತರಿಂದ ಜೀವಬೆದರಿಕೆ ಮತ್ತು ಅತ್ಯಾಚಾರದ ಬೆದರಿಕೆಗಳು ಬಂದಿರುವುದಾಗಿ ಖುದ್ದು ಗುರ್‌ಮೆಹರ್‌ಳೇ ಹೇಳಿಕೊಂಡಿದ್ದಾಳೆ. ಅಸಲಿಗೆ ಎಬಿವಿಪಿ ಮತ್ತದರ ವಕ್ತಾರರುಗಳು ಈ ರೀತಿ ವರ್ತಿಸುತ್ತಿರೋದು ಇದೇ ಮೊದಲೇನಲ್ಲ. ಮಹಿಳೆಯರು ವಿಚಾರ ಭೇದವನ್ನು ಮುಂದಿಟ್ಟಾಗಲೆಲ್ಲ ಅವರ ಚಾರಿತ್ರ್ಯ ಮೇಲೆ ದಾಳಿ ಮಾಡೋದು, ಅತ್ಯಾಚಾರದಂತಹ ಹೀನ ಬೆದರಿಕೆ ಹಾಕೋದು ಅವುಗಳ ಪರಂಪರೆಯೇ ಆಗಿಹೋಗಿದೆ. ಸೈದ್ಧಾಂತಿಕವಾಗಿ ಸದೃಢರಲ್ಲದವರ ಹತಾಶ ವರ್ತನೆಗಳು ಹೇಗಿರಬೇಕೊ ಅದೇರೀತಿ ಹೊರಬೀಳುತ್ತಿವೆ. ಅದರಲ್ಲಿ ಅಚ್ಚರಿಯೇನೂ ಇಲ್ಲ.

ಆದರೆ ಗುರ್‌ಮೆಹರ್ ವಿಚಾರದಲ್ಲಿ ಮೈಸೂರು-ಕೊಡಗು ಸಂಸದ ಪ್ರತಾಪ್ ಸಿಮ್ಮ ತೋರಿದ ಕಿಡಿಗೇಡಿತನ ಇದೆಯಲ್ಲ ಅದು ನಿಜಕ್ಕೂ ಅಕ್ಷಮ್ಯ. ಆತ ಜವಾಬ್ದಾರಿಯುತ ಜನಪ್ರತಿನಿಧಿಯಾದರೂ ತೋಚಿದ್ದನ್ನೆಲ್ಲ ಗೀಚುವ ತನ್ನ ಹಳೇ ಖಯಾಲಿಯಿಂದ ಹೊರಬಂದಂತೆ ಕಾಣುತ್ತಿಲ್ಲ. ಶಾಂತಿಗಾಗಿ ಹಂಬಲಿಸಿದ ಕೌರ್‌ಳನ್ನು ಸಾವಿನ ಸೈತಾನನಂತಿರುವ ದಾವೂದ್ ಇಬ್ರಾಹಿಂಗೆ ಹೋಲಿಸಿದ ಪೋಸ್ಟ್ ಶೇರ್ ಮಾಡಿರುವ ಸಿಮ್ಮ ತನ್ನ ಬೋಳೇತನವನ್ನು ಜಾಹೀರು ಮಾಡಿಕೊಂಡಿದ್ದಾನೆ..ಕೌರ್‌ಳನ್ನು ಸೈನಿಕನ ಮಗಳು ಹಾಗೂ ದಾವೂದ್‌ನನ್ನು ಪೊಲೀಸನ ಮಗ ಅಂತ ತಲೆಬರಹ ಕೊಟ್ಟು 'ಕಡೇಪಕ್ಷ ದಾವೂದ್ ತನ್ನ ದೇಶದ್ರೋಹಿ ಕೃತ್ಯ ಸಮರ್ಥಿಸಿಕೊಳ್ಳಲು ತಂದೆಯ ಹೆಸರು ಬಳಸಿಕೊಳ್ಳಲಿಲ್ಲ' ಎಂಬ ಬರಹ ಆ ಪೋಸ್ಟ್‌ನಲ್ಲಿದೆ. ಅಲ್ಲಿಗೆ ಎಬಿವಿಪಿಯನ್ನು ವಿರೋಧಿಸಿದ ಏಕೈಕ ಕಾರಣಕ್ಕೆ ಸಿಮ್ಮನ ಸಂತತಿಗಳಿಗೆ ಸೈನಿಕನೊಬ್ಬನ ಮಗಳು ಕ್ರಿಮಿ ದಾವೂದ್‌ಗಿಂತ ದುಷ್ಟಳಾಗುತ್ತಾಳೆ! ಬಿಜೆಪಿ ಕಾರ್ಯಕರ್ತನ ಹತ್ಯೆ ದೊಂಬಿ, ಟಿಪ್ಪು ವಿವಾದದಂತಹ ಕ್ಷುಲ್ಲಕ ವಿಚಾರಗಳಲ್ಲಷ್ಟೆ ತನ್ನ ಸಂಸದಗಿರಿಯನ್ನು ಚಲಾಯಿಸಿದ್ದ ಸಿಮ್ಮನಿಗೆ ತಾನು ಎಂಪಿ ಅನ್ನೋದು ತನಗೇ ಎಲ್ಲಿ ಮರೆತುಹೋಗುತ್ತೋ ಅಂತ ಇಂಥಾ ಕುಚೇಷ್ಟೆಯ ಮೂಲಕ ನೆನಪು ಮಾಡಿಕೊಂಡಂತಿದೆ. ಈ ಕುಚೇಷ್ಟೆಗೆ ಪ್ರತಿಯಾಗಿ ಆದಾಗಲೇ ಹೈಗ್ರೌಂಡ್ಸ್ ಪೊಲೀಸ್ ಠಾಣೆಯಲ್ಲಿ ಸಿಮ್ಮನ ಮೇಲೆ ಕೇಸೂ ಹೇರಿಕೊಂಡಿದೆ.

## ಯಾವುದು ದೇಶದ್ರೋಹ?

ಅಷ್ಟಕ್ಕೂ ಈ ಕೇಸರಿವಾಲಾಗಳು ಬಾಯ್ತೆರೆದರೆ 'ದೇಶದ್ರೋಹಿ' ಗಳು, 'ದೇಶದ್ರೋಹ' ಅಂತ ಬೊಬ್ಬಿರಿಯುತ್ತಾವಲ್ಲ ಅವಕ್ಕೆ ಕಾನೂನಿನ ಚೌಕಟ್ಟಿನಲ್ಲಿ ದೇಶದ್ರೋಹದ ವ್ಯಾಖ್ಯೆ ಏನೂ ಅಂತಾದರೂ ಗೊತ್ತಾ? ಸಿಮ್ಮನ ಸಂತತಿಗಳ ಕನವರಿಕೆ ನೋಡಿದರೆ ಖಂಡಿತವಾಗಿಯೂ ಗೊತ್ತಿಲ್ಲ ಅನ್ನಿಸುತ್ತೆ. ಸಂಘ ಪರಿವಾರವನ್ನು, ಬಿಜೆಪಿಯನ್ನು ಮತ್ತದರ ಅಂಗಗಳನ್ನು ಯಾರ್‍ಯಾರು ವಿರೋಧಿಸುತ್ತಾರೊ ಅವರೆಲ್ಲ ದೇಶದ್ರೋಹಿಗಳು ಅನ್ನೋದು ಅವರ ಸಿಂಪಲ್ ಲಾಜಿಕ್. ಅಸಲಿಗೆ, ವಿಚಾರಭೇದ ಯಾವತ್ತಿಗೂ ದೇಶದ್ರೋಹ ಅನಿಸಿಕೊಳ್ಳುವುದಿಲ್ಲ, ದೇಶವನ್ನು ವಿಮರ್ಶಿಸುವುದೂ ದೇಶದ್ರೋಹವಲ್ಲ, ಕಾನೂನಿನ ಪ್ರಕಾರ, ದೇಶದ ಹಿತಾಸಕ್ತಿಗೆ ವಿರುದ್ಧವಾಗಿ ಸಂಚು ರೂಪಿಸುವುದು ಮಾತ್ರವೇ ದೇಶದ್ರೋಹದ ಕೃತ್ಯ. ಸಂಚು ರೂಪಿಸುವವರ್‍ಯಾರೂ ಬೀದಿಬೀದಿಯಲ್ಲಿ, ಫೇಸ್‌ಬುಕ್, ವ್ಯಾಟ್ಸಪ್ಪುಗಳಲ್ಲಿ ತಮ್ಮ ಕೃತ್ಯಗಳನ್ನು ಹೇಳಿಕೊಂಡು ತಿರುಗಾಡುವುದಿಲ್ಲ. ಪಾಕಿಸ್ತಾನದ ಬೇಹುಗಾರಿಕಾ ಸಂಸ್ಥೆ ಐಎಸ್‌ಐ ಜೊತೆ ಸಂಪರ್ಕ ಹೊಂದಿದ್ದ ಕಾರಣಕ್ಕೆ ಇತ್ತೀಚೆಗೆ ಪೊಲೀಸರು ಬಂಧಿಸಿದ ಮಧ್ಯಪ್ರದೇಶ ಬಿಜೆಪಿಯ ಧ್ರುವ್ ಸಕ್ಸೇನಾನಂತೆ ಒಳಗೊಳಗೇ ಕಾರ್ಯಸಾಧಿಸಿಬಿಡುತ್ತಾರೆ. ಅಂತಹ ದೇಶದ್ರೋಹಿಗಳನ್ನು ತನ್ನ ಸೆರಗಲ್ಲೇ ಇಟ್ಟುಕೊಂಡಿರುವ ಬಿಜೆಪಿ, ಬಹಿರಂಗವಾಗಿ ತಮ್ಮ ಅಭಿಪ್ರಾಯ ಸಾರುವ ಕನ್ಹಯ್ಯನನ್ನು, ಖಾಲೀದನನ್ನು, ಶೆಹ್ಲಾ ರಶೀದ್‌ರನ್ನು, ಅಮೀರ್ ಖಾನ್‌ರನ್ನು, ಗುರ್‌ಮೆಹರ್ ಕೌರ್‌ಳನ್ನು ದೇಶದ್ರೋಹಿಗಳಾಗಿಸಲು ಹೆಣಗಾಡುತ್ತಿದೆ. ನಿಮ್ಮ ಅಭಿಪ್ರಾಯವನ್ನು ಒಪ್ಪದ ಕಾರಣಕ್ಕೆ ಮತ್ತೊಬ್ಬರ ಮೇಲೆ ದಾಳಿ ಮಾಡಲು ನಮ್ಮ ಸಂವಿಧಾನ ಯಾರಿಗೂ ಅವಕಾಶ ಕೊಟ್ಟಿಲ್ಲ, ಇದು ಸಂಘಪರಿವಾರಕ್ಕೂ ಅನ್ವಯಿಸುತ್ತದೆ. ಹಾಗಾಗಿಯೇ ಅವರು ದೇಶದ್ರೋಹದ ಅಸ್ತ್ರ ಹಿಡಿದು ಪರೇಡು ಹೊರಟುಬಿಡುತ್ತಾರೆ.

ಒಟ್ಟಿನಲ್ಲಿ ಸುಳ್ಳನ್ನೇ ಸತ್ಯವೆಂದು ಸಾಧಿಸಲು ಶತಶತಮಾನದಿಂದ ಹೆಣಗಾಡಿ ಸೋತ ಅತೃಪ್ತ ಆತ್ಮಗಳು ಈಗ ಮತ್ತೆ ಹೊಸ ರೂಪದಲ್ಲಿ, ಹೊಸ ಅಸ್ತ್ರವನ್ನಿಡಿದು ಭಾರತದ ಮನಸ್ಸಿನ ಮೇಲೆ ದಾಳಿ ಮಾಡುತ್ತಿವೆ. ಆದರೆ ಸ್ವತಃ 'ಭಾರತದ್ರೋಹ'ದ ಲೇಪ ಅಂಟಿಸಿಕೊಂಡಿವೆ. ಯಥಾ ಪ್ರಕಾರ ಇದೂ ಯಶಸ್ವಿಯಾಗದು.

■ ಗಿರೀಶ್ ತಾಳಿಕಟ್ಟೆ

# 'ಕ್ಯಾಂಪಸ್‌ಗಳೆಂದರೆ ಕಾವ್ಯ ಮತ್ತು ಕಲೆ ಅರಳಬೇಕಾದ ತಾಣಗಳು'- ಕೌರ್

ಎಬಿವಿಪಿ ಅನವಶ್ಯಕ ವಿವಾದ ಎಬ್ಬಿಸಿದ ತರುವಾಯ ಇಂಡಿಯಾ ಟುಡೆ ಪತ್ರಿಕೆಯ ರಾಜ್‌ದೀಪ್ ಸರ್‌ದೇಸಾಯಿ ನಡೆಸಿದ ಸಂದರ್ಶನದಲ್ಲಿ ಗುರ್‌ಮೆಹರ್ ಕೌರ್ ಯಾವ ಅಳುಕಿಲ್ಲದೆ ತನ್ನ ಅಭಿಪ್ರಾಯಗಳನ್ನು ಸಮರ್ಥಿಸಿಕೊಂಡಿದ್ದಳು. ಆ ಸಂದರ್ಶನದ ಆಯ್ದ ಭಾಗ ಹೀಗಿದೆ:

ಪ್ರಶ್ನೆ: ಆ ಫೇಸ್‌ಬುಕ್ ಪೋಸ್ಟ್ ಬರೆಯಲು ನಿನ್ನನ್ನು ಪ್ರೇರೇಪಿಸಿದ್ದು ಯಾವುದು? ಎಬಿವಿಪಿಯಂತಹ ರಾಜಕೀಯ ಟಿಸಿಲಿನ ವಿರುದ್ಧ ಬಹಿರಂಗವಾಗಿ ಮಾತನಾಡಲು, ಪಾಕಿಸ್ತಾನದ ಜೊತೆಗೆ ಶಾಂತಿ ಸೌಹಾರ್ದತೆಯಂತಹ ಸಂಕೀರ್ಣ ವಿಷಯವನ್ನು ಬೆಂಬಲಿಸುವಂತಹ ಪೋಸ್ಟ್ ಹಾಕಲು ನಿಜಕ್ಕೂ ನಿನ್ನ ಪ್ರೇರೇಪಣೆ ಯಾವುದು?

ಕೌರ್: ನಿಜ ಹೇಳ್ತೀನಿ, ಅದು ಆ ಕ್ಷಣಕ್ಕೆ ಹಠಾತ್ತಾಗಿ ತೆಗೆದುಕೊಂಡ ನಿರ್ಧಾರ. ಅದು ನನ್ನ ಆಕ್ರೋಶದ ಅಭಿವ್ಯಕ್ತಿ. ಪ್ರತಿಭಟನೆಗೆಂದು ರಾಮ್‌ಜಾಸ್ ಕಾಲೇಜಿಗೆ ಹೋಗಿದ್ದ ನನ್ನ ಒಂದಷ್ಟು ಸ್ನೇಹಿತರು ಏಟು ತಿಂದು ಬಂದಿದ್ದರು. ಅವರಿಗೆ ರೇಪ್ ಮಾಡುವ ಬೆದರಿಕೆ ಹಾಕಲಾಗಿತ್ತು. ಆಗ ನಾನು ಹಾಸ್ಟೆಲ್‌ನಲ್ಲಿದ್ದೆ. ರಾತ್ರಿ ಒಂಬತ್ತು ಗಂಟೆಯ ಸಮಯ. ನಾನು ಏನಾದರು ಮಾಡಬೇಕು ಅನ್ನಿಸಿತು. ಹಾಗೆ ಪ್ರತಿಭಟಿಸುವುದು ನನ್ನ ಹೊಣೆ ಅಂತ ಅನ್ನಿಸಿತು. ಮಾಡಿದೆ. ನಮಗೆ ಹಿಂಸೆಯಿಲ್ಲದ, ಮುಕ್ತ ಮತ್ತು ಸುರಕ್ಷಿತ ಕ್ಯಾಂಪಸ್‌ಗಳು ಬೇಕಿವೆ.

ಪ್ರಶ್ನೆ: ನೀವು ಹೀಗೆ ಟಾರ್ಗೆಟ್ ಆಗಬಲ್ಲಿರಿ ಅಂತ ಯಾವ ಕ್ಷಣದಲ್ಲಾದರು ಅನ್ನಿಸಿತ್ತಾ?

ಕೌರ್: 'ನನ್ನ ತಂದೆಯನ್ನು ಕೊಂದದ್ದು ಪಾಕಿಸ್ತಾನ ಅಲ್ಲ, ಯುದ್ಧ' ಅನ್ನೋ ಒಂದೇಒಂದು ಪ್ಲೇಕಾರ್ಡ್ ಹಿಡಿದು ನಾನು ನನ್ನ ಅನಿಸಿಕೆ ಹೊರಹಾಕಿಲ್ಲ, ಆ ಇಡೀ ವೀಡಿಯೋವನ್ನು ಸಂಪೂರ್ಣವಾಗಿ ನೋಡಿ ನಂತರ ತೀರ್ಮಾನಕ್ಕೆ ಬನ್ನಿ ಅನ್ನೋದಷ್ಟೆ ಜನರಲ್ಲಿ ನನ್ನ ಮನವಿ. ನಾನದನ್ನು ಮಾಡಬೇಕಿತ್ತು, ಮಾಡಿದ್ದೇನೆ.

ಪ್ರಶ್ನೆ: ಚರ್ಚೆ ಧ್ರುವೀಕರಣಗೊಳ್ಳುತ್ತಿರೋದನ್ನು ನೋಡಿದರೆ, ನೀವು ರಾಜಕೀಯ ದಾಳ ಆಗುತ್ತಿದ್ದೀರಿ ಅಂತ ಅನ್ನಿಸುತ್ತಾ? ನಿಮಗೇನಾದರು ರಾಜಕೀಯ ಸಂಪರ್ಕಗಳಿವೆಯಾ?

ಕೌರ್: ನನಗೆ ಈಗಿನ್ನು 20 ವರ್ಷ. ನನಗ್ಯಾವ ರಾಜಕೀಯ ಸಂಪರ್ಕಗಳಿರಲು ಸಾಧ್ಯ? ಒಂದುವೇಳೆ ರಾಜಕೀಯ ಸಂಪರ್ಕಗಳಿದ್ದರೂ, ಇನ್ನೂ ಐದು ವರ್ಷದವರೆಗೆ ನಾನು ಚುನಾವಣೆಗಳಿಗೆ ಸ್ಪರ್ಧಿಸುವಂತಿಲ್ಲ ಅಲ್ಲವೇ? ನನಗೆ ಅಂತಹ ಇಚ್ಛೆ ಇದೆಯಾ ಅನ್ನೋದೂ ಕೂಡಾ ಗೊತ್ತಿಲ್ಲ.

ಪ್ರಶ್ನೆ: ಪೋಸ್ಟ್ ಹಾಕಿದ್ದು ಹುತಾತ್ಮ ಯೋಧನ ಮಗಳು ಅನ್ನೋದೂ ಚರ್ಚೆಯ ಭಾಗವಾಗುತ್ತಿದೆ?

ಕೌರ್: ನಮ್ಮ ಪ್ರಸ್ತುತ ಎಬಿವಿಪಿ ವಿರುದ್ಧ ಅಭಿಯಾನದ ಪೋಸ್ಟ್‌ನಲ್ಲಿ ನನ್ನ ತಂದೆ ಯಾರೆಂಬುದನ್ನು ನಾನು ಉಲ್ಲೇಖಿಸಿಯೇ ಇಲ್ಲ. ನನ್ನ ತಂದೆ ಬಗ್ಗೆ ವಿವರಿಸಿದ್ದ ವೀಡಿಯೋ ಒಂದು ವರ್ಷದಷ್ಟು ಹಳೆಯದು. ಅದಕ್ಕೂ ಈಗಿನ ಪರಿಸ್ಥಿತಿಗೂ ಯಾವ ಸಂಬಂಧವೂ ಇಲ್ಲ. ಯಾರೋ ಮೂರನೇ ವ್ಯಕ್ತಿಗಳು ನಾನು ಯಾರ ಮಗಳು ಅನ್ನೋದನ್ನು ಕೆದಕಿ, ಅದನ್ನು ಚರ್ಚೆಯ ಭಾಗವಾಗಿಸಿದರೆ, ನಾನೇನು ಮಾಡಲು ಸಾಧ್ಯ. ನೀವೇ ನೋಡುತ್ತಿರುವಂತೆ ಅದರ ಪರಿಣಾಮವನ್ನು ನಾನು ಅನುಭವಿಸಬೇಕಿದೆ. ತನ್ನ ತಂದೆಯ ತ್ಯಾಗವನ್ನೂ ಆಕೆ ಮಾರಿಕೊಳ್ಳುತ್ತಿದ್ದಾಳೆ ಅಂತ ಜನ ನನ್ನ ಮೇಲೆ ಆರೋಪ ಮಾಡ್ತಿದ್ದಾರೆ. ಹೀಗೆ ಹೇಳಲು ಆ ಜನಕ್ಕೆ ಮನಸ್ಸಾದರೂ ಹೇಗೆ ಬರುತ್ತೆ?

ಪ್ರಶ್ನೆ: ನಿಮಗೆ ಅತ್ಯಾಚಾರದ ಬೆದರಿಕೆಗಳು ಬರುತ್ತಿವೆ. ಅವರು ಯಾರೆಂಬುದು ನಿಮಗೆ ಗೊತ್ತಾ? ಫೋನ್ ಕರೆ ಅಥವಾ ಸಾಮಾಜಿಕ ಜಾಲತಾಣಗಳ ಟ್ರೇಸ್ ಮೂಲ...


ಕೌರ್: ನನಗೆ ಕರೆಗಳು ಬಂದಿಲ್ಲ, ಆದರೆ ಸಾವಿರಾ... ಮೆಸೇಜ್ ಮತ್ತು ಕಮೆಂಟ್‌ಗಳು ಬಂದಿವೆ. ಅದ... ಒಬ್ಬನ ಹೆಸರು ರಾಹುಲ್ ಅಂತ. ಅತ್ಯಾಚಾರ ಬೆದ... ಹಾಕುವ ಕಮೆಂಟ್ ಮಾಡುವುದು ಕೂಡಾ ತಪ್ಪು, ಅತ್ಯಾ... ಮತ್ತು ಜೀವಬೆದರಿಕೆಗಳನ್ನು ಒಪ್ಪಲಾಗುವುದಿಲ್ಲ. ಇ... ತಮಾಷೆಯ ವಿಷಯಗಳಲ್ಲ.

ಪ್ರಶ್ನೆ: ಯಾರು ರಾಷ್ಟ್ರೀಯವಾದಿಗಳು, ಯಾ... ರಾಷ್ಟ್ರದ್ರೋಹಿಗಳು ಅನ್ನೋ ಚರ್ಚೆ ಕ್ಯಾಂಪಸ್‌ನಲ್ಲಿ ನಡೆದಿ...

ಕೌರ್: ಕ್ಯಾಂಪಸ್‌ಗಳಲ್ಲಿ ಚರ್ಚೆ ಮತ್ತು ಸಂವಾದಗಳು ತುಂಬಾ ರಚನಾತ್ಮಕವಾಗಿರಬೇಕು. ನಾನು ಒಬ್ಬ ವ್ಯಕ್ತಿ... ಅಭಿಪ್ರಾಯ ಅಥವಾ ಹೇಳಿಕೆಯನ್ನು ಒಪ್ಪದೇಹೋ... ಬಹುದು. ಹಾಗಂತ ನಾನು ಅವನ ಕೆನ್ನೆಗೆ ಬಾರಿ... ನೀನು ಹಾಗೆ ಹೇಳುವಂತಿಲ್ಲ ಅನ್ನಲಾಗುವುದಿಲ್ಲ, ಕ್ಯಾಂಪಸ್‌... ಗಳೆಂದರೆ ಕಾವ್ಯ ಮತ್ತು ಕಲೆ ಅರಳಬೇಕಾದ ತಾಣಗಳು... ವೈದ್ಯಕೀಯ, ವಿಜ್ಞಾನ, ಇತಿಹಾಸ, ಇಂಗ್ಲಿಷ್‌ಗಳನ್ನು ಕಲಿ... ಬೇಕಾದ ತಾಣಗಳು.

ಪ್ರಶ್ನೆ: ಕ್ಯಾಂಪಸ್‌ಗಳಲ್ಲಿ 'ಆಜಾದಿ' ಘೋಷಣೆಗಳ ಬ... ನಿಮ್ಮ ಅಭಿಪ್ರಾಯ?

ಕೌರ್: ನಾನೊಬ್ಬ ಶಾಂತಿ ಬಯಸುವ ಕಾರ್ಯಕರ್ತೆ... ಎಲ್ಲಿಯೇ ನಡೆಯಲಿ, ನಾನು ಹಿಂಸೆಯ ಪರ ನಿಲ್ಲುವವಳ... 17 ಅಥವಾ 18ರ ವಯಸ್ಸಿನ ನನ್ನ ಗೆಳತಿಯರು ಪೆಟ್ಟು ತಿಂದು ಬಂದದ್ದನ್ನು ನೋಡಿ ನಾನು ಆ ಪೋಸ್ಟ್ ಹಾಕಿ... ಹದಿನೇಳು ವರ್ಷದ ಗೆಳತಿಯೊಬ್ಬಳು ಆಕ್ರೋಶಭರಿತಳಾ... 'ಬನ್ನಿ, ನಾವು ನಿಮಗೆ ಆಜಾದಿ ಕೊಡಿಸ್ತೀವಿ' ಅಂದಳು... ನನಗೆ ಅದಕ್ಕಿಂತ ಪೋಸ್ಟ್ ಹಾಕುವುದೇ ಉತ್ತಮ ಅನ್ನಿಸಿತು... ನಾನು ಹಾಗೇ ಮಾಡಿದೆ.



# ...ಮಾಡಿರಯ್ ಯಾಗಗಳ! ತಿನ್ನಿರಯ್ ಭಕ್ಷ್ಯಗಳ



ಸಾವಿರಾರು ವರ್ಷಗಳಿಂದ ನಮ್ಮನ್ನು ತಿಕ್ಕಿ ಮುಕ್ಕಿ ...ಡುತ್ತಿರುವ ಮನುವಾದ ಎಂಬ ವ್ಯಾಧಿ ಕರ್ನಾಟಕದ ...ಗಾಯತರಿಗೂ ತಗುಲಿಕೊಂಡು ನರಳುತ್ತಿರುವುದು ...ಕ್ಕಲ್ಲ. ಹನ್ನೆರಡನೆಯ ಶತಮಾನದಲ್ಲಿ ಮನುವಾದಿಗಳ ...ರುದ್ಧ ಪ್ರಬಲ ಹೋರಾಟ ಮಾಡಿ ಕಟ್ಟಿದ ಸಂಸ್ಥೆ ...ಗಾಯತವಾಗಿತ್ತು, ಆದರೆ ಅವುಗಳ ಆಶಯವನ್ನು ಹಿಂದಿಕ್ಕಿ ...ತ್ತೆ ಮನುವಾದಕ್ಕೆ ತಗುಲಿಕೊಂಡು ಲಿಂಗಾಯತ ಚಳವಳಿ ...ಪೂರ್ಣ ನಶಿಸಿ ಹೋಗುತ್ತಿರುವುದು ದುರಂತದ ...ಗತಿಯಾಗಿದೆ.

ಬಳ್ಳಾರಿ ಜಿಲ್ಲೆಯ ಹೊಸಪೇಟೆ ತಾಲೂಕಿನ ...ಟ್ಟೂರೇಶ್ವರ ರಥೋತ್ಸವ ಸಂದರ್ಭದಲ್ಲಿ ರಥ ...ರುಳಿಬಿದ್ದದ್ದು ಎಲ್ಲರೂ ಅರಿತ ಸಂಗತಿಯಾಗಿದೆ. ಕಟ್ಟಿಗೆಯ ... ಉರುಳಿ ಬಿದ್ದದ್ದಕ್ಕೆ ಇರುವ ವಾಸ್ತವ ಕಾರಣಗಳೇ ...ರೆ ಎಂಬುದು ಎಲ್ಲರಿಗೂ ತಿಳಿದಿದೆ. ಆದರೆ ...ರೋಹಿತರು ಮಾತ್ರ ಇಲ್ಲದ ಕತೆಯನ್ನು ಹೆಣೆದು ...ಮ್ಮ ಗೋಪಾಳವನ್ನು ತುಂಬಿಕೊಳ್ಳಲು ಮತ್ತೊಂದು ...ಳವನ್ನು ಉರುಳಿಸಿ ಯಶಸ್ವಿಯೂ ಆಗಿದ್ದಾರೆ.

ಹಾಗೆ ನೋಡಿದರೆ ಕೊಟ್ಟೂರಿಯ ಸಂಗನಬಸವ ...ರು ಹಿಂದೆ ಅಹೋರಾತ್ರಿ ಜನತೆಯ ಮೌಢ್ಯತೆಯನ್ನು ...ಯಲು ತಮ್ಮ ಜೀವನ ಮುಡುಪಾಗಿ ಇಟ್ಟವರು. ...ನ್ನೆರಡನೆಯ ಶತಮಾನದ ಶರಣರ ಆಶಯಗಳಿಗೆ ತಮ್ಮ ...ುಕನ್ನು ಒಡ್ಡಿಕೊಂಡು ಸಮಾಜೋಮುಖಿ ಕಾರ್ಯಗಳಲ್ಲಿ ...ಮ್ಮನ್ನು ತೊಡಗಿಸಿಕೊಂಡವರು. ಇವನಾರವ ಇವನಾರವ ...ದೆ ಎಲ್ಲವೂ ಶಿವಮಯ ಚೈತನ್ಯವೆಂದು ಬಗೆದು ...ರ ನಮ್ಮವ ಎಂದು ತಬ್ಬಿಕೊಂಡು ಬಯಲಲ್ಲಿ ಬಯಲಾದವರು. ಅವರ ಬದುಕು ಹಾಗೂ ಬೋಧೆ ಎಂಥವರೂ ಅನುಕರಣೆ ಮಾಡುವಂಥದ್ದು.

ಆದರೆ ಅವರ ತರುವಾಯ ಅವರನ್ನು ಸ್ಥಾವರ ಮಾಡಿ ಗುಡಿಗೋಪುರ ಕಟ್ಟಿ ಕಲಶವನ್ನು ಇಟ್ಟು ವರ್ಷಕ್ಕೊಂದು ಸರತಿ ಅವರ ಹೆಸರಿನ ತೇರು ಎಳೆದು ಅವರ ಆಶಯಗಳಿಗೆ ಎಳ್ಳು ನೀರು ಬಿಟ್ಟದ್ದು ಸುಳ್ಳಲ್ಲ. ಸುಳ್ಳನ್ನು ಸತ್ಯವೆಂದು ಸಾರಲು ಗೋಬೆಲ್ಸ್ ನೀತಿಯನ್ನು ಅನುಸರಿಸುವ ಲಿಂಗಾಯತ ಪುರೋಹಿತರು ನಿಜ ಜಂಗಮವಾದ ಅವರನ್ನು ಸ್ಥಾವರ ಮಾಡಿ ನಿತ್ಯವೂ ಪೂಜಿಸುತ್ತಿದ್ದಾರೆ.

ಕೊಟ್ಟೂರೇಶ್ವರರನ್ನು ಸ್ಥಾವರ ಮಾಡಿದರೆ ಮಾತ್ರ ಹಲವರಿಗೆ ಪುಷ್ಕಳ ಭೋಜನ ದೊರಕುತ್ತದೆ. ಮಂತ್ರತಂತ್ರಗಳ ನೆವದಲ್ಲಿ ಹೋಮಹವನಗಳ ನೆಪದಲ್ಲಿ ಜಾತ್ರೆ ಕೇತ್ರೆಗಳ ಹೆಸರಲ್ಲಿ ಸಾಕಷ್ಟು ಜನರ ತುತ್ತಿನ ಚೀಲ ತುಂಬುತ್ತದೆ. ಈ ಸೂಕ್ಷ್ಮಗಳನ್ನು ಅರಿಯದ ಲಿಂಗಾಯತ ಸಮುದಾಯ ತಮ್ಮ ಜನಾಂಗದ ಜಂಗಮದ ಸಮುದಾಯದ ತಂತ್ರಗಳಿಗೆ ಬಲಿಯಾಗಿ ಬೌದ್ಧಿಕ ದಾರಿದ್ರ್ಯದಿಂದ ನರಳುತ್ತಿದ್ದಾರೆ.


ಲಿಂಗಾಯತರ ದಿಶಾಬೂಲ್ ಸ್ಥಿತಿಯನ್ನು ಮನಗಂಡ ಜಂಗಮಶಾಹಿ ರಥ ಉರುಳಿಬಿದ್ದ ಹಿನ್ನೆಲೆಯಲ್ಲಿ ಕೊಟ್ಟೂರೇಶ್ವರರಿಗೆ ಶಾಂತಿಹೋಮ ಮಾಡಿದರು. ನಮ್ಮ ಶರಣರ ವಚನವೊಂದರ ಪಾರಾಯಣಕ್ಕೆ ಶತ ರುದ್ರಯಾಗ ಸಮಬಾರದಯ್ಯಾ ಎಂದು ಶರಣರು ಯಜ್ಞಯಾಗಗಳ ವಿರುದ್ಧ ಸಮರ ಸಾರಿದವರು.


ಕಿಚ್ಚು ದೈವವೆಂದು ಹವಿಯನಿಕ್ಕುವ ಹಾರುವನ ಮನೆಯಲ್ಲಿ

ಕಿಚ್ಚೆದ್ದು ಸುಡುವಾಗ ಬಚ್ಚಲ ನೀರ<br>
ಬೀದಿಯ ಧೂಳ ಹೊಯ್ದು<br>
ಬೊಬ್ಬಿಟ್ಟೆಲ್ಲರ ಕರೆವರಯ್ಯಾ<br>
ವಂದನೆಯ ಮರೆತು ನಿಂದಿಸುತ್ತಿರುವರು<br>
ಕೂಡಲಸಂಗಮದೇವಾ

ಎಂಬ ವಚನದ ಮೂಲಕ ಪುರೋಹಿತನ ಮನಸ್ಸು ಎಂಥದ್ದು ಇದೆ ಎಂದು ಎಲ್ಲರಿಗೂ ಅರಿವಾಗುವಂತೆ ತಿಳಿಸಿಕೊಟ್ಟವರು. ಎನಯ್ಯಾ ವಿಪ್ರರು ನುಡಿದಂತೆ ನಡೆಯರು. ತಮಗೊಂದು ಬಟ್ಟೆ, ಶಾಸ್ತ್ರಕ್ಕೊಂದು ಬಟ್ಟೆ ಎಂದು ಅವರನ್ನು ಹಿಗ್ಗಾಮುಗ್ಗಾ ಛೇಡಿಸಿದವರು.

ಮನುಷ್ಯನ ಅಂಧಕಾರ ಹಾಗೂ ಅವೈಜ್ಞಾನಿಕ ಮನಸ್ಥಿತಿಗೆ ಮೂಲಕಾರಣ ಸಕಲ ವೇದ ಶಾಸ್ತ್ರವೆಂದು ಖಚಿತವಾಗಿ ಹೇಳಿದರು. ಇವುಗಳನ್ನು ಅವರು ನೇಣು ಎಂದು ಕರೆದರು. ಅಜ್ಞಾನವೆಂಬ ತೊಟ್ಟಿಲೊಳಗೆ ಜ್ಞಾನದ ಶಿಶು ಮಲಗಿದೆ. ಅದಕ್ಕೆ ಸಕಲ ವೇದಶಾಸ್ತ್ರದ ನೇಣು(ಉರುಲು) ಹಾಕಲಾಗಿದೆ. ಭ್ರಾಂತಿ ಎಂಬ ತಾಯಿ ಜೋಗುಳ ಹಾಡುತ್ತಿದ್ದಾಳೆ. ತೊಟ್ಟಿಲ (ಅಜ್ಞಾನದ) ಮುರಿದು, ಜೋಗುಳವ ನಿಂದಲ್ಲದೆ ಗುಹೇಶ್ವರ (ಸತ್ಯ) ಕಾಣಲು ಸಾಧ್ಯವಿಲ್ಲವೆಂದು ಅಂದೆ ಬರೆದಿದ್ದಾರೆ.





ಶರಣರ ಆಶಯಗಳನ್ನು ಹಿಂದಿಕ್ಕಿದ ಇಂದಿನ ಜಂಗಮಶಾಹಿ ವರ್ಗ ಕೊಟ್ಟೂರೇಶ್ವರ ರಥ ಉರುಳಿ ಬಿದ್ದಿದ್ದಕ್ಕೆ ಇರುವ ವಾಸ್ತವ ಕಾರಣಗಳನ್ನು ಮರೆಮಾಚಿ ಫೆಬ್ರವರಿ 27ರಂದು ಶಾಂತಿಹೋಮ ಮಾಡಿದರು. ಉಜ್ಜಯಿನಿ ಜಗದ್ಗುರುಗಳ ಅಪ್ಪಣೆಯಂತೆ 10 ಕ್ಕೂ ಹೆಚ್ಚು ವಟುಗಳು ಸೇರಿ ಇದನ್ನು ಸಾಂಗೋಪಾಂಗವಾಗಿ ನೆರವೇರಿಸಿದರಂತೆ. ರುದ್ರ ಹೋಮದ ಮಂತ್ರ ಪಠಣದಿಂದ ಆರಂಭವಾದ ಯಾಗ ಹೋಮಕುಂಡಕ್ಕೆ ಅಗ್ನಿಸ್ಪರ್ಶ ಮಾಡುವ ಮೂಲಕ ಮಂಗಳಗೊಂಡಿತು ಎಂದು ಮಾಧ್ಯಮಗಳಲ್ಲಿ ಬಣ್ಣಿಸಲಾಗಿದೆ.

ಬಹುಶಃ ಇಂಥ ಅಂಧಾನುಕರಣೆಗಳನ್ನು ಕಂಡ ನಮ್ಮ ನಡುವಿನ ಅಪರೂಪದ ಕವಿ ಪ್ರಜ್ಞಾವಂತ ಬರಹಗಾರ ಕುವೆಂಪು.

*ಮಾಡಿರಯ್ ಯಾಗಗಳ! ತಿನ್ನಿರಯ್ ಭಕ್ಷ್ಯಗಳ!*<br>
*ಭೋಜನವೆ ಯೋಜನೆಯ ಮುಖ್ಯ ಅಂಗ*<br>
*ಮಂಕು ಮಂದಿಗೆ ಮೌಢ್ಯ ಮದ್ಯವನು ಕುಡಿಸಿರಯ್*<br>
*ಸುಳ್ಳು ಭಯವನು ಬಿತ್ತಿ ಚೆನ್ನಾಗಿ ದುಡಿಸಿರಯ್*<br>
*ಕತ್ತೆಗಳಿರುವುದೇಕೆ ? ನಮ್ಮ ಮಡಿ ಹೊರುವುದಕ್ಕೆ :*

*..........................................................*

*ಬಡವರ ಹಸಿವೆಗೆ ಮೌಢ್ಯವ ಕೊಟ್ಟು*<br>
*ಸುಖಸಂಪತ್ತನೆ ಕೊಂಡು......*<br>
*ಮೃಷ್ಟಾನ್ನವನೇ ಉಂಡು....*<br>
*ಪಡೆಯಿರಿ ಅಪ್ಪಗ್ರಹಯೋಗದ ಸಿದ್ಧಿ*<br>
*ನಿಮಗಿದ್ದರೆ ಬುದ್ಧಿ!....*

■ ವಿಶ್ವಾರಾಧ್ಯ ಸತ್ಯಂಪೇಟೆ


# ...ರೋಣ: ಜಿ.ಎಸ್.ಪಾಟೀಲರಿಗೆ ಎಚ್.ಕೆ.ಪಾಟೀಲರ ಅಡ್ಡಗಾಲು





ಗದಗ ಜಿಲ್ಲೆಯಲ್ಲಿ ಉಸ್ತುವಾರಿ ಮಂತ್ರಿ ಎಚ್.ಕೆ. ...ೀಲರ ಏಕಸ್ವಾಮ್ಯ ಕಾಂಗ್ರೆಸ್‌ಗೆ ಮುಳುವಾಗುವ ಸೂಚನೆ ...ಿಕ್ಕಿದೆ. ಜಿಲ್ಲೆಯಲ್ಲಿ ಅವರಿಗೆ ಸಮಾನಾಂತರವಾಗಿ ಯಾರೂ ...ಯಬಾರದು ಅನ್ನೋದು ಅವರ ಒನ್ ಲೈನ್ ಅಜೆಂಡಾ. ...ಾಗಿ ಕಾಂಗ್ರೆಸ್ ಪಕ್ಷದಲ್ಲಿ ಹಲವು ನಾಯಕರು ...ಕೆ.ಪಾಟೀಲರ ಕಾಕದೃಷ್ಟಿಗೆ ಬಲಿಯಾಗಿ ಸರ್ವನಾಶವಾಗಿ ...ಿಗಿದ್ದಾರೆ. ಹುಲಕೋಟಿ ಹುಲಿ ಎಂದೇ ಖ್ಯಾತರಾಗಿದ್ದ ...ಿನ ದಶಕದಲ್ಲಿ ಮುಖ್ಯಮಂತ್ರಿ ಸ್ಥಾನದಿಂದ ...ಚಿತರಾಗಿದ್ದ ಕೆ.ಎಚ್.ಪಾಟೀಲರ ಮಗನಾಗಿ ...ಕೆ.ಪಾಟೀಲರು ತಂದೆಯ ನಾಮಬಲದಲ್ಲಿ ಇವತ್ತು ...ರಾಜಕೀಯಕ್ಕೆ ಬಂದು ತಲುಪಿದ್ದಾರೆ. ಇದೀಗ ತಮ್ಮದೇ ಕುಲಬಾಂಧವ ರೋಣದ ಶಾಸಕ ಜಿ.ಎಸ್.ಪಾಟೀಲರನ್ನು ರಾಜಕೀಯವಾಗಿ ಮುಗಿಸಲು ಸಜ್ಜಾದಂತಿದೆ. ನಿಜ ಹೇಳಬೇಕೆಂದರೆ ಜಿ.ಎಸ್.ಪಾಟೀಲರ ಪ್ರಾಬಲ್ಯ ತಗ್ಗಿಸಲು ಎಚ್.ಕೆ.ಪಾಟೀಲರು ಹಿಂದಿನಿಂದಲೂ ಪ್ರಯತ್ನಿಸಿಕೊಂಡೇ ಬಂದಿದ್ದಾರೆ. ಆದರೆ ಮುಂಬರುವ ಚುನಾವಣೆಯಲ್ಲಿ ವಯಸ್ಸಿನ ನೆಪವೊಡ್ಡಿ ಜಿ.ಎಸ್.ಪಾಟೀಲರಿಗೆ ರೋಣಾ ಕಾಂಗ್ರೆಸ್ ಟಿಕೇಟ್ ತಪ್ಪಿಸಲು ಅವರು ತಯಾರಿ ನಡೆಸಿದ್ದಾರೆಂಬ ಗಾಳಿಸುದ್ದಿ ಸದ್ಯ ಗದಗ ಜಿಲ್ಲೆಯಲ್ಲಿ ಭಾರೀ ಸದ್ದು ಮಾಡುತ್ತಿದೆ.




ಜಿ.ಎಸ್.ಪಾಟೀಲರು ಮೊದಲ ಬಾರಿ 1989ರಲ್ಲಿ ಶಾಸಕರಾಗಿ ಆಯ್ಕೆಯಾದಾಗ ಈ ಎಚ್.ಕೆ.ಪಾಟೀಲರಿನ್ನೂ ಪ್ರಭಾವಿ ರಾಜಕಾರಣಕ್ಕೆ ಪಾದಾರ್ಪಣೆ ಮಾಡಿರಲೇ ಇಲ್ಲ. ಆಗಿನ್ನೂ ಅವರ ತಂದೆ ಕೆ.ಎಚ್.ಪಾಟೀಲರದ್ದೆ ಜಮಾನ ಚಲಾವಣೆಯಲ್ಲಿತ್ತು. ಜಿ.ಎಸ್.ಪಾಟೀಲರು 1994ರಲ್ಲಿ ಸೋತರೂ 1999ರ ಎಲೆಕ್ಷನ್‌ನಲ್ಲಿ ಗೆದ್ದು ಸಚಿವರಾಗಲು ತಯಾರಿ ನಡೆಸಿಕೊಳ್ಳುವ ವೇಳೆಗಾಗಲೆ ಎಚ್.ಕೆ.ಪಾಟೀಲರು ಅಡ್ಡಗಾಲು ಹಾಕುವ ಮಟ್ಟಕ್ಕೆ ಬೆಳೆದು ನಿಂತಿದ್ದರು. ಆಗಿನ ಮುಖ್ಯಮಂತ್ರಿ, ಎಸ್.ಎಂ.ಕೃಷ್ಣರಿಗೂ ಜಿ.ಎಸ್.ಪಾಟೀಲರನ್ನು ಸಚಿವರನ್ನಾಗಿಸಲು ಇಷ್ಟವಿತ್ತು. ಆದರೆ ಎಚ್.ಕೆ.ಪಾಟೀಲರು ತಮ್ಮ ಕುಟುಂಬ ಪ್ರಭಾವ ಬಳಸಿ ಮಂತ್ರಿಗಿರಿ ದಕ್ಕಿಸಿಕೊಂಡಿದ್ದರಿಂದ ಜಿ.ಎಸ್.ಪಾಟೀಲರು ಗಾದಿ ಕಳೆದುಕೊಂಡಿದ್ದರು. ಆದರೂ ಎಸ್.ಎಂ.ಕೃಷ್ಣರು ಜಿ.ಎಸ್.ಪಾಟೀಲರನ್ನು ಕರ್ನಾಟಕ ರಾಜ್ಯ ಉಗ್ರಾಣ ನಿಗಮದ ಅಧ್ಯಕ್ಷರನ್ನಾಗಿ ನೇಮಕ ಮಾಡಿದ್ದರು. 2004 ಮತ್ತು 2008ರಲ್ಲಿ ಸತತ 2 ಬಾರಿ ಕಳಕಪ್ಪ ಬಂಡಿಯ ವಿರುದ್ಧ ಸೋಲನುಭವಿಸಿದ ಜಿ.ಎಸ್.ಪಾಟೀಲರಿಗೆ ಮೂರನೇ ಬಾರಿ ಶಾಸಕನಾಗುವ ಅದೃಷ್ಟ ತಂದದ್ದು 2013ರ ಚುನಾವಣೆ. ಮೂರು ಬಾರಿ ಶಾಸಕರಾದ ಹಿರಿತನದ ಜೊತೆಗೆ ರಾಜಕೀಯ ಅನುಭವವೂ ಇದ್ದ ಜಿ.ಎಸ್.ಪಾಟೀಲರು ಮಂತ್ರಿಯಾಗುವ ಉಮೇದಿನಲ್ಲಿದ್ದರು. ಒನ್ಸ್ ಎಗೇನ್ ಎಚ್.ಕೆ.ಪಾಟೀಲರು ಗೂಟದ ಕಾರನ್ನು ಹೈಜಾಕ್ ಮಾಡಿ ಜಿ.ಎಸ್.ಪಾಟೀಲರ ಆಸೆಗೆ ತಣ್ಣೀರೆರಚಿದರು. ಸರಕಾರ ರಚನೆಯಾಗಿ ಮೂರೂವರೆ ವರ್ಷಗಳಾದ ನಂತರ ಮೊನ್ನೆ ಜಿ.ಎಸ್.ಪಾಟೀಲರಿಗೆ ನಿಗಮ ಮಂಡಳಿ ಅಧ್ಯಕ್ಷಗಿರಿ ದೊರಕಿದೆಯಾದರೂ 40 ವರ್ಷಗಳ ಕಾಂಗ್ರೆಸ್ ನಿಷ್ಠೆ ಎಚ್.ಕೆ.ಪಾಟೀಲರ ಸ್ವಾರ್ಥ ರಾಜಕೀಯಕ್ಕೆ ಬಲಿಯಾಗಿ ಹೋಗಿರುವುದು ವಿಪರ್ಯಾಸದ ಸಂಗತಿ.




2018ರ ಚುನಾವಣೆ ವೇಳೆಗೆ ಜಿ.ಎಸ್.ಪಾಟೀಲರಿಗೆ ವಯಸ್ಸಾಗಿದೆ ಎಂಬ ಕಾರಣವನ್ನಿಟ್ಟುಕೊಂಡು ಅವರಿಗೆ ಟಿಕೆಟ್ ತಪ್ಪಿಸುವ ಯತ್ನದಲ್ಲಿ ಎಚ್.ಕೆ.ಪಾಟೀಲರು ಬ್ಯುಸಿಯಾಗಿದ್ದಾರೆ ಎಂಬ ಮಾತು ಕೇಳಿಬರುತ್ತಿದೆ. ಆದರೆ ಜಿ.ಎಸ್.ಪಾಟೀಲರಿಗೆ ಟಿಕೆಟ್ ತಪ್ಪಿಸುವುದು ಅಷ್ಟು ಸುಲಭದ ಸಂಗತಿಯಲ್ಲ. ಯಾಕೆಂದರೆ




ಜಿ.ಎಸ್.ಪಾಟೀಲರಿಗೂ ದಿಲ್ಲಿ ಮಟ್ಟದ ಲಿಂಕುಗಳಿವೆ. ಹಾಗೊಮ್ಮೆ ವಯಸ್ಸಿನ ಕಾರಣಕ್ಕೆ ಹೈಕಮಾಂಡ ಟಿಕೆಟ್ ನಿರಾಕರಿಸಿದ್ದೆ ಆದಲ್ಲಿ ತಮ್ಮ ಮಗ ಮಿಥುನ್ ಪಾಟೀಲ್‌ಗೆ ಟಿಕೆಟ್ ಗಿಟ್ಟಿಸಿಕೊಂಡು, ಗೆಲ್ಲಿಸಿಕೊಳ್ಳುವ ತಾಕತ್ತು ಜಿ.ಎಸ್.ಪಾಟೀಲರಿಗೆ ಇದೆ. ಮಿಥುನ್ ಕೂಡಾ ಈಗಾಗಲೇ ಕ್ಷೇತ್ರದಲ್ಲಿ ಅಭ್ಯರ್ಥಿಯಂತೆ ಬಿಂಬಿತಗೊಂಡಿದ್ದಾರೆ. ಒಟ್ಟಿನಲ್ಲಿ ಎಚ್.ಕೆ.ಪಾಟೀಲರು, ಜಿ.ಎಸ್.ಪಾಟೀಲರ ವಿರುದ್ಧ ರಾಜಕೀಯ ಷಡ್ಯಂತ್ರ ನಡೆಸುತ್ತಿರುವುದು ಮಾತ್ರ ಸತ್ಯ.

■ ಸ. ಶರಣಪ್ಪ ಪಾಟೀಲ

# ರಾಜಕುಮಾರಿ ಮತ್ತು ಕನ್ನಡಿ



ಒಂದಾನೊಂದು ರಾಜ್ಯದ ರಾಜ-ರಾಣಿಯರಿಗೆ ಒಬ್ಬಳು ರಾಜಕುಮಾರಿ ಇದ್ದಳು. ಅವಳು ಎಷ್ಟೊಂದು ಸುಂದರವಾಗಿದ್ದಳೆಂದರೆ ದೇವಲೋಕದ ಅಪ್ಸರೆಯೆಲ್ಲರೂ ಅವಳನ್ನು ಕಂಡು ಅಸೂಯೆ ಪಡುತ್ತಿದ್ದರು. ರಾಜಕುಮಾರಿ ಮದುವೆಯ ವಯಸ್ಸಿಗೆ ಬಂದಮೇಲೆ ರಾಜ-ರಾಣಿಯರಿಬ್ಬರು ಅವಳ ನಿಶ್ಚಿತಾರ್ಥ ಮಾಡಿ, ಮದುವೆ ಮಾಡಬೇಕೆಂದು ನಿರ್ಧರಿಸಿದರು. ಅದಕ್ಕಾಗಿ ಅನೇಕ ರಾಜ್ಯ, ದೇಶವಿದೇಶದಿಂದ ರಾಜಕುಮಾರರನ್ನು ಅವಳ ಸ್ವಯಂವರಕ್ಕೆ ಆಹ್ವಾನಿಸಲಾಯಿತು. ಸ್ವಯಂವರದಲ್ಲಿ ನಡೆಯುವ ಎಲ್ಲಾ ಪಂದ್ಯ ಮತ್ತು ಪರೀಕ್ಷೆಗಳಲ್ಲಿ ಗೆದ್ದವನು ಮಾತ್ರ ರಾಜಕುಮಾರಿಯನ್ನು ವರಿಸಬಹುದು ಎಂದು ಘೋಷಿಸಲಾಯಿತು. ಆದ್ದರಿಂದ ಆಕೆಯ ಸ್ವಯಂವರಕ್ಕೆ ಬಂದ ರಾಜಕುಮಾರರೆಲ್ಲರೂ ಘಟಾನುಘಟಿಗಳು ಆಗಿದ್ದರು. ಯಾವುದೇ ವಿದ್ಯೆಯಲ್ಲಿ ಅವರನ್ನು ಮೀರಿಸುವವರಿರಲಿಲ್ಲ. ಸಕಲಕಲಾ ಪಾರಂಗತರಾಗಿದ್ದರು. ರಾಜಕುಮಾರಿಯ ಸ್ವಯಂವರದಲ್ಲಿ ಬಂದ ಎಲ್ಲಾ ರಾಜಕುಮಾರರು ತಮ್ಮ ತಮ್ಮ ವಿದ್ಯೆಯನ್ನು ಪ್ರದರ್ಶಿಸಿದರು. ಎಲ್ಲಾ ಪಂದ್ಯ ಮತ್ತು ಪರೀಕ್ಷೆಗಳಲ್ಲಿ ಸಫಲರಾದವರು ಕೇವಲ ನಾಲ್ಕು ರಾಜಕುಮಾರರು ಮಾತ್ರ. ಅವರಲ್ಲಿ ಒಬ್ಬನನ್ನು ಮಾತ್ರ ಆಯ್ಕೆ ಮಾಡಬೇಕಾಗಿತ್ತು, ಆಯ್ಕೆ ಮಾಡುವುದಕ್ಕೆ ಒಂದು ಪರೀಕ್ಷೆ ಮಾತ್ರ ಉಳಿದಿತ್ತು, ಅದು ಏನಪ್ಪ ಅಂದ್ರೆ ಪರೀಕ್ಷೆಯಲ್ಲಿ ನಾಲ್ಕು ಜನ ರಾಜಕುಮಾರರು ಕನ್ನಡಿಯಲ್ಲಿ ಕಾಣುವ ರಾಜಕುಮಾರಿಯ ಪ್ರತಿಬಿಂಬವನ್ನು ಚಿತ್ರಿಸಬೇಕಾಗಿತ್ತು, ಯಾರು ರಾಜಕುಮಾರಿಯ ಪ್ರತಿಬಿಂಬವನ್ನು ಸ್ವಲ್ಪವೂ ಬದಲಾವಣೆಯಿಲ್ಲದೆ, ಯಥಾವತ್ತಾಗಿ ಚಿತ್ರಿಸುತ್ತಾರೊ ಅವರು ಆಕೆಯನ್ನು ವರಿಸಬಹುದು ಎಂದು ತಿಳಿಸಲಾಯಿತು.

ಎಲ್ಲಾ ನಾಲ್ಕು ರಾಜಕುಮಾರರು ಕನ್ನಡಿಯಲ್ಲಿ ರಾಜಕುಮಾರಿಯ ಪ್ರತಿಬಿಂಬವನ್ನು ನೋಡುತ್ತಾ ತೈಲವರ್ಣದಲ್ಲಿ ಆಕೆಯ ಭಾವಚಿತ್ರವನ್ನು ಚಿತ್ರಿಸಿದರು. ಯಾವ ಚಿತ್ರ ಯಥಾವತ್ತಾಗಿ ಮೂಡಿದೆ ಎಂದು ತೀರ್ಪು ಕೊಡುವುದಕ್ಕೋಸ್ಕರ ರಾಜ ದೇಶವಿದೇಶದಿಂದ ಪ್ರಸಿದ್ಧ ಚಿತ್ರಕಾರರು ಮತ್ತು ಪಂಡಿತರನ್ನು ಕರೆಸಿದ. ಚಿತ್ರಿಸಲ್ಪಟ್ಟ ಎಲ್ಲಾ ನಾಲ್ಕು ಭಾವಚಿತ್ರಗಳನ್ನು ನೋಡುತ್ತಿದ್ದಂತೆ ಅವರೆಲ್ಲರೂ ಅತೀವವಾಗಿ ಆಶ್ಚರ್ಯಗೊಂಡರು. ರಾಜಕುಮಾರಿಯ ಭಾವಚಿತ್ರವನ್ನು ಚಿತ್ರಿಸುವುದರ ಬದಲಾಗಿ ನಾಲ್ಕು ಜನ ರಾಜಕುಮಾರರು ಯಾವುದೋ ಸಾಮಾನ್ಯ ಹೆಂಗಸರ ಚಿತ್ರವನ್ನು ಚಿತ್ರಿಸಿದ್ದರು. ಇದ್ಯಾಕೆ ಯಾರದೋ ಚಿತ್ರವನ್ನು ಚಿತ್ರಿಸಿದ್ದೀರಿ ಎಂದು ಕೇಳಿದಾಗ ರಾಜಕುಮಾರರೆಲ್ಲರೂ ಕನ್ನಡಿಯಲ್ಲಿ ರಾಜಕುಮಾರಿಯ ಪ್ರತಿಬಿಂಬ ಹೇಗೆ ಕಾಣಿಸಿಕೊಂಡಿತೊ ಹಾಗೆ ಯಥಾವತ್ತಾಗಿ ಚಿತ್ರಿಸಿದ್ದೇವೆ ಎಂದು ಹೇಳಿದರು. ತಾವು ಹೇಳುವುದೆಲ್ಲಾ ಸತ್ಯವೆಂದು ಪ್ರಮಾಣ ಮಾಡಿದರು. ರಾಜನಿಗೆ ಇದು ವಿಚಿತ್ರವಾಗಿ ಮತ್ತು ಒಗಟಾಗಿ ಕಂಡಿತು. ಚಿತ್ರದಲ್ಲಿ ಕಾಣುವ ಆ ಹೆಂಗಸರೆಲ್ಲಾ ಯಾರು? ಯಾತಕ್ಕಾಗಿ ಆ ಹೆಂಗಸರನ್ನು ಈ ರಾಜಕುಮಾರರು ಚಿತ್ರಿಸಿದ್ದಾರೆ? ಕನ್ನಡಿಯಲ್ಲಿ ಏನಾದರು ದೋಷವಿರಬಹುದೆ? ಚಿತ್ರದಲ್ಲಿ ಇರುವ ಹೆಂಗಸರೆಲ್ಲಾ ಭೂತಗಳೆ? ಅಥವಾ ರಾಜಕುಮಾರರು ಸರಿಯಾಗಿ ನೋಡದೆ ಚಿತ್ರಿಸಿದ್ದಾರೆಯೆ? ಎಂಬ ಪ್ರಶ್ನೆಗಳು ಅವನನ್ನು ಕಾಡಿದವು. ರಾಜಕುಮಾರಿಯ ಮುಂದಿನ ಭವಿಷ್ಯವೇನು? ಎಂದು ರಾಜ ಕಳವಳಗೊಂಡ.

*******

ರಾಜನಿಗೆ ಕನ್ನಡಿಯ ಪ್ರತಿಬಿಂಬದ ರಹಸ್ಯದ ಬಗ್ಗೆ ತಿಳಿಯಲು ಅನೇಕ ಕಲಾಕಾರರಿಗೆ, ಪಂಡಿತರಿಗೆ, ಜ್ಯೋತಿಷಿಗಳಿಗೆ ಮತ್ತು ಪುರಾಣಕಾರರಿಗೆ ನೇಮಿಸಿದ. ಆದರೆ ಅವರಿಂದ ಏನೂ ಉಪಯೋಗವಾಗಲಿಲ್ಲ, ವಾಸ್ತು ಪಂಡಿತ ಸೂಚಿಸಿದ ಪರಿಹಾರವು ಕೂಡ ವಿಫಲವಾಯಿತು. ರಾಜನಿಗೆ ಏನು ಮಾಡಬೇಕೆಂದು ತಿಳಿಯಲಿಲ್ಲ, ಕೊನೆಗೆ ಹತಾಶನಾಗಿ ಕನ್ನಡಿಯ ರಹಸ್ಯವನ್ನು ಬಿಡಿಸಿದವರಿಗೆ ಹತ್ತು ಸಾವಿರ ಚಿನ್ನದ ನಾಣ್ಯಗಳನ್ನು ಬಹುಮಾನವಾಗಿ ಕೊಡುತ್ತೇನೆ ಎಂದು ರಾಜ ಘೋಷಿಸಿದ. ರಹಸ್ಯವನ್ನು ಭೇದಿಸಲು ಬಂದವರೆಲ್ಲಾ ಸೋತುಹೋದರು. ಕೊನೆಗೆ ಒಬ್ಬ ಸಾಮಾನ್ಯ ತಿರುಕ ಬಂದ. ಬಂದವನೇ ಈ ಸಮಸ್ಯೆಯ ಮೂಲ ಕಾರಣವನ್ನು ಕ್ಷಣಮಾತ್ರದಲ್ಲಿ ಕಂಡು ಹಿಡಿಯುತ್ತೇನೆ ಎಂದು ಹೇಳಿದ. ರಾಜನಿಗೆ ಮೊದಮೊದಲು ಇವನ ಬಗ್ಗೆ ನಂಬಿಕೆ ಬರಲಿಲ್ಲ. ಆದರೆ ಅಸಹಾಯಕ ಪರಿಸ್ಥಿತಿಯಲ್ಲಿ ಇದ್ದಿದ್ದರಿಂದ ತಿರುಕನಿಗೆ ಒಂದು ಅವಕಾಶ ಕೊಡಲು ಒಪ್ಪಿಕೊಂಡ.

ತಿರುಕ ಮೊದಲನೇ ಚಿತ್ರಪಟದ ಬಳಿ ಹೋದ. ಚಿತ್ರವನ್ನು ನೋಡಿದ ನಂತರ ರಾಜನಿಗೆ ಹೇಳಿದ, "ಈ ಚಿತ್ರದಲ್ಲಿ ಕಾಣುವ ಹೆಂಗಸು ಚಿತ್ರ ಬಿಡಿಸಿದವನ ರಾಜ್ಯಕ್ಕೆ ಸೇರಿದವಳು. ಇವಳು ಸತದೃಷ್ಟೆ. ಇವಳು ಗರ್ಭಿಣಿಯಾಗಿದ್ದಾಗ ಯಾರೋ ಒಬ್ಬ ಗಂಡಸಿನ ಜೊತೆಗೆ ಒಂದುಕ್ಷಣ ಮಾತನಾಡಿದಳು ಎಂದು ಆಕೆಯ ಗಂಡ ರಾಜನ ಬಳಿ ಹೋಗಿ ಆಕೆಯ ವಿರುದ್ಧ ದೂರನ್ನು ಹೇಳಿದ. ರಾಜ ಕೂಡ ಮೂರ್ಖ ಆಗಿದ್ದ, ಆತನ ದೂರನ್ನು ಸ್ವೀಕರಿಸಿ ಗರ್ಭಿಣಿ ಹೆಂಗಸನ್ನು ಗಡಿ-ಪಾರು ಮಾಡಿಸಿದ. ಖುದ್ದು ಈ ಚಿತ್ರವನ್ನು ಬಿಡಿಸಿರುವ ರಾಜಕುಮಾರನೆ ಅವಳನ್ನು ಕಾಡಿಗೆ ಬಿಟ್ಟುಬಂದ. ಅಷ್ಟೇ ಅಲ್ಲ, ಅವಳ ಹತ್ತಿರ ಈ ರಾಜಕುಮಾರ ಅಸಭ್ಯವಾಗಿ ವರ್ತಿಸಿದ್ದ. ಕೆಲವು ದಿನಗಳ ನಂತರ ಅವಳು ಕಾಡಿನ ಪ್ರಾಣಿಗಳಿಗೆ ಆಹಾರವಾದಳು."



ತಿರುಕ ಎರಡನೇ ಪಟದ ಬಳಿ ಹೋದ. "ಈ ಚಿತ್ರಪಟದಲ್ಲಿರುವ ಹೆಂಗಸು ಇಲ್ಲಿರುವ ಎರಡನೇ ರಾಜಕುಮಾರನ ದೇಶಕ್ಕೆ ಸೇರಿದವಳು. ಬಹಳ ಒಳ್ಳೆಯ ಹೆಂಗಸು. ಸಾಹಸಿಯಾಗಿದ್ದಳು. ಯುದ್ಧ ಕಲೆಗಳಲ್ಲಿ ಕರಗತಳಾಗಿದ್ದಳು. ಆದರೆ ಜನರ ದೃಷ್ಟಿಯಲ್ಲಿ ಇವಳು ವ್ಯಭಿಚಾರಿ. ಹೆಂಗಸಿನ ಯಾವ ಗುಣಗಳು ಇವಳಲ್ಲಿ ಇಲ್ಲ; ಸದಾಕಾಲ ಗಂಡಸರ ಜೊತೆಗೆ ಇರುತ್ತಾಳೆ ಎಂದು ಅನೇಕ ಗಂಡಸರು ವದಂತಿ ಹಬ್ಬಿಸಿದರು. ಅವರಲ್ಲಿ ಕೆಲವರು ರಾಜನ ಹತ್ತಿರ ಹೋಗಿ ಇವಳ ಬಗ್ಗೆ ಇಲ್ಲ-ಸಲ್ಲದ್ದನ್ನು ಹೇಳಿದರು. ಇಂಥ ಹೆಂಗಸರಿಂದ ದೇಶದ ಸಂಸ್ಕೃತಿ ಹಾಳಾಗುತ್ತದೆ ಎಂದು ರಾಜ ಹಿಂದೆ-ಮುಂದೆ ನೋಡದೆ ಅವಳನ್ನು ಗಲ್ಲಿಗೇರಿಸಿದ. ಅವಳ ಗಲ್ಲು ಶಿಕ್ಷೆ ಈ ರಾಜಕುಮಾರನ ಸಾರಥ್ಯದಲ್ಲಿ ನಡೆಯಿತು. ಗಲ್ಲುಗೇರುವ ಮೊದಲು ಈ ಹೆಂಗಸು 'ನನ್ನಿಂದ ಯಾರಿಗೂ ತೊಂದರೆಯಾಗಿಲ್ಲ, ನನ್ನನ್ನು ಬಿಟ್ಟುಬಿಡಿ' ಎಂದು ರಾಜಕುಮಾರನ ಮುಂದೆ ಪರಿಪರಿಯಾಗಿ ಬೇಡಿಕೊಂಡಳು. ಆದರೆ ಈ ರಾಜಕುಮಾರ ಅವಳ ಮಾತಿಗೆ ಬೆಲೆ ಕೊಡದೆ ಬಹಳ ನಿರ್ದಯೆಯಿಂದ ನಡೆದುಕೊಂಡ."

ಮೂರನೇ ಚಿತ್ರಪಟವನ್ನು ನೋಡಿ ತಿರುಕ ಸಪ್ಪೆ ಮುಖ ಮಾಡಿಕೊಂಡು ಹೇಳಿದ, "ಈಕೆ ಇಲ್ಲಿರುವ ಮೂರನೇ ರಾಜಕುಮಾರನ ದೇಶದವಳು. ಈಕೆ ಮತ್ತೊಬ್ಬ ಅಸಹಾಯಕ ಹೆಂಗಸು. ಇವಳು ಗಂಡ ಹೇಳಿದ್ದನ್ನು ಕೇಳಿಕೊಂಡು ಇದ್ದಳು. ಯಾವ ಗಂಡಸಿನ ಮುಖ ನೋಡಿದವಳಲ್ಲ, ಬಹಳ ಸಂಪ್ರದಾಯಸ್ಥೆ. ತಾನಾಯಿತು, ತನ್ನ ಕೆಲಸವಾಯಿತು ಎಂದು ಅಂದುಕೊಂಡಿದ್ದವಳು. ಆದರೆ ಗಂಡು ಮಗುಗೆ ಅವಳು ಜನ್ಮ ಕೊಡಲಿಲ್ಲ ಎಂದು ಅವಳನ್ನು ರಾತ್ರೋರಾತ್ರಿ ಈಕೆಯ ಗಂಡ ಮತ್ತು ಅತ್ತೆ-ಮಾವಂದಿರು ಮನೆಯಿಂದ ಹೊರಗಟ್ಟಿದರು. ರಾಜನ ಬಳಿ ಹೋಗಿ ನ್ಯಾಯ ಕೇಳಿದಳು. ಆದರೆ ರಾಜ ಇವೆಲ್ಲಾ ಕ್ಷುಲ್ಲಕ ವಿಷಯವೆಂದು ಅವಳನ್ನು ಅರಮನೆಯಿಂದ ಹೊರಗಟ್ಟಿದ. ಇವಳ ವಿಷಯ... ತಿಳಿದುಕೊಂಡ ಈ ಮೂರನೇ ರಾಜಕುಮಾರ ಅವಳ ಅಸಹಾಯಕತೆಯ... ದುರುಪಯೋಗ ಮಾಡಿಕೊಂಡ. ಅವಳನ್ನು ತನ್ನ ಸುಖ-ಭೋಗಗಳ... ಬಲವಂತವಾಗಿ ಬಳಸಿಕೊಂಡ. ಅವಳು ಈಗ ಕಂಗೆಟ್ಟು ನಿಮ್ಮ ರಾಜ್ಯ... ಭಿಕ್ಷೆ ಬೇಡಿ ಜೀವನ ಸಾಗಿಸುತ್ತಿದ್ದಾಳೆ. ಅವಳ ಜೀವ ಈಗಲೋ-ಆಗಲೋ ಎನ್ನುತ್ತಿದೆ."

ನಾಲ್ಕನೇ ಚಿತ್ರಪಟವನ್ನು ನೋಡುತ್ತಾ ತಿರುಕ ದುಃಖವನ್ನು ತಡೆಯಲಾ... ಅತ್ತುಬಿಟ್ಟ. ನಂತರ ನಿಧಾನವಾಗಿ ಅವಳ ಕಥೆಯನ್ನು ಹೇಳಲು ಶು... ಮಾಡಿದ. "ಇವಳ ಜೀವನವೇ ದುರಂತ ಜೀವನ. ಈಕೆ ಒಂದು ... ಸಂಜೆಯ ಹೊತ್ತಿನಲ್ಲಿ ಬಾವಿಯಿಂದ ನೀರು ತರಲೆಂದು ಹೋದಾಗ ನಾಲ್ಕನೇ ರಾಜಕುಮಾರ ಮತ್ತು ಮಂತ್ರಿಯ ಮಗ ಇವಳ ಮೇಲೆ ... ಮಾನಭಂಗ ಮಾಡಿದರು. ನ್ಯಾಯ ಬೇಕು ಎಂದು ರಾಜನ ಬಳಿ ... ಕುಟುಂಬದವರು ಹೋದಾಗ ರಾಜ ಅವರ ದೂರನ್ನು ತೆಗೆದುಕೊಳ್ಳ... ಬದಲಾಗಿ ಅವರನ್ನು ಬೆದರಿಸಿ ಕಳುಹಿಸಿದ. ಸಮಾಜದಲ್ಲಿ ತನ್ನ ಮರ್ಯಾ... ಹೋಯಿತೆಂದು ಈ ಹದಿಹರೆಯದ ಹೆಂಗಸು ಒಂದು ದಿನ ನೇ... ಶರಣಾದಳು. ಆಕೆಯ ತಂದೆ ತಾಯಿ ಊರು ಬಿಟ್ಟು ಹೋದರು."

ಇವೆಲ್ಲವನ್ನು ಕೇಳಿ ರಾಜನಿಗೆ ಬಹಳ ದುಃಖವಾಯಿ... ಆದರೆ ಇನ್ನು ಒಂದು ಪ್ರಶ್ನೆ ಅವನ ಮನಸ್ಸ... ಕೊರೆಯತೊಡಗಿತು. ತಿರುಕನ ಕಡೆಗೆ ತಿರುಗಿ ಕೇಳ... "ಈ ನಾಲ್ಕು ಜನ ಹೆಂಗಸರಿಗು, ನನ್ನ ಮಗಳಿ... ಏನು ಸಂಬಂಧ? ಅವರು ಯಾಕೆ ರಾಜಕುಮಾರಿ... ಕನ್ನಡಿಯಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ? ಇದಕ್ಕೆ ... ಕಾರಣ?" ಇದಕ್ಕೆ ತಿರುಕ ಹೇಳಿದ, "ಪ್ರಭು, ... ನಾಲ್ಕು ಜನ ಹೆಂಗಸರು ನಿಮ್ಮ ರಾಜಕುಮಾರಿಯನ್ನು ಭೇಟಿಯಾ... ತಮಗೆ ಆದ ಅನ್ಯಾಯವನ್ನು ತೋಡಿಕೊಂಡಿದ್ದರು. ಇವರ ಕಥೆಯ... ಕೇಳಿ ನಿಮ್ಮ ರಾಜಕುಮಾರಿಯ ಹೃದಯ ಕರಗಿಹೋಯಿತು. ಅವ... ಸಹಾಯ ಮಾಡಿರೆಂದು ರಾಜಕುಮಾರಿ ನಿಮ್ಮನ್ನು ಅನೇಕ ಬಾ... ಕೇಳಿಕೊಂಡಳು. ಆದರೆ ನಿಮ್ಮ ಕೆಲಸದ ನಡುವೆ ರಾಜಕುಮಾರಿ... ಕೋರಿಕೆಯನ್ನು ನೀವು ನಿರ್ಲಕ್ಷ್ಯ ಮಾಡಿದಿರಿ. ಇದರಿಂದ ನಿಮ್ಮ ರಾಜಕುಮಾರಿ... ಬಹಳ ಬೇಸರವಾಯಿತು. ಈ ನಾಲ್ಕು ಹೆಂಗಸರ ಜೀವನ ಅವಳ... ಕಾಡತೊಡಗಿತು. ಪ್ರತಿದಿನ, ಪ್ರತಿಕ್ಷಣ ಅವರು ನಿಮ್ಮ ರಾಜಕುಮಾರಿ... ಮನಸ್ಸನ್ನು ಆವರಿಸಿಕೊಂಡರು. ರಾಜಕುಮಾರಿಗೆ ಎಷ್ಟು ಬೇಸ... ದುಃಖವಾಯಿತೆಂದರೆ ಆಕೆ ಈ ನಾಲ್ಕು ಜನ ಹೆಂಗಸರು ತಾನೆ ಎಂ... ಅವಳಿಗೆ ಅನಿಸತೊಡಗಿತು. ಕನ್ನಡಿಯಲ್ಲಿ ಕಂಡ ಹೆಂಗಸರ ಮುಖಗಳು ನಿ... ರಾಜಕುಮಾರಿಯ ಮನಸ್ಥಿತಿಯ ಪ್ರತಿಬಿಂಬ. ನೀವು ಮತ್ತು ರಾಣಿಯವ... ರಾಜಕುಮಾರಿಯ ಮನಸ್ಥಿತಿಯನ್ನು ಅರ್ಥಮಾಡಿಕೊಳ್ಳಲು ಪುರುಸೊ... ತೋರಿಸಲಿಲ್ಲ, ನಿಮಗೆ ರಾಜ್ಯಭಾರವೆ ದೊಡ್ಡದೆನಿಸಿತು. ಮಗಳ ಮದು... ಮಾಡಿ ಮುಗಿಸಿದರೆ ಜವಾಬ್ದಾರಿಯಿಂದ ಕಳಚಿಕೊಂಡಂತೆ ಎಂದು ನಂಬಿದ್ದಿ... ಆದರೆ ನಿಮಗೆ ಗೊತ್ತಿಲ್ಲದ ಹಾಗೆ ನಿಮ್ಮ ರಾಜಕುಮಾರಿ ನಿಮ್ಮಿಂದ ಮಾನಸಿಕ... ಬಹಳ ದೂರ ಹೋಗಿದ್ದಾಳೆ. ಮತ್ತೆಂದು ಅವಳನ್ನು ನೀವು ಪಡೆಯಲಾರಿ... ಅವಳ ಮದುವೆಯ ವಿಷಯದ ಬಗ್ಗೆ ನೀವು ತಲೆ ಕೆಡಿಸಿಕೊಳ್ಳೊದು ಬ... ಅದಿನ್ನು ಸಾಧ್ಯವಿಲ್ಲದ ಮಾತು."

*******

ಮಾನಸಿಕವಾಗಿ ಜರ್ಝರಿತಳಾಗಿ ರಾಜಕುಮಾರಿ ಬಹಳ ದಿನ ಹಾಸಿ... ಹಿಡಿದಳು. ಆದರೆ ಹೀಗೆ ಹಾಸಿಗೆ ಹಿಡಿದರೆ ಏನೂ ಪ್ರಯೋಜನವಿಲ್ಲವೆ... ಒಂದು ದಿನ ರಾಜಕುಮಾರಿಗೆ ಅನಿಸಿತು. ಆ ನಾಲ್ಕು ಜನ ಹೆಂಗಸರ... ಇನ್ನು ನೂರಾರು ಹೆಂಗಸರು ಬಳಲುತ್ತಿದ್ದಾರೆ. ಅವರಿಗೋಸ್ಕರ ತಾ... ಬದುಕಬೇಕೆಂದು ನಿರ್ಧರಿಸಿ ರಾಜಕುಮಾರಿ ರಾಜ್ಯದ ಚುಕ್ಕಾಣಿಯನ್ನು ಹಿಡಿದ...

■ ಡಾ.ವಿಜಯಕುಮಾರ ಎಂ.ಬೋರಟ...

# ಬಡವರ ಬದುಕುಗಳ ಮೇಲೆ....

07 ◀◀

ಒಂದು ವ್ಯಂಗ್ಯ ಬೇರೆ ಇರಲಿಕ್ಕಿಲ್ಲ.

ಕೆಲ ದಿನಗಳ ಹಿಂದೆ ಅಸುನೀಗಿದ ವ್ಯಕ್ತಿಯ ಶವವನ್ನು ಸಂಸ್ಕಾರಕ್ಕೆಂದು ಇಲ್ಲಿಯವರೆಗೆ ಉಪಯೋಗಿಸುತ್ತಿದ್ದ ಸ್ಮಶಾನದ ಬಳಿ ಕೊಂಡೊಯ್ದಾಗ ಅದಕ್ಕೆ ಕ್ರಿಕೆಟ್ ಸ್ಟೇಡಿಯಂನ ಬೇಲಿ ಆವರಿಸಿತ್ತು. ಹಾಗಾಗಿ ಬಹುಜನ ಕಾರ್ಮಿಕ ಸಂಘದ ಹೆಚ್.ಕೆ. ಮೊಣ್ಣಪ್ಪ ಮತ್ತು ಇತರರು ತಮ್ಮ ಸ್ಮಶಾನದ ಜಾಗವನ್ನು ಕೆ.ಎಸ್.ಸಿ.ಎ. ಅತಿಕ್ರಮಣ ಮಾಡಿಕೊಂಡಿದೆ, ಕೂಡಲೇ ಬೇಲಿ ತೆರವುಗೊಳಿಸಿ ಶವಸಂಸ್ಕಾರಕ್ಕೆ ಅವಕಾಶ ಕೊಡಬೇಕೆಂಬ ಬೇಡಿಕೆ ಮುಂದಿಟ್ಟಿದ್ದರು. ಅದು ಭಾರೀ ಸುದ್ದಿ ಮಾಡಿತ್ತು. ಶವವನ್ನು ಮುಂದಿಟ್ಟುಕೊಂಡೇ 3 ದಿನ ಪ್ರತಿಭಟನೆ ಮಾಡಿದ್ದರು. ಜಿಲ್ಲಾಡಳಿತ ಆ ನಿವಾಸಿಗರಿಗೆ ಸ್ಮಶಾನಕ್ಕಾಗಿ ಅರ್ಧ ಕಿ.ಮೀ. ದೂರದಲ್ಲಿ ಮತ್ತೊಂದು ಸ್ಥಳ ಕಾಯ್ದಿರಿಸಲಾಗಿದೆ ಎಂದು ಹೇಳಿತ್ತು.

ಆದರೆ ಗ್ರಾಮಸ್ಥರು ಪಟ್ಟು ಸಡಿಸಲಿಲ್ಲ. ಇತ್ತ ಜಿಲ್ಲಾಡಳಿತವೂ ಬಿಗುಮಾನ ಬಿಟ್ಟುಕೊಡಲಿಲ್ಲ. ಕೊನೆಗೆ ರೊಚ್ಚಿಗೆದ್ದ ಜನ ಬಲವಂತವಾಗಿ ಆ ಪ್ರದೇಶದಲ್ಲಿ ಶವಸಂಸ್ಕಾರ ಮಾಡಿದ್ದರು. ಅದಕ್ಕೆ ಪ್ರತಿಯಾಗಿ ಕೆ.ಎಸ್.ಸಿ.ಎ. ಸಂಸ್ಥೆ ತಮ್ಮ ಜಾಗದಲ್ಲಿ ಬಲವಂತವಾಗಿ ಶವಸಂಸ್ಕಾರ ಮಾಡಲಾಗಿದೆ, ಬೇಲಿ ಕಿತ್ತುಹಾಕಿದ್ದಾರೆ ಎಂದು ದೂರಿದೆ.

ಜನರ ಸಮಸ್ಯೆ ಬಗೆಹರಿಸುವುದಕ್ಕಿಂತಲೂ ಕ್ರಿಕೆಟ್ ಸಂಸ್ಥೆಗೆ ಜಾಗ ನೀಡುವುದು ಹೇಗೆಂಬ ಚಿಂತೆ ಜಿಲ್ಲಾಡಳಿತ... ಬಿಜೆಪಿ ಶಾಸಕರುಗಳಾದ ಕೆ.ಜಿ.ಬೋಪಯ್ಯ ಹಾಗೂ ಅಪ್ಪಚ್ಚು ರಂಜನ್‌ರವರಿಗೆ ಕಾಡುತ್ತಿದೆ. ಜಿಲ್ಲಾಧಿಕಾರಿಗಳು, ಅಲ್ಲಿಯ ನಿವಾಸಿಗರಿಗೆ ನೀಡಿರುವ ಜಮೀನಿನಲ್ಲಿಯೇ ಶವಸಂಸ್ಕಾರ ಮಾಡಬೇಕು, ಸರಕಾರದ ನೀತಿಯಂತೆ ಸಾವಿರ ಜನಸಂಖ್ಯೆಗೆ ಅರ್ಧ ಎಕರೆ ಜಾಗ ಎಂದಿದೆ, ಆದರೆ ಇಲ್ಲಿರುವ ಕೇವಲ 253 ಕುಟುಂಬಗಳಿಗೆ ಅಗತ್ಯಕ್ಕಿಂತಲೂ ಹೆಚ್ಚು ಜಾಗವನ್ನು ಕಾಯ್ದಿರಿಸಲಾಗಿದೆ ಎಂದು ಹೇಳುತ್ತಾರೆ.

ಶಾಸಕ ಕೆ.ಜಿ. ಬೋಪಯ್ಯ ಹಿಂದೂ ಸಂಸ್ಕೃತಿ...

▶▶ 15







# ಯುದ್ಧಭೂಮಿಯಾಗಿರುವ ವಿಶ್ವವಿದ್ಯಾಲಯಗಳು

EPW ಸಂಪಾದಕೀಯ


Economic and Political Weekly
February 25, 2017. Vol 52, No. 8

■ ಅನು: ಶಿವಸುಂದರ್


...ರತೀಯ ವಿಶ್ವವಿದ್ಯಾಲಯದ ...ರ್ಥಿಗಳು ಪ್ರಜಾಪ್ರಭುತ್ವವೆಂದರೆ ...ನ್ನಮತವೆಂಬುದನ್ನು ನಮಗೆ ನೆನಪಿಸುತ್ತಿದ್ದಾರೆ.

...ಜಾತಂತ್ರದ ಮುಂಚೂಣಿ ನಾಯಕರು ನಮ್ಮ ...ದ್ಯಾಲಯಗಳ ಯುದ್ಧಭೂಮಿಯಲ್ಲಿದ್ದಾರೆ. ...ಲಯಗಳೆಂದರೆ ಯುವ ಮತ್ತು ಕುತೂಹಲದಿಂದ ... ಮನಸ್ಸುಗಳು ವಿವಿಧ ಮತ್ತು ವಿಭಿನ್ನ ...ಗಳನ್ನು ಅನ್ವೇಷಿಸುವ, ಅಭಿವ್ಯಕ್ತಿಸುವ ಮತ್ತು ವಾಗ್ವಾದ ...ವ ವೈಚಾರಿಕ ಸಂಘರ್ಷದ ತಾಣವೆಂದು ...ಸುವಂಥವರು, ಆಡಳಿತಾರೂಢರ ಅಧಿಕೃತ ...ಗಳಿಗೆ ಪೂರಕವಾಗಿರದ ಎಲ್ಲಾ ಬಗೆಯ ...ಗಳನ್ನು "ದೇಶದ್ರೋಹ"ವೆಂದು ಪರಿಗಣಿಸಿ ಅದನ್ನು ... ಪ್ರಯತ್ನಿಸುತ್ತಿರುವ ಶಕ್ತಿಗಳ ವಿರುದ್ಧ ...ತ್ತಿದ್ದಾರೆ. ಅಂಥಾ ಒಂದು ಸಂಘರ್ಷ ಇತ್ತೀಚೆಗೆ ... ವಿಶ್ವವಿದ್ಯಾಲಯದ ರಾಮ್‌ಜಾಸ್ ಕಾಲೇಜಿನಲ್ಲಿ ...ು. ಅಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘ (ಆರೆಸ್ಸೆಸ್) ... ಭಾರತೀಯ ಜನತಾ ಪಕ್ಷ(ಬಿಜೆಪಿ)ದಿಂದ ...ತವಾದ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ ...) ಸದಸ್ಯರು "ಪ್ರತಿರೋಧದ ಸಂಸ್ಕೃತಿ" ಎಂಬ ...ದ ಕುರಿತು ನಡೆಯಬೇಕಿದ್ದ ಒಂದು ...ಕಿರಣವನ್ನು ಬಹಿರಂಗವಾಗಿ ಬೆದರಿಕೆಯನ್ನು ಒಡ್ಡಿ ...ಲಭೆ ಮಾಡಿ ತಡೆಗಟ್ಟಿದರು. ಈ ವಿಚಾರಸಂಕಿರಣಕ್ಕೆ ...ಯು ವಿಶ್ವವಿದ್ಯಾಲಯದಲ್ಲಿ ಡಾಕ್ಟೋರಲ್ ...ಯಾಗಿರುವ ಉಮರ್ ಖಲೀದ್ ಅವರನ್ನು ...ಾರರನ್ನಾಗಿ ಆಹ್ವಾನಿಸಲಾಗಿತ್ತು. ಮರುದಿನ ಎಬಿವಿಪಿ ... ಈ ಗಲಭೆಯ ವಿರುದ್ಧ ಪ್ರತಿಭಟನೆ ಮಾಡಲು ... ವಿದ್ಯಾರ್ಥಿ ಮತ್ತು ಅಧ್ಯಾಪಕರ ಮೇಲೆ ಎಬಿವಿಪಿ ...ಗಳು ಕಲ್ಲು ಮತ್ತು ಬಾಟಲ್‌ಗಳಿಂದ ಹಲ್ಲೆ ...ರು. ಘಟನೆಯನ್ನು ವರದಿ ಮಾಡಲುಹೋಗಿದ್ದ ...ರೂ ದಾಳಿಗೊಳಗಾದರು. ಆದರೆ ಭಾರಿ ...ಲ್ಲಿ ಹಾಜರಿದ್ದ ದೆಹಲಿ ಪೊಲೀಸರು ಮಾತ್ರ ... ತಡೆಯಲು ಯಾವ ಕ್ರಮಗಳನ್ನು ಕೈಗೊಳ್ಳದೆ ...ಗಿ ನಿಂತಿದ್ದರು. ಅಷ್ಟು ಮಾತ್ರವಲ್ಲ, ಎಬಿವಿಪಿ ... ಮೇಲೆ ದೂರು ದಾಖಲಿಸಿಕೊಳ್ಳಲು ...ದರು. ಅಲ್ಲದೆ ದೂರು ದಾಖಲಿಸಿಕೊಳ್ಳಬೇಕೆಂದು ... ನಗರ್ ಪೊಲೀಸ್ ಠಾಣೆಯೆದುರು ಆಗ್ರಹಿಸುತ್ತಿದ್ದ ... ಮೇಲೆ ಲಾಠಿ ಚಾರ್ಜ್ ಕೂಡಾ ನಡೆಸಿದರು.

ಈ ಘಟನೆಯು ಬಿಡಿಯಾಗಿ ನಡೆದದ್ದೇನಲ್ಲ. ಅದು ತನ್ನ ಸೈದ್ಧಾಂತಿಕ ಅಜೆಂಡಾಗಳನ್ನು ಒಪ್ಪಿಕೊಳ್ಳದ ಎಲ್ಲಾ ಧ್ವನಿಗಳನ್ನು ಸುಮ್ಮನಾಗಿಸಲು ಆಳುವ ಸರ್ಕಾರವು ಅನುಸರಿಸುತ್ತಿರುವ ಸ್ಪಷ್ಟ ಮಾದರಿಯ ಭಾಗವೇ ಆಗಿದೆ. ಅಲ್ಲದೆ, ವಾಗ್ವಾದ, ಚರ್ಚೆ ಅಥವಾ ತರ್ಕಗಳ ಬದಲಿಗೆ ಬೆದರಿಕೆ, ಕಿರುಕುಳ ಮತ್ತು ಹಿಂಸೆ ಹಾಗೂ ಪ್ರಭುತ್ವದ ಯಂತ್ರಾಂಗಗಳ ಸಹಕಾರದ ಮೂಲಕ ಉನ್ನತ ವಿದ್ಯಾ ಸಂಸ್ಥೆಗಳನ್ನು ವಶಕ್ಕೆ ಪಡೆಯುವ ಮತ್ತು ಬೌದ್ಧಿಕ ಸ್ಥಳಾವಕಾಶಗಳನ್ನು ಬುಡಮೇಲು ಮಾಡುವ ಸಂಘಪರಿವಾರದ ದೀರ್ಘಕಾಲೀನ ವ್ಯೂಹತಂತ್ರದ ಭಾಗವೂ ಆಗಿದೆ. ಈ ವರ್ಷದ ಮೊದಲಲ್ಲಿ ಜೆಎನ್‌ಯು ವಿಶ್ವವಿದ್ಯಾಲಯದ "ಕಾಂಪಾರೇಟೀವ್ ಗವರ್ನೆನ್ಸ್ ಮತ್ತು ಪೊಲಿಟಿಕಲ್ ಥಿಯರಿ" ವಿಭಾಗದ ಪ್ರೊಫೆಸರ್ ಆಗಿರುವ ನಿವೇದಿತಾ ಮೆನನ್ ಅವರು ಕ್ಯಾಂಪಸ್ಸಿನಲ್ಲಿ ಮಾಡಿದ ಭಾಷಣವೊಂದರಲ್ಲಿ ಕಾಶ್ಮೀರದ ಬಗ್ಗೆ ಮಾಡಲೆನ್ನಲಾದ ಟಿಪ್ಪಣಿಯ ವಿರುದ್ಧ ಜೋಧಪುರದ ಜೈ ನಾರಾಯಣ ವ್ಯಾಸ್ ವಿಶ್ವವಿದ್ಯಾಲಯ(ಜೆಎನ್‌ವಿಎಸ್)ದ ರಿಜಿಸ್ಟ್ರಾರ್ ಅವರು ಪೊಲೀಸ್ ದೂರೊಂದನ್ನು ದಾಖಲಿಸಿದಾಗಲೂ ಇದೇ ಬಗೆಯ ಪರಿಸ್ಥಿತಿ ಉದ್ಭವವಾಗಿತ್ತು. ಎಂದಿನಂತೆ ಮೆನನ್ ಅವರ ಭಾಷಣವು "ದೇಶದ್ರೋಹ"ವೆಂದು ಎಬಿವಿಪಿ ಸದಸ್ಯರು ಗಲಭೆ ಎಬ್ಬಿಸಿದರು. ಇದು ಅಂತಿಮವಾಗಿ ಆ ಕಾರ್ಯಕ್ರಮದ ಪ್ರಮುಖ ಸಂಘಟಕರಾಗಿದ್ದ ಜೆಎನ್‌ವಿಎಸ್ ವಿಶ್ವವಿದ್ಯಾಲಯದ ಇಂಗ್ಲಿಷ್ ವಿಭಾಗದ ಅಸಿಸ್ಟೆಂಟ್ ಪ್ರೊಫೆಸರ್ ಆದ ರಾಜಶ್ರೀ ರಣಾವತ್ ಅವರ ಅಮಾನತ್ತಿಗೂ ಕಾರಣವಾಯಿತು. 2016ರ ಸೆಪ್ಟೆಂಬರ್‌ನಲ್ಲಿ ಮಹಾಶ್ವೇತಾ ದೇವಿಯವರ 'ದ್ರೌಪದಿ' ಕಥೆಯ ರಂಗ ರೂಪಾಂತರವನ್ನು ಪ್ರದರ್ಶಿಸಿದ್ದಕ್ಕಾಗಿ ಹರಿಯಾಣದ ಕೇಂದ್ರ ವಿಶ್ವವಿದ್ಯಾಲಯದ ಅಧ್ಯಾಪಕರಾದ ಸ್ನೇಹ್‌ಸತ ಮನಯ್ ಮತ್ತು ಮನೋಜ್ ಕುಮಾರ್ ಅವರನ್ನು ಅಮಾನತ್ತುಗೊಳಿಸಿ ಕಠಿಣ ಶಿಕ್ಷೆಗೆ ಗುರಿಪಡಿಸಬೇಕೆಂಬ ಹುಯಿಲನ್ನು ಎಬ್ಬಿಸಲಾಗಿತ್ತು. ಈ ಕೃತಿಯನ್ನು ಬರೆದ ಮಹಾಶ್ವೇತ ದೇವಿಯವರು ಇತ್ತೀಚೆಗೆ ನಿಧನರಾದ ಬಳಿಕ ಅವರ ಜೀವಮಾನ ಸಾಧನೆಗೆ ದೇಶಾದ್ಯಂತ ಗೌರವ ಸಮರ್ಪಣೆಗಳು ನಡೆಯುತ್ತಿದೆ. ಆದರೆ ಎಬಿವಿಪಿಯು ಮಾತ್ರ 'ದ್ರೌಪದಿ'ಯು ಸೈನ್ಯವನ್ನು ಕೀಳಾಗಿ ತೋರಿಸುತ್ತದಾದ್ದರಿಂದ ಅದು "ದೇಶದ್ರೋಹೀ ನಾಟಕ"ವೆಂದು ಘೋಷಿಸಿದೆ.




ಕಳೆದೊಂದು ವರ್ಷದಿಂದ ರಣರಂಗವಾಗಿ ಪರಿವರ್ತನೆಗೊಂಡಿರುವ ಹೈದರಾಬಾದ್ ವಿಶ್ವವಿದ್ಯಾಲಯ ಮತ್ತು ಜೆಎನ್‌ಯುಗಳ ಸಾಲಿಗೆ ಈ ಎಲ್ಲಾ ವಿಶ್ವವಿದ್ಯಾಲಯಗಳು ಸೇರಿಕೊಂಡಿವೆ. ಜೆಎನ್‌ಯುನಲ್ಲಿ 2016ರ ಫೆಬ್ರವರಿ 9ರಂದು ವಿದ್ಯಾರ್ಥಿಗಳ ತಂಡವೊಂದು ಅಫ್ಜಲ್ ಗುರುವನ್ನು ನೇಣಿಗೇರಿಸಿದ ಸಂದರ್ಭದ ನೆನಪಿನಲ್ಲಿ ಆಚರಿಸಿದ ವಾರ್ಷಿಕ ಸ್ಮರಣಾಚರಣೆಯು ದೇಶಾದ್ಯಂತ "ದೇಶಭಕ್ತ" ಮತ್ತು "ದೇಶದ್ರೋಹಿ"ಗಳೆಂಬ ಪರಸ್ಪರ ವಿರೋಧಿ ಗುಂಪುಗಳನ್ನು ಹುಟ್ಟುಹಾಕಿತು. ಆದರೆ ಅದಕ್ಕೆ ಮೊದಲೇ, 2015ರಲ್ಲಿ ದೆಹಲಿ ವಿಶ್ವವಿದ್ಯಾಲಯದ ಕಿಶೋರಿ ಮಲ್ ಕಾಲೇಜಿನಲ್ಲಿ ಆಯೋಜಿಸಿದ್ದ "ಮುಜಫ್ಫರ್‌ನಗರ್ ಬಾಕಿ ಹೈ" ಎಂಬ ಚಿತ್ರ ಪ್ರದರ್ಶನ ನಡೆಯುತ್ತಿದ್ದ ಸ್ಥಳದಲ್ಲಿ ಎಬಿವಿಪಿ ಗೂಂಡಾಗಳು ಗಲಭೆ ಎಬ್ಬಿಸಿದ್ದಲ್ಲದೆ ಚಿತ್ರವು ಪ್ರದರ್ಶನವಾಗದಂತೆ ತಡೆದಿದ್ದರು. ಇಂದಿನಂತೆ ಆಗಲೂ ಸಹ ಅವರು ಚಿತ್ರವನ್ನು "ಧರ್ಮ ವಿರೋಧಿ" ಎಂದು ಕರೆದಿದ್ದಲ್ಲದೆ ಚಿತ್ರದ ಆಶಯಕ್ಕೂ ಆಕ್ಷೇಪ ವ್ಯಕ್ತಪಡಿಸಿದ್ದರು.



ಈ ಎಲ್ಲಾ ಘಟನೆಗಳು ಬಿಡಿಬಿಡಿಯಾಗಿಯೂ ಮತ್ತು ಇಡಿಯಾಗಿಯೂ ಒಂದನ್ನಂತೂ ಹೇಳುತ್ತಿವೆ. ನರೇಂದ್ರ ಮೋದಿ ಸರ್ಕಾರವು 2014ರಲ್ಲಿ ಅಧಿಕಾರಕ್ಕೆ ಬಂದ ಮರುಗಳಿಗೆಯಿಂದ ಉನ್ನತ ವಿದ್ಯಾಸಂಸ್ಥೆಗಳನ್ನು ಒಂದೇ ವಿಚಾರಧಾರೆಯ ಪ್ರಭಾವದಡಿಗೆ ತರಲು ಏನನ್ನು ಬೇಕಾದರೂ ಮಾಡುತ್ತಿದೆ. ಈ ಗುರಿಯನ್ನು ಸಾಧಿಸಲು ಭಿನ್ನಭಿನ್ನ ಮಾರ್ಗಗಳನ್ನು ಅನುಸರಿಸಲಾಗಿದೆ. ಅದು ಸೆಂಟ್ರಲ್ ಬೋರ್ಡ್ ಆಫ್ ಫಿಲ್ಮ್ ಸರ್ಟಿಫಿಕೇಷನ್, ಪುಣೆಯ ಫಿಲ್ಮ್ ಅಂಡ್ ಟೆಲಿವಿಷನ್ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾ ಮತ್ತು ನವದೆಹಲಿಯ ಇಂಡಿಯನ್ ಕೌನ್ಸಿಲ್ ಆಫ್ ಹಿಸ್ಟಾರಿಕಲ್ ರಿಸರ್ಚ್‌ಗಳಂಥ ಸಂಸ್ಥೆಗಳಿಗೆ ಆರೆಸ್ಸೆಸ್‌ಗೆ ಆಪ್ತರಾಗಿರುವವರನ್ನು ಮುಖ್ಯಸ್ಥರನ್ನಾಗಿ ನೇಮಕ ಮಾಡುವುದಿರಬಹುದು ಅಥವಾ ಹೈದರಾಬಾದ್ ವಿಶ್ವವಿದ್ಯಾಲಯ ಮತ್ತು ಜೆಎನ್‌ಯು ವಿಶ್ವವಿದ್ಯಾಲಯಗಳಿಗೆ ಎಬಿವಿಪಿ ಮತ್ತು ಕೇಂದ್ರ ಸರ್ಕಾರಗಳ ಕಣ್ಸನ್ನೆಗೆ ತಕ್ಕಂತೆ ಕುಣಿಯುವ ಉಪಕುಲಪತಿಗಳನ್ನು ನೇಮಕ ಮಾಡುವುದಿರಬಹುದು. ಮಾರ್ಗವೇನೇ ಇದ್ದರೂ ಒಟ್ಟಿನಲ್ಲಿ ವಿಶ್ವವಿದ್ಯಾಲಯಗಳಲ್ಲಿ ಭಿನ್ನಮತ ಅಥವಾ ಪ್ರಶ್ನೆ ಮಾಡುವ ಧ್ವನಿಗಳಿಗೆ ವಿರುದ್ಧವಾಗಿರುವ ಪರಿಸರವನ್ನು ನಿರ್ಮಿಸಲೆಂದೇ ವಿಶ್ವವಿದ್ಯಾಲಯಗಳ ಮತ್ತು ಉನ್ನತ ವಿದ್ಯಾಸಂಸ್ಥೆಗಳ ಬೌದ್ಧಿಕ ಸ್ಥಾನಮಾನಗಳೊಂದಿಗೆ ರಾಜಿ ಮಾಡಿಕೊಳ್ಳಲಾಗಿದೆ. ಅಧ್ಯಾಪಕರು ಮತ್ತು ವಿದ್ಯಾರ್ಥಿಗಳು ಒಂದೋ ಅಧಿಕಾರಸ್ಥರೊಂದಿಗೆ ಸಹಕರಿಸಬೇಕು ಇಲ್ಲವೇ ಅಮಾನತ್ತನ್ನು ಎದುರಿಸಬೇಕು ಎಂಬಂಥ ವಾತಾವರಣವನ್ನು ಅನುದಿನವೂ ಸೃಷ್ಟಿಸಲಾಗುತ್ತಿದೆ. ಸರ್ಕಾರ ಮತ್ತು ಅದರ ಮಂತ್ರಿಗಳು ನಿರಂತರವಾಗಿ "ದೇಶದ್ರೋಹ"ದ ಮಾತುಗಳನ್ನು ಪದೇಪದೇ ಹೇಳುವ ಮೂಲಕ ಅವರ ವಿದ್ಯಾರ್ಥಿ ಘಟಕವು ವಿಶ್ವವಿದ್ಯಾಲಯಗಳಲ್ಲಿ ಮಾಡುವ ರಂಪಾಟಕ್ಕೆ ಮತ್ತು ತೋಳುಬಲದ ಬಳಕೆಗೆ ಮಾನ್ಯತೆಯನ್ನು ಒದಗಿಸಿದೆ. ಅವರು ನೀಡುತ್ತಿರುವ ಸಂದೇಶ ಸ್ಪಷ್ಟವಾಗಿದೆ: ಆಳುವ ಸರ್ಕಾರಕ್ಕೆ ವಿರುದ್ಧವಾಗಿರುವುದು "ದೇಶಕ್ಕೆ" ವಿರುದ್ಧವಾಗಿರುವುದಕ್ಕೆ ಸಮ. ಈ ಹಿಂಸೆಯ ಮತ್ತು ಬೆದರಿಕೆಯ ಸಂಸ್ಕೃತಿಯು ಸ್ವತಂತ್ರ ಚಿಂತನೆಗೂ ಮತ್ತು ಆಳುವ ಸರ್ಕಾರದ ಬಹುಸಂಖ್ಯಾತಪರ ಸಿದ್ಧಾಂತಕ್ಕೆ ವಿರುದ್ಧವಿರುವವರಲ್ಲೂ ಭೀತಿ ಹುಟ್ಟಿಸುತ್ತಿದೆ.

ಈ ಬೆದರಿಕೆಯ ತಂತ್ರದಲ್ಲಿ ಆರೆಸೆಸ್-ಬಿಜೆಪಿಗಳು ಪರಿಣಿತರೇ ಆಗಿದ್ದರೂ ಈ ತಂತ್ರ ಕೇವಲ ಅವರ ಸ್ವತ್ತಾಗಿಯೇನೂ ಉಳಿದಿಲ್ಲ. ಉದಾಹರಣೆಗೆ ಅವರ ವಿದ್ಯಾರ್ಥಿ ಘಟಕಗಳು ದೆಹಲಿ, ರಾಜಸ್ತಾನ, ಹರ್ಯಾಣ ಮತ್ತು ಆಂಧ್ರಪ್ರದೇಶಗಳಲ್ಲಿ ಕಿಡಿಗೇಡಿತನ ಮಾಡಿದರೆ ಅಲಿಘರ್ ಮುಸ್ಲಿಂ ವಿಶ್ವವಿದ್ಯಾಲಯದ ವಿದ್ಯಾರ್ಥಿ ಸಂಘಟನೆಯು ಇತ್ತೀಚೆಗೆ ತನ್ನ ಕ್ಯಾಂಪಸ್ಸಿನಲ್ಲಿ ನಡೆಯಬೇಕಿದ್ದ ವಿದ್ಯಾರ್ಥಿ ಕಾರ್ಯಕರ್ತರ ಸಭೆಯೊಂದನ್ನು ರದ್ದುಗೊಳಿಸಿದೆ. ಮಾತ್ರವಲ್ಲ ಫೇಸ್‌ಬುಕ್‌ನ ಪೋಸ್ಟ್ ಒಂದರಲ್ಲಿ ಜೆಎನ್‌ಯು ವಿದ್ಯಾರ್ಥಿನಿ ಕಾರ್ಯಕರ್ತೆಯಾದ ಶೆಹ್ಲಾ ರಷೀದ್ ಅವರು ಪ್ರವಾದಿ ಮೊಹಮದರನ್ನು ಅವಹೇಳನ ಮಾಡಿದ್ದಾರೆಂದು ಪೊಲೀಸ್ ದೂರನ್ನು ಸಹ ನೀಡಿದೆ. ವಿಶ್ವವಿದ್ಯಾಲಯದ ಆವರಣದಲ್ಲಿ ಹೆಚ್ಚುತ್ತಿರುವ ಈ ಬಗೆಯ ಘರ್ಷಣೆಗಳು ಮತ್ತು ಕುಗ್ಗುತ್ತಿರುವ ಅಭಿವ್ಯಕ್ತಿ ಸ್ವಾತಂತ್ರ್ಯಗಳು ಯಾವ ಸಂಕುಚಿತ ಮನೋಧರ್ಮಕ್ಕೆ ವ್ಯತಿರಿಕ್ತವಾದ ಆಶಯಗಳನ್ನು ವಿಶ್ವವಿದ್ಯಾಲಯಗಳು ಪ್ರತಿನಿಧಿಸುತ್ತವೋ ಅಂಥಾ ಸಂಕುಚಿತ ಮನೋಧರ್ಮವೇ ವಿಶ್ವವಿದ್ಯಾಲಯಗಳಲ್ಲಿ ಹೆಚ್ಚಾಗುತ್ತಿರುವ ವಿಷಾದ ಗಾಥೆಯನ್ನು ಹೇಳುತ್ತಿವೆ. ವಿಶ್ವವಿದ್ಯಾಲಯಗಳು ವಿಭಿನ್ನ ಚಿಂತನೆಗಳನ್ನು ಚರ್ಚಿಸುವ, ಹೊಸ ಚಿಂತನೆಗಳನ್ನು ರೂಪಿಸಿಕೊಳ್ಳುವ ಮತ್ತು ಈಗಾಗಲೇ ಸಮ್ಮತವಾಗಿರುವ ತಿಳಿವಳಿಕೆಗಳ ಕ್ಷಿತಿಜಗಳಿಗೆ ಸವಾಲೆಸೆಯುವ ತಾಣಗಳಾಗಿವೆ. ಪ್ರಭುತ್ವದ ಸಂಸ್ಥೆಗಳು ಅಥವಾ ಅವರ ಕೃಪಾಪೋಷಿತ ದೊಂಬಿ ಗುಂಪುಗಳು ಅಂಥಾ ತಾಣಗಳನ್ನು ಧ್ವಂಸಗೊಳಿಸಲು ಯತ್ನಿಸುತ್ತಿರುವಾಗ ನಮ್ಮ ಪ್ರಜಾಪ್ರಭುತ್ವದ ಮೂಲತತ್ವವಾದ ಪ್ರಜಾತಾಂತ್ರಿಕ ಭಿನ್ನಮತದ ಅರಿವನ್ನು ತಡೆಗಟ್ಟಲು ಪ್ರಯತ್ನಿಸುತ್ತಿರುವವರ [illegible] ■

---

◀◀

...ಮಶಾನ ಮತ್ತು ಸ್ಮಶಾನವನ್ನು ಸ್ಥಳಾಂತರಿಸಬಹುದು ...ಹೊಸದೊಂದು ಸೂತ್ರ ಮುಂದಿಟ್ಟಿದ್ದಾರೆ. ಈ ...ತ ಮತ್ತು ಹಿಂದುಳಿದವರ ಸ್ಮಶಾನಕ್ಕೆ ಮಾತ್ರವೋ ...ಬೇರೆ ಎಲ್ಲಾ ಹಿಂದೂಗಳಿಗೂ ಅನ್ವಯವಾಗು...ಂಬುದಕ್ಕೆ ಕಾಲವೇ ಉತ್ತರ ಹೇಳಬೇಕು. ಕ್ರಿಕೆಟ್ ... ನಿರ್ಮಾಣ ಮಾಡುವುದರಿಂದ ಸ್ಥಳೀಯ ...ಗೆ ಅವಕಾಶವಾಗುತ್ತದೆ, ಪಾಲೇಮಾಡಿನ ಯುವಕ ...ಂದು ದಿನ ಕ್ರಿಕೆಟ್ ಆಟಗಾರನಾಗಬಹುದು ...ರೋಪಿಸುವ್ಯ ಹೇಳಿದ್ದಾರೆ. ಶ್ರೀಮಂತರ ಆಟವಾದ ... ಪಾಲೇಮಾಡಿನ ಒಬ್ಬ ಯುವಕ ಕ್ರಿಕೆಟ್ ... ಕನಸಿನ ಮಾತು. ಸ್ಟೇಡಿಯಂನ ಹತ್ತಿರ ಕೂಡ ... ಸುಳಿಯಲು ಬಿಡುವುದಿಲ್ಲ, ಇನ್ನು ಸ್ಥಳೀಯರಿಗೆ ...ಗದ ಅವಕಾಶ ಸಿಗುತ್ತದೆ ಎಂಬ ...ದಿದ್ದಾರಾದರೂ, ಸ್ಟೇಡಿಯಂನಲ್ಲಿ ಯಾವ ...? ಯುವಜನ ಸೇವೆ ಮತ್ತು ಕ್ರೀಡಾ ಇಲಾಖೆಯ ... ಕ್ರೀಡೆಗಾಗಿ ಏನೂ ಮಾಡದಿದ್ದ ಅಪ್ಪಚ್ಚು ರಂಜನ್ ...ಗಳ ಬಿಟ್ಟಿದ್ದಾರೆ.

ವಾಸ್ತವಾಂಶವೇನು

... ಸಂಸ್ಥೆ 20 ಎಕ್ರೆ ಜಮೀನು ಬೇಕು ... ಅವರಿಗೆ ಕೇವಲ 12.70 ಎಕ್ರೆ ... [illegible]


ಮಾಡಲು ಸಾಧ್ಯವೇ ಎಂಬ ಪ್ರಶ್ನೆಯೂ ಉದ್ಭವಿಸುತ್ತೆ. ಸಂಸ್ಥೆಯವರು ತಮಗೆ ಎಷ್ಟು ಜಾಗ ಬೇಕು ಎಂಬ ವಿವರ ಪಡೆದುಕೊಂಡೇ ಜಮೀನು ಮಂಜೂರಾತಿಗೆ ಅರ್ಜಿ ಸಲ್ಲಿಸಿರುತ್ತಾರೆ. ಅದಕ್ಕಿಂತ ಕಡಿಮೆ ಜಮೀನು ನೀಡಿದರೆ ಅಲ್ಲಿ ಕ್ರಿಕೆಟ್ ಸ್ಟೇಡಿಯಂ ನಿರ್ಮಾಣ ಮಾಡಲು ಸಾಧ್ಯವೇ ಎಂಬುದನ್ನು ಜಿಲ್ಲಾಡಳಿತ ಪರಿಶೀಲಿಸಬೇಕಾಗಿತ್ತು.

ಮತ್ತೊಂದು ಕಡೆ ಪಾಲೇಮಾಡಿನ ನಿವಾಸಿಗಳಿಗೆ ಜಿಲ್ಲಾಡಳಿತ ಸ್ಮಶಾನಕ್ಕಾಗಿ ಮಂಜೂರು ಮಾಡಿರುವ ಜಮೀನು ಅವರು ವಾಸವಿರುವ ಜಾಗದಿಂದ ಸುಮಾರು 4 ಕಿ.ಮೀ. ದೂರದಲ್ಲಿದೆ. ಈಗಾಗಲೇ ತಾವು ಉಪಯೋಗಿಸುತ್ತಿದ್ದ ಜಾಗ ಮಂಜೂರು ಮಾಡಬೇಕೆಂದು ತಾವು ಅರ್ಜಿ ಸಲ್ಲಿಸಿದ್ದರೂ ಜಿಲ್ಲಾಡಳಿತ ನಿರ್ಲಕ್ಷ್ಯವನ್ನು ತಾಳಿಕೊಂಡು, ಈಗ ಬೇರೆ ಜಾಗ ತೋರಿಸುತ್ತಿದೆ ಎಂದು ಜನ ಆರೋಪಿಸುತ್ತಿದ್ದಾರೆ. ತಾವು ಜಾಗ ಗುರುತಿಸಿಕೊಡಿ ಎಂದಾಗ ಕ್ರಮ ತೆಗೆದುಕೊಳ್ಳದ ಜಿಲ್ಲಾಡಳಿತ ಇದೀಗ ಇತ್ತೀಚಿನ ಸೃಷ್ಟಿತ ಸಕ್ಷೆ ಹಿಡಿದು ಬರುತ್ತಿದ್ದಾರೆ ಎನ್ನುವುದು ಅವರ ವಾದ. ಅಲ್ಲದೇ ಹೊಸದಾಗಿ ಗುರುತಿಸಲಾದ ಜಮೀನು ಬಲಮುರಿ ಹೊಳೆ ಬದಿಯಲ್ಲಿರುವುದರಿಂದ ಮಳೆಗಾಲದಲ್ಲಿ ನೀರು ಆವರಿಸಿ ಅಲ್ಲಿಗೆ ಹೋಗಲು ಸಾಧ್ಯವಾಗಲ್ಲ. 4.11.2016ರಲ್ಲಿ ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕರು ಮಡಿಕೇರಿ ತಹಸೀಲ್ದಾರರಿಗೆ ಪತ್ರ ಬರೆದು ಪಾಲೇಮಾಡು ... ಜಾಗದಲ್ಲಿ ಈ ಹಿಂದೆ ಶವಸಂಸ್ಕಾರ ಮಾಡಿರುವ ಕುರುಹು ಇದ್ದು ಕ್ರಿಕೆಟ್ ಸ್ಟೇಡಿಯಂನವರು ತಂತಿಬೇಲಿ ಹಾಕಿದ್ದು ಅದನ್ನು ತೆರವುಗೊಳಿಸಿಕೊಡಬೇಕೆಂದು ಕೋರಿದ್ದರು.

ಕೆ.ಎಸ್.ಸಿ.ಎ. ಸಂಸ್ಥೆ ಪ್ರತಿ ಜಿಲ್ಲೆಯಲ್ಲಿಯೂ ಒಂದು ಸ್ಟೇಡಿಯಂ ನಿರ್ಮಿಸುವ ಉದ್ದೇಶ ಹೊಂದಿದೆ. ಇಲ್ಲಿ ಒಳಾಂಗಣ ಕ್ರಿಕೆಟ್ ಸ್ಟೇಡಿಯಂ ನಿರ್ಮಾಣ ಮಾಡಲಾಗುತ್ತದೆ ಎಂದು ಹೇಳುತ್ತಾರೆ. ರಾಜ್ಯದ ಯಾವ ಭಾಗದಲ್ಲಿಯೂ ಇಂತಹ ಸ್ಟೇಡಿಯಂ ಇಲ್ಲ. ರಾಜ್ಯದ ಇತರೇ ಭಾಗಗಳಲ್ಲಿ ನಿರ್ಮಾಣವಾಗಿರುವ ಕ್ರಿಕೆಟ್ ಸ್ಟೇಡಿಯಂಗಳು ಸರಿಯಾಗಿ ಬಳಕೆಯಾಗುತ್ತಿಲ್ಲ. ಮೈಸೂರಿನಲ್ಲಿ ಒಂದು ರಣಜಿ ಪಂದ್ಯಾಟ ನಡೆದಿದೆ. ಬೆಳಗಾಂನಲ್ಲಿ ರಣಜಿ ನಡೆದಿದ್ದು ಅಂತರರಾಷ್ಟ್ರೀಯ ಮಟ್ಟದ ಪಂದ್ಯಾಟಗಳೇನೂ ನಡೆದಿಲ್ಲ. ಕೇವಲ ಕೆ.ಎಸ್.ಸಿ.ಎ. ಸಂಸ್ಥೆಯ ಪ್ರತಿಷ್ಠೆಗಾಗಿ ಜಿಲ್ಲೆಯಲ್ಲೊಂದು ಸ್ಟೇಡಿಯಂ ಎಂದು ಹೇಳಿಕೊಂಡಿದೆ. ಇದು ಸರಕಾರಿ ಸಂಸ್ಥೆಯೂ ಅಲ್ಲ, ಸರಕಾರದ ಅಂಗ ಸಂಸ್ಥೆಯೂ ಅಲ್ಲ. ಸಾರ್ವಜನಿಕರಿಗೆ ಇಂತಹ ಸಂಸ್ಥೆಗಳಿಂದ ಯಾವುದೇ ಪ್ರಯೋಜನವೂ ಇಲ್ಲ. ಬಡವರಿಗೆ ಜಮೀನು ನೀಡುವ ಆದ್ಯತೆಯನ್ನು ಸರಕಾರ ಇಟ್ಟುಕೊಳ್ಳದೆ, ಶ್ರೀಮಂತರ ಮೋಜಿಗಾಗಿ ಕ್ರಿಕೆಟ್ ಸ್ಟೇಡಿಯಂಗೆ ಜಾಗ ಮಂಜೂರಾತಿ ಮಾಡುವುದು ಎಷ್ಟು ಸರಿ ಎಂಬ ಪ್ರಶ್ನೆ ಕಾಡದಿರದು.

■ ಬಿ.ಎನ್. ಮನುಶೆಟ್ಟಿ

# ಸತ್ಯಾಂಶಗಳ ಅಭಾವದ ಅನಾಗರಿಕ ಚುನಾವಣಾ ಪ್ರಚಾರ




"ಸ್ಟಬ್ ಕಾ ಸಾಥ್ ಸಬ್ ಕಾ ವಿಕಾಸ್" ಎನ್ನುತ್ತಾ ಜನರಿಗೆ ಮಂಕುಬೂದಿ ಎರಚಿ ಚುನಾವಣೆ ಗೆದ್ದು ಅಧಿಕಾರಕ್ಕೆ ಬಂದ ಮೋದಿ ಸರ್ಕಾರ ಕಳೆದ ಮೂರು ವರ್ಷಗಳಲ್ಲಿ ಏನು ವಿಕಾಸ ಸಾಧಿಸಿದೆ, ಯಾರ ವಿಕಾಸ ಸಾಧಿಸಿದೆ? ಜಿಡಿಪಿಯ ಕುಸಿತ, ನಿರುದ್ಯೋಗದ ಜಿಗಿತದ ಅಂಕಿಅಂಶಗಳನ್ನು ನೋಡಿದವರಿಗೆ ಜನಸಾಮಾನ್ಯರು ಅನುಭವಿಸುತ್ತಿರುವ ಕಷ್ಟಕಾರ್ಪಣ್ಯಗಳ ಅರಿವಾಗದೆ ಇರದು. ಇದರ ಮೇಲೆ ಬಂದ ನೋಟು ರದ್ಧತಿಯ ಏಕವ್ಯಕ್ತಿ ತೀರ್ಮಾನವಂತೂ ಜನರನ್ನು ಇನ್ನಷ್ಟು ಬವಣೆಗೆ ದೂಡಿರುವುದರೊಂದಿಗೆ ದೇಶದ ಆರ್ಥಿಕತೆಯನ್ನು ದಯನೀಯ ಸ್ಥಿತಿಗೆ ತಳ್ಳಿದೆ. ಚುನಾವಣಾ ಪ್ರಣಾಳಿಕೆಯಲ್ಲಿ ಕೊಟ್ಟಿರುವ ಭರವಸೆಗಳನ್ನೆಲ್ಲ ಈಡೇರಿಸಲಾಗದ, ಅಭಿವೃದ್ಧಿ ಸಾಧಿಸಲಾಗದ ಬಿಜೆಪಿ ಇಂದು ತೀರ ಅಸಹಾಯಕ ಪರಿಸ್ಥಿತಿಯಲ್ಲಿದೆ. ಇಂಥಾ ಸನ್ನಿವೇಶ ಇರುವಾಗ ಉತ್ತರ ಪ್ರದೇಶದಲ್ಲಿ ಚುನಾವಣೆ ಗೆಲ್ಲದಿದ್ದರೆ ದೇಶಾದ್ಯಂತ ಬಿಜೆಪಿಯ ಪ್ರತಿಷ್ಠೆ ಮತ್ತು ವಿಶ್ವಾಸಾರ್ಹತೆಗಳೆರಡೂ ಕುಸಿಯುವುದು ಖಚಿತ. ಆದುದರಿಂದಲೆ ಬಿಜೆಪಿಯ ಸ್ಟಾರ್ ಪ್ರಚಾರಕ ಮೋದಿಗೆ ತನ್ನ ಚುನಾವಣಾ ಪ್ರಚಾರದ ಭಾಷಣಗಳಲ್ಲಿ "ಅಭಿವೃದ್ಧಿ" ಮತ್ತು "ನೋಟು ರದ್ಧತಿ" ಬಗ್ಗೆ ಕನಿಷ್ಠ ಪ್ರಸ್ತಾಪ ಮಾಡಬೇಕಾದ ಅಥವಾ ಸತ್ಯವನ್ನು ಮುಚ್ಚಿಡಬೇಕಾದ ಪರಿಸ್ಥಿತಿ ಬಂದಿದೆ. ತನ್ನ ಸರ್ಕಾರದ ವೈಫಲ್ಯಗಳನ್ನು ಮರೆಮಾಚಲು ಜಾತಿವಾದ, ಕೋಮುವಾದ, ಅರ್ಧಸತ್ಯಗಳು ಮತ್ತು ಸುಳ್ಳುಗಳ ಮೊರೆಹೋಗಬೇಕಾಗಿ ಬಂದಿದೆ. ದಿಕ್ಕು ತಪ್ಪಿಸುವ ಅಂಕಿಅಂಶಗಳನ್ನು ಉದುರಿಸುವುದು, ರೈಲು ಅಪಘಾತಕ್ಕೂ ಪಾಕಿಸ್ತಾನಿ ಪಿತೂರಿಗೂ ರಾಜ್ಯ ಚುನಾವಣೆ ಗಳಿಗೂ ದೇಶದ ಭದ್ರತೆಗೂ ಬಾದರಾಯಣ ಸಂಬಂಧ ಕಲ್ಪಿಸುವುದು ಇವೇ ಮುಂತಾದ ಕರತಲಾಮಲಕ ತಂತ್ರಗಳ ಮೂಲಕ ಮೋದಿ ತನ್ನ ಅನ್ವರ್ಥನಾಮವನ್ನು ಮತ್ತೊಮ್ಮೆ ಸಾಬೀತುಪಡಿಸುತ್ತಿದ್ದಾನೆ.

ಫೆಬ್ರವರಿ 16ರಂದು ಉತ್ತರ ಪ್ರದೇಶದ ಬಾರಾಬಂಕಿ ಮತ್ತು 24ರಂದು ಗೊಂಡಾ ಜಿಲ್ಲೆಯಲ್ಲಿ ಮಾಡಿದ ಪ್ರಚಾರ ಭಾಷಣಗಳಲ್ಲಿ ಆತ ಕೆಲವೊಂದು ಪ್ರತಿಪಾದನೆಗಳನ್ನು ಸಭಿಕರ ಮುಂದಿರಿಸಿದ. ವೇದಿಕೆಗಳಿಂದ ಮಾಡುವ ಇಂತಹ ಪ್ರತಿಪಾದನೆ ಅಥವಾ ವಾದಗಳ ವೈಶಿಷ್ಟ್ಯ ಏನೆಂದರೆ ಇದಕ್ಕೆ ಆ ಕ್ಷಣದಲ್ಲಿ ಉತ್ತರಿಸಲು ಅವಕಾಶವಿಲ್ಲ, ವಿಶ್ಲೇಷಣೆ ಏನಿದ್ದರೂ ತರುವಾಯ ಮಾಧ್ಯಮಗಳಲ್ಲಿ ಆಗಬೇಕು. ಆದರೆ ಅಷ್ಟರಲ್ಲಾಗಲೆ ಸಭಿಕರ ಮೇಲೆ ಅಪೇಕ್ಷಿತ ಪರಿಣಾಮ ಆಗಿಬಿಟ್ಟಿರುತ್ತದೆ. ವಾಕ್ಚತುರ ಮೋದಿಗೂ ಇದು ಚೆನ್ನಾಗಿ ಗೊತ್ತು, ಇರಲಿ.

## ಮೋದಿ ಪ್ರತಿಪಾದನೆ 1

ರಾಜ್ಯದಲ್ಲಿರುವ ಒಟ್ಟು ಶಿಕ್ಷಕರ ಹುದ್ದೆಗಳ ಪೈಕಿ ಶೇಕಡಾ 50ರಷ್ಟು ಖಾಲಿಬಿದ್ದಿವೆ. ಇದು ಅಖಿಲೇಶ್ ಯಾದವ್ ಸರ್ಕಾರದ ಸಾಧನೆಯನ್ನು ತೋರಿಸುವ ರೀತಿಯಲ್ಲಿದೆ. ಹಾಗಾದರೆ ಬಡವರ ಮಕ್ಕಳು ಎಲ್ಲಿ ಕಲಿಯಬೇಕು?

### ವಾಸ್ತವ


ಮೋದಿ ಹೇಳುತ್ತಿರುವುದು ಅರ್ಧ ಸತ್ಯ. ಮಾಧ್ಯಮಿಕ ಹಂತದಲ್ಲಿ (9 ಮತ್ತು 10ನೆ ಇಯತ್ತೆ) ಶೇಕಡಾ 50ರಷ್ಟು ಟೀಚರ್ ಹುದ್ದೆಗಳು ತೆರವಾಗಿರುವುದು ನಿಜ. ಆದರೆ ಪ್ರಾಥಮಿಕ ಹಂತದಲ್ಲಿ (1ರಿಂದ-8ನೆ ಇಯತ್ತೆ) ಅದು ಶೇಕಡಾ 23ರಷ್ಟಿದೆ. ನಿಜವಾಗಿ ಮಾಧ್ಯಮಿಕ ಹಂತದಲ್ಲಿ ಪ್ರಥಮ ಸ್ಥಾನದಲ್ಲಿರುವುದು ಜಾರ್ಖಂಡ (71.7%). ಉತ್ತರ ಪ್ರದೇಶ ಎರಡನೆ ಸ್ಥಾನದಲ್ಲಿದೆ. ಪ್ರಾಥಮಿಕ ಹಂತದಲ್ಲಿಯೂ ಜಾರ್ಖಂಡವೇ ಮೊದಲ ಸ್ಥಾನದಲ್ಲಿದೆ (38.4%). ಬಿಹಾರದ್ದು ಎರಡನೆ ಸ್ಥಾನವಾದರೆ (34.5%) ಪಂಜಾಬ್ ಮೂರನೆ ಸ್ಥಾನದಲ್ಲಿದೆ (23.4%). ಉತ್ತರ ಪ್ರದೇಶದ ಸರದಿ ಪಂಜಾಬ್‌ನ ನಂತರ ಬರುತ್ತದೆ (ಲೋಕಸಭೆ ಮಾಹಿತಿ). ಇಡೀ ದೇಶವನ್ನು ತೆಗೆದುಕೊಂಡರೆ ಒಟ್ಟು ಇರುವ 60 ಲಕ್ಷ ಶಿಕ್ಷಕ ಹುದ್ದೆಗಳಲ್ಲಿ 10 ಲಕ್ಷ ಹುದ್ದೆಗಳಿಗೆ ಇನ್ನೂ ನೇಮಕಾತಿ ಆಗಿಲ್ಲ.

## ಪ್ರತಿಪಾದನೆ 2

ಹಿಂದೂಸ್ತಾನದಲ್ಲಿ ದಲಿತರ ಮೇಲೆ ಅತ್ಯಧಿಕ ದೌರ್ಜನ್ಯಗಳು ಎಲ್ಲಾದರೂ ಸಂಭವಿಸುತ್ತಿದ್ದರೆ ಅದು ಉತ್ತರ ಪ್ರದೇಶದಲ್ಲಿ.

### ವಾಸ್ತವ

ಮೋದಿ ಇಲ್ಲಿ ಬರೀ ಅಪರಾಧಗಳ ಸಂಖ್ಯೆಯನ್ನಷ್ಟೆ ಪ್ರಸ್ತಾಪಿಸಿ ಉದ್ದೇಶಪೂರ್ವಕವಾಗಿ ತಪ್ಪು ಮಾಡಿದ್ದಾನೆ. ಈ ರೀತಿ ನೋಡಿದರೆ 2015ರಲ್ಲಿ ಉತ್ತರ ಪ್ರದೇಶದಲ್ಲಿ ದಲಿತರ ವಿರುದ್ಧ ಅತ್ಯಧಿಕ ಅಪರಾಧಗಳು (ಒಟ್ಟು 8358) ಸಂಭವಿಸಿರುವಂತೆ ಕಾಣುತ್ತದೆ. ಆದರೆ ಅಧಿಕೃತ ಹಾಗೂ ಅಂಗೀಕೃತವಾದ (ರಾಷ್ಟ್ರೀಯ ಅಪರಾಧ ದಾಖಲೆ ಸಂಸ್ಥೆ ಎನ್‌ಸಿಆರ್‌ಬಿ) ಅಪರಾಧ ಗತಿಯನ್ನು (rate; ಪ್ರತಿ 1 ಲಕ್ಷ ದಲಿತರಲ್ಲಿ ದೌರ್ಜನ್ಯಕ್ಕೊಳಗಾದವರ ಸಂಖ್ಯೆ) ಪರಿಗಣಿಸಿದರೆ 11 ರಾಜ್ಯಗಳಲ್ಲಿ ಮತ್ತು ಒಂದು ಕೇಂದ್ರಾಡಳಿತ ಪ್ರದೇಶದಲ್ಲಿ ಉತ್ತರ ಪ್ರದೇಶಕ್ಕಿಂತಲೂ ಹೆಚ್ಚು ಅಪರಾಧಗಳು ಸಂಭವಿಸಿವೆ. ಉದಾಹರಣೆಗೆ ಎನ್‌ಸಿಆರ್‌ಬಿ ದಾಖಲೆಗಳ ಪ್ರಕಾರ ವಿವಿಧ ರಾಜ್ಯಗಳಲ್ಲಿ ನಡೆದಿರುವ ಅಪರಾಧಗಳ ಗತಿ ಹೀಗಿದೆ:



| | |
|---|---|
| ರಾಜಸ್ತಾನ | 57 (ಅತ್ಯಧಿಕ) |
| ಆಂಧ್ರ ಪ್ರದೇಶ | 52 |
| ಗೋವಾ | 51 |
| ಬಿಹಾರ | 39 |
| ಮಧ್ಯ ಪ್ರದೇಶ | 37 |
| ಛತ್ತೀಸ್‌ಗಢ | 31 |
| ಗುಜರಾತ್ | 26 |
| ಉತ್ತರ ಪ್ರದೇಶ | 20 |
| ಮಹಾರಾಷ್ಟ್ರ | 14 |

2008ರಿಂದ-2015ರ ವರೆಗಿನ ಅವಧಿಯನ್ನು ಪರಿಗಣಿಸಿದರೆ ಗುಜರಾತ್‌ನಲ್ಲಿ ಅಪರಾಧ ಗತಿ ಯಾವತ್ತೂ 25ಕ್ಕಿಂತ ಜಾಸ್ತಿ ಇತ್ತು, ಉತ್ತರ ಪ್ರದೇಶದಲ್ಲಿ ಯಾವತ್ತೂ 20ಕ್ಕಿಂತ ಕಡಿಮೆ ಇತ್ತು. ಮಾಯಾವತಿ ಸರ್ಕಾರದ ಅವಧಿಯಲ್ಲಿ ಇನ್ನಷ್ಟು ಕಡಿಮೆಯಾಗಿದ್ದ ಗತಿ ಅಖಿಲೇಶ್ ಸರ್ಕಾರದ ಅವಧಿಯಲ್ಲಿ ಮತ್ತೆ ಯಥಾಸ್ಥಿತಿಗೆ ಮರಳಿದೆ.

## ಪ್ರತಿಪಾದನೆ 3

ಅಪರಾಧಗಳ ವಿಚಾರದಲ್ಲಿ ಉತ್ತರ ಪ್ರದೇಶ ದೇಶದಲ್ಲೆ ನಂಬರ್ ವನ್. ಅಲ್ಲಿ ದಿನಂಪ್ರತಿ 24 ಅತ್ಯಾಚಾರ, 21 ಅತ್ಯಾಚಾರ ಯತ್ನ, 13 ಕೊಲೆ, 33 ಅಪಹರಣ, 19 ದಂಗೆ, 136 ಕಳವು ಪ್ರಕರಣಗಳು ನಡೆಯುತ್ತವೆ (ಇವು 2015ರ ಅಂಕಿಅಂಶಗಳು).

### ವಾಸ್ತವ

ಮೋದಿ ಮತ್ತೆ ಉದ್ದೇಶಪೂರ್ವಕವಾಗಿ ಅದೇ ತಪ್ಪು ಮಾಡಿದ್ದಾನೆ. ಅಧಿಕೃತ (ಎನ್‌ಸಿಆರ್‌ಬಿ) ವಿಧಾನದಲ್ಲಿ ಅಂದರೆ ಅಪರಾಧ ಗತಿಯ ಆಧಾರದಲ್ಲಿ (ಪ್ರತಿ 1 ಲಕ್ಷ ಜನಸಂಖ್ಯೆಯಲ್ಲಿ ನಡೆದಿರುವ ಪ್ರಕರಣಗಳು) ನೋಡಿದರೆ ಕೊಲೆ ಪ್ರಕರಣಗಳ ಮಟ್ಟಿಗೆ 21 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ, ಅತ್ಯಾಚಾರ ಪ್ರಕರಣಗಳ ಮಟ್ಟಿಗೆ 27 ರಾಜ್ಯಗಳಲ್ಲಿ, ಅಪಹರಣ ಪ್ರಕರಣಗಳ ಮಟ್ಟಿಗೆ 19 ರಾಜ್ಯಗಳಲ್ಲಿ, ದಂಗೆ ಪ್ರಕರಣಗಳ ಮಟ್ಟಿಗೆ 16 ರಾಜ್ಯಗಳಲ್ಲಿ ಅಪರಾಧ ಗತಿ ಉತ್ತರ ಪ್ರದೇಶಕ್ಕಿಂತ ಜಾಸ್ತಿ ಇದೆ.

## ಪ್ರತಿಪಾದನೆ 4

ಉತ್ತರ ಪ್ರದೇಶ ಸರ್ಕಾರ ಬರೀ 3 ಪ್ರತಿಶತ ಕೃಷಿ ಉತ್ಪನ್ನಗಳನ್ನು ಖರೀದಿಸುತ್ತಿದೆ.

### ವಾಸ್ತವ

ಇದೂ ಒಂದು ಅರ್ಧ ಸತ್ಯ. ಮೋದಿ ಹೇಳಿರುವ ಅಂಕಿಅಂಶ ಕೇವಲ ಗೋಧಿಯ ಮಟ್ಟಿಗೆ ಮಾತ್ರ ಸರಿ. ಆದರೆ ಭತ್ತದ ವಿಷಯ ಬೇರೆಯೆ ಇದೆ. 2014-15ರಲ್ಲಿ ಭಾರತೀಯ ಆಹಾರ ನಿಗಮ ಮತ್ತಿತರ ಸರ್ಕಾರಿ ಇಲಾಖೆಗಳು ಖರೀದಿಸಿದ ಗೋಧಿಯ ಪ್ರಮಾಣ ಶೇಕಡಾ 2.5ರಷ್ಟಿದ್ದರೆ ಅಕ್ಕಿಯ ಪ್ರಮಾಣ ಶೇಕಡಾ 10.5ರಷ್ಟಿತ್ತು! ಮಿಕ್ಕಿದುದನ್ನೆಲ್ಲ ರೈತರು ನೇರವಾಗಿ ಕೃಷಿ ಉತ್ಪನ್ನ ಮಾರುಕಟ್ಟೆಗಳಲ್ಲಿರುವ ಏಜಂಟರಿಗೂ ವ್ಯಾಪಾರಿಗಳಿಗೂ ಮಾರಿದ್ದರು.

ರಾಜಸ್ತಾನದಲ್ಲಿ ಖರೀದಿಯ ಪ್ರಮಾಣ ಶೇಕಡಾ 50ರಷ್ಟಿತ್ತು ಎಂದು ಮೋದಿ ಹೇಳಿರುವುದು ಸುಳ್ಳು. ಸರ್ಕಾರಿ ಸಂಸ್ಥೆಗಳು ಖರೀದಿಸಿರುವುದು ಕೇವಲ ಶೇಕಡಾ 18 ಅಷ್ಟೆ. ಇನ್ನು ಬಿಜೆಪಿ ಆಡಳಿತವಿರುವ ಛತ್ತೀಸ್‌ಗಢ, ಮಧ್ಯ ಪ್ರದೇಶಗಳಲ್ಲಿ 60% ಖರೀದಿಸಲಾಗಿದೆ ಎಂಬ ಮೋದಿಯ ಹೇಳಿಕೆಗಳೂ ಅರ್ಧ ಸತ್ಯ. ಏಕೆಂದರೆ ಛತ್ತೀಸ್‌ಗಢದ ಅಂಕಿಅಂಶ ಕೇವಲ ಭತ್ತದ್ದಾದರೆ ಮಧ್ಯಪ್ರದೇಶದ್ದು ಬರೀ ಗೋಧಿಯದಾಗಿತ್ತು. ಆದರೆ ಹರಿಯಾಣಾದ ಬಗ್ಗೆ ಮೋದಿ ಕೊಟ್ಟ ಶೇಕಡಾ 70ರ ಅಂಕಿಅಂಶ ಭತ್ತ ಗೋಧಿ ಎರಡರ ಮಟ್ಟಿಗೂ ಹೆಚ್ಚುಕಮ್ಮಿ ಸರಿಯಾಗಿತ್ತು.

## ಪ್ರತಿಪಾದನೆ 5

"ನಾವು ಜಾರಿಗೊಳಿಸಿರುವ ಪ್ರಧಾನ ಮಂತ್ರಿ ಬೆಳೆ ವಿಮಾ ಯೋಜನೆ ಹೇಗಿದೆ ಎಂದರೆ ನೇಜಿ ಕಾಲದಲ್ಲಿ ಯಾವುದೇ ಪ್ರಾಕೃತಿಕ ಕಾರಣಗಳಿಂದಾಗಿ ಬೆಳೆಗೆ ಹಾನಿಯಾದಲ್ಲಿ ರೈತನಿಗೆ ವಿಮೆ ಸಿಗಲಿದೆ. ಇದಕ್ಕೂ ಮುಂಚೆ ಇಂತಹದೊಂದು ಯೋಜನೆಯನ್ನು ಯಾರಾದರೂ ಕಂಡಿದ್ದೀರಾ"?

### ವಾಸ್ತವ

ಹವಾಮಾನ ವೈಪರೀತ್ಯಗಳಿಂದಾಗುವ ಬೆಳೆ ಹಾನಿಗೆ ವಿಮೆ ಸಿಗುತ್ತಿರುವುದು ಇದೇ ಮೊದಲ ಬಾರಿ ಎಂದು ಮೋದಿ ಹೇಳುತ್ತಿರುವುದು ನಿಜವಲ್ಲ. ಹಿಂದಿನ ವಿಮಾ ಯೋಜನೆಯಲ್ಲಿ ರಾಷ್ಟ್ರೀಯ ಕೃಷಿ ವಿಮಾ ಯೋಜನೆ, ಪರಿವರ್ತಿತ ಕೃಷಿ ವಿಮಾ ಯೋಜನೆ ಮತ್ತು ಹವಾಮಾನ ಆಧರಿಸಿದ ಬೆಳೆ ವಿಮಾ ಯೋಜನೆ ಎಂಬ ಮೂ... ವಿಭಾಗಗಳಿದ್ದವು. ಹವಾಮಾನ ಆಧರಿಸಿದ ಬೆಳೆ ... ಯೋಜನೆ ದೇಶದ ಕೆಲವು ಭಾಗಗಳಿಗೆ ಸೀಮಿತವಾ... ಇದು ಅತಿವೃಷ್ಟಿ, ಅನಾವೃಷ್ಟಿ ಮತ್ತು ಹಿಮದ ವಿರುದ್ಧ ವಿಮೆ ಒದಗಿಸುತ್ತದೆ. ಈ ಯೋಜನೆಯನ್ನು 2003... ಬೇಸಿಗೆಯ ಬೆಳೆಗಳಿಗೂ 2008ರಲ್ಲಿ ಚಳಿಗಾ... ಬೆಳೆಗಳಿಗೂ ವಿಸ್ತರಿಸಲಾಗಿತ್ತು, ಮೋದಿ ಸರ್ಕಾರ ಇದ... ಹಾಗೇ ಮುಂದುವರಿಸಿದೆ. 2014-15 ... 2015-16ರಲ್ಲಿ ಆ ಬಾಬತ್ತು ಸುಮಾರು ರೂ. 10... ಕೋಟಿಯಷ್ಟನ್ನು ವ್ಯಯಿಸಿದೆ ಕೂಡಾ. ಮತ್ತೆ ಮತ್ತೆ ಬರ... ಬಂದುದರಿಂದ 2016-17ರಲ್ಲಿ ರೂ. 13,200 ಕೋ... ಖರ್ಚು ಮಾಡಿದೆ. ಮೋದಿಯ "ನೂತನ" ಯೋ... ಮಾಡಿರುವುದಿಷ್ಟೆ: ಮೊದಲ ಎರಡು ವಿಭಾಗಗಳನ್ನು ಒ... ಸೇರಿಸಿ ಪ್ರಧಾನ ಮಂತ್ರಿ ಬೆಳೆ ವಿಮಾ ಯೋಜನೆ ಎ... ಹೊಸಾ ಹೆಸರನ್ನು ನೀಡಲಾಗಿದೆ! ಮೂರನೆ ವಿಭ... ಮೊದಲಿನ ಹಾಗೇ ಇದೆ!

## ಪ್ರತಿಪಾದನೆ 6

ಬಿಜೆಪಿ ಸರ್ಕಾರಗಳು ಇರುವಲ್ಲೆಲ್ಲಾ 60-70 ಪ್ರತಿ... ರೈತರು ಈ ವಿಮಾ ಯೋಜನೆಯ ಪ್ರಯೋ... ಪಡೆದುಕೊಂಡಿದ್ದಾರೆ. ಉತ್ತರ ಪ್ರದೇಶದಲ್ಲಿ ಬರೀ ... ಪ್ರತಿಶತ ರೈತರಿಗೆ ಪ್ರಯೋಜನ ಲಭಿಸಿದೆ.

### ವಾಸ್ತವ

ಮಹಾರಾಷ್ಟ್ರ, ರಾಜಸ್ತಾನಗಳ ಮಟ್ಟಿಗೆ ಮೋದಿ... ಅಂಕಿಅಂಶ ಸರಿಯಾಗಿದೆ.. ಆದರೆ ಗುಜರಾತ್, ... ಪ್ರದೇಶಗಳ ಬಗ್ಗೆ ಆತ ಕೊಟ್ಟಿರುವ ಅಂಕಿಅಂಶಗಳು ... ಉತ್ಪ್ರೇಕ್ಷಿತ. ಉತ್ತರ ಪ್ರದೇಶದ ಬಗ್ಗೆ ಸುಳ್ಳು ಅಂಕಿ... ನೀಡಿದ್ದಾನೆ.

| ರಾಜ್ಯ | ಮೋದಿ ಅಂಕಿಅಂಶ | ಲೋಕಸಭೆ... ಅಂಕಿಅಂಶ |
|---|---|---|
| ಗುಜರಾತ್ | 60-70% | 26.1% |
| ಮಧ್ಯ ಪ್ರದೇಶ | 60-70% | 38.2% |
| ಉತ್ತರ ಪ್ರದೇಶ | 3% | 12.9% |

## ಪ್ರತಿಪಾದನೆ 7

ಪೊಲೀಸರು ನಡೆಸಿರುವ ತನಿಖೆಗಳ ಪ್ರಕಾ... ಕಾನ್‌ಪುರದ ಇತ್ತೀಚಿನ ರೈಲು ದುರ್ಘಟನೆಯ ಹಿ... ಒಂದು ಪಿತೂರಿ ಇದೆಯೆಂದು ತಿಳಿದುಬರುತ್ತಿದೆ. ... ನಮ್ಮ ಗಡಿಯಾಚೆಗಿನ ಶತ್ರುಗಳು ಮಾಡಿದಂತಹ ಪಿತೂರಿ...

### ವಾಸ್ತವ

ಮೋದಿ ಉಲ್ಲೇಖಿಸಿದ ರೈಲು ದುರ್ಘಟನೆ ನವಂಬ... 20, 2016ರಂದು ನಡೆದಿರುವುದಾಗಿದೆ. ಸದರಿ ಅಪಘಾ... ಹಳೆಯ ಕೋಚುಗಳು ಮತ್ತು ಸವೆದ ಚಕ್ರಗಳೆ ಕಾರಣವೆ... ತೋರುತ್ತದೆ ಎಂದು ರೈಲು ಸುರಕ್ಷಾ ಪ್ರಾಧಿಕಾರ... ಪ್ರಾಥಮಿಕ ತನಿಖಾ ವರದಿ ಹೇಳಿದರೆ ರಾಷ್ಟ್ರೀಯ ತನಿ... ಸಂಸ್ಥೆಯ ಪ್ರಾಥಮಿಕ ತನಿಖೆ ಪ್ರಕಾರ ಈ ವಿಧ್ವಂ... ಕೃತ್ಯದ ಹಿಂದೆ ಭಯೋತ್ಪಾದಕರ ಕೈವಾಡ ಇಲ್ಲ.

ಸಾರ್ವಜನಿಕ ಸಭೆಗಳಲ್ಲಿ ಅನಾಗರಿಕರಂತೆ ಮಾತನಾಡು... ವಾಸ್ತವಕ್ಕೆ ದೂರವಿರುವ ಬೇಜವಾಬ್ದಾರಿ ಹೇಳಿಕೆಗಳ... ನೀಡುವ, ಕೋಮು ಭಾವನೆಗಳನ್ನು ಉದ್ದೀಪಿಸುವ ... ಪ್ರಧಾನಿ ಸ್ಥಾನದಲ್ಲಿರಲು ಅರ್ಹನೆ ಎಂಬ ಪ್ರಶ್ನೆಯ... ಮತದಾರರು ಕೇಳಲೇಬೇಕಾಗಿದೆ.

■ ಸುರೇಶ್ ಭಟ್ ಬಾಕ್ರಬೈಲ್...

(ಆಧಾರ: *Factchecker.in* ನಲ್ಲಿ ಅಭಿಷೇ... ವಾಗ್ಳೆ; *scroll.in* ನಲ್ಲಿ ಸಮರ್ ಹಾಲರ್ಣ...

# ವ್ಯಾಘ್ರನ ಕರೆ

# ಮೊದಲ ಚಿರತೆ ಮತ್ತು ಹುಲಿಯ ಬೇಟೆ

ಇಂಗ್ಲಿಷ್ ಮೂಲ: ಆರ್ಥರ್ ಪೋವೆಲ್

ಕನ್ನಡಕ್ಕೆ: ವಸಂತ್ ನಡಹಳ್ಳಿ


ಕೆಲವು ತಿಂಗಳ ನಂತರ ನಾನು ಸೈನಿಕ ತರಬೇತಿಗಾಗಿ ...ಪ್ರದೇಶದ ಗಿರಿಧಾಮ ಪಾಚ್ಮರ್ಹಿಗೆ ಹೋಗಿದ್ದೆ. ಸಂಜೆಯ ...ಯದಲ್ಲಿ ಬಿಡುವು ಮಾಡಿಕೊಂಡು ಹತ್ತಿರದ ಸಣ್ಣ ...ವೊಂದರ ಮೇಲೆ ಹೋಗಿ ಕುಳಿತುಕೊಳ್ಳುತ್ತಿದ್ದೆ. ...ಗಳಿಂದ ಆವರಿಸಿದ್ದ ಸುಮಾರು ಸಾವಿರ ಅಡಿಗಳಷ್ಟು ... ಕೆಳಗಿನ ಕಣಿವೆಯ ವಿಹಂಗಮ ನೋಟವನ್ನು ...ಸುತ್ತಾ ಮೈಮರೆಯುತ್ತಿದ್ದೆ. ಮಾನವನ ಚಟುವಟಿಕೆ ...ದ ಘಾಸಿಗೊಳ್ಳದೆ ಚಿರನಿದ್ದೆಯಲ್ಲಿರುತ್ತಿದ್ದ ಅಲ್ಲಿನ ...ಯನ್ನು ದಣಿವರಿಯದೆ ನೋಡುತ್ತಾ ಇರಬಹುದಿತ್ತು. ...ಒಂದು ದಿನ ಮಧ್ಯಾಹ್ನ ನನ್ನ ಸೇವಕ ಬಾಲು ನಾನು ...ತುಕೊಳ್ಳುವ ಜಾಗದ ಹತ್ತಿರ ಚಿರತೆಯೊಂದು ...ಯನ್ನು ಕೊಂದುಹಾಕಿರುವ ಸಮಾಚಾರ ತಂದ. ...ಯ ಮಾಲಿಕ ಹೇಳಿದ ಪ್ರಕಾರ ಬೆಟ್ಟದ ಬಳಿ ...ಯುತ್ತಿದ್ದ ಮಂದೆಯಲ್ಲಿ ನುಗ್ಗಿ ಚಿರತೆ ನಾಲ್ಕು ...ಗಳನ್ನು ಕೊಂದುಹಾಕಿತ್ತು. ಅವತ್ತು ರಜಾದಿನವಾದ್ದರಿಂದ ... ತಕ್ಷಣ ಊಟಮಾಡಿ ಮಚಾನು ಕಟ್ಟಲು ಬೇಕಾದ ...ಗ್ರಿಗಳೊಂದಿಗೆ ಹೊರಟೆ. ಚಿರತೆ ಬೇಟೆಯಾಡಿದ ...ನ್ನು ತಲುಪಿದಾಗ ಅಲ್ಲಿ ಮೇಕೆಗಳು ಹೋರಾಡಿದ ...ಕುಗಳಿದ್ದರೂ ಶವಗಳು ಕಂಡುಬರಲಿಲ್ಲ. ಕುರಿಗಾಹಿಯ ... ಮೂರು ಶವಗಳನ್ನು ಮಾಲಿಕರು ತೆಗೆದುಕೊಂಡು ...ಗಿದ್ದರೆ ಇನ್ನೊಂದನ್ನು ಮಾತ್ರ ಚಿರತೆ 300 ಅಡಿ ...ದ ಬಂಡೆಯಿಂದ ಮರೆಯಾದ ಗುಹೆಯೊಂದಕ್ಕೆ ...ಕೊಂಡು ಹೋಗಿತ್ತು.

...ಬಂಡೆಯ ಕಡೆ ಏರಿಹೋಗಿದ್ದ ಒಂದು ಕೊರಕಲಿನಲ್ಲಿ ... ಮತ್ತು ಬಾಲು ಎಚ್ಚರಿಕೆಯಿಂದ ನಡೆಯತೊಡಗಿದೆವು. ...ಯ ಬಳಿ ಹೋದಾಗ ಅದರೊಳಗೆ ಸುಮಾರು ...ಮು ಅಡಿ ಅಗಲ ಹತ್ತು ಅಡಿ ಎತ್ತರದ ಪೊಟರೆ ...ದು ಕಂಡುಬಂತು. ಆದರೆ ನಾವಿದ್ದ ಕಡೆಯಿಂದ ಅದರೊಳಗೆ ನೋಡುವುದು ಸಾಧ್ಯವಿರಲಿಲ್ಲ. ಹೊಡೆದು ಕೊಳ್ಳುತ್ತಿದ್ದ ಎದೆಯನ್ನು ಹಿಡಿತಕ್ಕೆ ತರಲು ಒಂದು ನಿಮಿಷ ಸುಧಾರಿಸಿಕೊಂಡು ನಾನು ಗನ್ನನ್ನು ಸಿದ್ಧಮಾಡಿಕೊಂಡು ಪೊಟರೆಯೊಳಗೆ ನಿಧಾನವಾಗಿ ಚಲಿಸತೊಡಗಿದೆ. ಅಲ್ಲಿ ಅರ್ಧ ತಿನ್ನಲಾಗಿದ್ದ ಮೇಕೆಯ ಶವದ ಹೊರತಾಗಿ ಮತ್ತೇನು ಕಾಣಲಿಲ್ಲ. ಆ ಪೊಟರೆಗೆ ಮತ್ತೊಂದು ತುದಿಯಿಂದ ಹೊರದಾರಿಯೂ ಇರಲಿಲ್ಲ.

ಶವವನ್ನು ಹೊರಗೆ ಎಳೆದು ತರುವುದು ಚಿರತೆಯ ಅನುಮಾನಕ್ಕೆ ಆಸ್ಪದವಾಗಬಹುದು ಎನ್ನಿಸಿತು. ನಾವು ಏರಿಬಂದ ಕೊರಕಲನ್ನು ಹೊರತಾಗಿಸಿದರೆ ಚಿರತೆಗೆ ಇಲ್ಲಿಗೆ ಬರಲು ಇದ್ದ ದಾರಿಯೆಂದರೆ ಬಂಡೆಯನ್ನು ಇನ್ನೊಂದು ತುದಿಯಿಂದ ಹತ್ತಿಬರುವುದು. ಹತ್ತಿರದಲ್ಲಿ ಎಲ್ಲೂ ಮರಗಳಿಲ್ಲದಿದ್ದರಿಂದ ಅಡಗಿ ಕುಳಿತುಕೊಳ್ಳುವ ಸ್ಥಳವನ್ನು ಹುಡುಕುವುದೇ ಸಮಸ್ಯೆಯಾಗಿತ್ತು. ಕೊನೆಗೆ ನಾನು ತಂದಿದ್ದ ಹಾಸಿಗೆಯನ್ನು ಮರೆಯಾಗಿ ಬಳಸಿ ಕೊರಕಲು ದಾರಿಯ ಪಕ್ಕದಲ್ಲಿ ಜಾಗ ಮಾಡಿಕೊಳ್ಳಲು ನಿರ್ಧರಿಸಿದೆ. ಸುತ್ತಲಿನ ರೆಂಬೆಕೊಂಬೆಗಳನ್ನು ಬಳಸಿ ಹಾಸಿಗೆಯನ್ನು ಪೊದೆಯಂತೆ ಕಾಣುವಂತೆ ಮರೆಮಾಡಿ ನಾನು ಅದರೊಳಗೆ ಕುಳಿತುಕೊಂಡೆ.

ಬಾಲು ಮತ್ತಿತರರು ಅಲ್ಲಿಂದ ಹೊರಟಾಗ ನಾನು ಸ್ವಲ್ಪ ಭಯಗೊಂಡಿದ್ದೆ ಎಂದು ಒಪ್ಪಿಕೊಳ್ಳುತ್ತೇನೆ. ಚಿರತೆ ಯಾವಕಡೆಯಿಂದ ಬಂದಿದ್ದರೂ ನನ್ನಿಂದ 15 ಅಡಿಗಿಂತ ಕಡಿಮೆ ದೂರದಲ್ಲಿ ಹಾದುಹೋಗಬೇಕಾಗಿತ್ತು. ಚಿರತೆ ನನ್ನನ್ನು ನೋಡದಿದ್ದರೂ ನಾನು ಗುಂಡು ಹೊಡೆದಾಗ ಈ ಜಾಗವನ್ನು ಪೊದೆಯೆಂದು ಪರಿಗಣಿಸಿ ತನ್ನನ್ನು ರಕ್ಷಿಸಿಕೊಳ್ಳಲು ಅಲ್ಲಿಗೆ ನುಗ್ಗಬಹುದಿತ್ತು ಅಥವಾ ಗುಂಡೇಟು ತಗುಲಿದಾಗ ಜಿಗಿದು ನನ್ನ ಮೇಲೆ ಬೀಳಬಹುದಿತ್ತು! ಇಂತಹ ಯೋಚನೆಗಳು ನನ್ನಲ್ಲಿ ನಡುಕ ಹುಟ್ಟಿಸುತ್ತಿದ್ದವು. ಮೈಯನ್ನೆಲ್ಲಾ ಕಚ್ಚುತ್ತಿದ್ದ ಕ್ರಿಮಿಕೀಟಗಳು, ಮರಕುಟಿಗನ ಕರ್ಣಭೇದಕ ಕೂಗು ನನಗೆ ಹುಚ್ಚು ಹಿಡಿಸುತ್ತಿದ್ದವು. ಸೂರ್ಯ ಮುಳುಗಿ ಕಾಡಿನಲ್ಲಿ ಮೌನ ಆವರಿಸುತ್ತ ಬಂದಂತೆ ನನಗೆ ಇವುಗಳಿಂದ ಸ್ವಲ್ಪ ಮುಕ್ತಿ ದೊರಕಿತು.

ಚಿರತೆಗಳು ಹೇಗೆ ನಿಶಬ್ದವಾಗಿ ನಡೆದುಬರುತ್ತವೆ ಎನ್ನುವುದೇ ಒಂದು ಸೋಜಿಗ. ಆಗಷ್ಟೇ ಕತ್ತಲಾಗುತ್ತಿತ್ತು. ಎಲೆಗಳ ಸಂದಿನಿಂದ ನಾನು ಇಣುಕಿ ನೋಡಿದರೆ ನನ್ನಿಂದ 10-15 ಅಡಿ ದೂರದಲ್ಲಿ ಬಂಡೆಯ ಇಳಿಜಾರಿನಲ್ಲಿ ನನಗೆ ಮುಖಮಾಡಿ ಚಿರತೆ ಕುಳಿತಿತ್ತು! ಅದು ಎಷ್ಟು ಹೊತ್ತಿನಿಂದ ಕುಳಿತಿತ್ತೋ ಗೊತ್ತಿಲ್ಲ. ಆದರೆ ಆಚೀಚೆ ಕುತ್ತಿಗೆಯನ್ನು ಹೊರಳಿಸುತ್ತಾ ಅಲ್ಲಿ ಯಾರೂ ಇಲ್ಲವೆಂದು ಖಚಿತಪಡಿಸಿಕೊಳ್ಳುತ್ತಿತ್ತು. ನಾನು ಅಲ್ಲಿ ಕುಳಿತಿರುವ ಸುಳಿವು ಅದಕ್ಕೆ ಸಿಕ್ಕಿರಲಿಲ್ಲ. ಚಿರತೆಗೂ ಕೇಳುವಷ್ಟು ಜೋರಾಗಿ ನನ್ನೆದೆ ಹೊಡೆದುಕೊಳ್ಳತೊಡಗಿತು. ನಿಧಾನವಾಗಿ ಸರಿಯುತ್ತಿದ್ದ ಆ ಕ್ಷಣಗಳ ನಿರೀಕ್ಷೆಯನ್ನು ನಾನು ಎಂದಿಗೂ ಮರೆಯಲಾರೆ. ಚಿರತೆ ನಿಧಾನವಾಗಿ ಎದ್ದು ಎಚ್ಚರಿಕೆಯಿಂದ ಪೊಟರೆಯ ಕಡೆ ನಡೆಯತೊಡಗಿತು. ಅದು ಕೆಲವು ಹೆಜ್ಜೆ ಮುಂದೆ ಬಂದನಂತರ ನನ್ನ ಬಂದೂಕನ್ನು ಸದ್ದಿಲ್ಲದೆ ಎತ್ತಿ ಅದರ ಭುಜಕ್ಕೆ ಗುರಿಹಿಡಿದೆ. ಢಮಾರ್ ಎಂದು ಹಾರಿದ ಗುಂಡೇಟು ತಗುಲಿ ಚಿರತೆ ಮೇಲಕ್ಕೆ ಜಿಗಿದು ಹಿಂದೆ ಇದ್ದ ಕಣಿವೆಯ ಕಡೆ ಉರುಳತೊಡಗಿತು. ಕಾಲುಗಳ



ಮೇಲೆ ನಿಲ್ಲಲು ಅದು ಮಾಡಿದ ಪ್ರಯತ್ನ ವಿಫಲವಾಗಿ ಅರೆ ಘರ್ಜನೆಯನ್ನು ಮಾಡುತ್ತಾ ನನ್ನನ್ನು ಹಾಯ್ದು ಕೆಳಗೆ ಉರುಳಿಹೋಯಿತು. ಅಗತ್ಯವಿದ್ದರೆ ಮತ್ತೊಮ್ಮೆ ಗುಂಡು ಹಾರಿಸಲು ಸಿದ್ಧನಾಗಿ ನಾನು ನಿಂತುಕೊಂಡೆ. ಮಗ್ಗುಲಾಗಿ ಬಿದ್ದು ಹೊರಳಾಡುತ್ತಿದ್ದ ಚಿರತೆ ನಿಶ್ಚಲವಾಗುವವರೆಗೆ ನಾನು ಗುರಿ ಹಿಡಿದು ನಿಂತಿದ್ದೆ.

ಬಂದೂಕಿನ ಸದ್ದು ಮತ್ತು ನನ್ನ ಕೂಗನ್ನು ಕೇಳಿದ ಬಾಲು ನನ್ನ ಕಡೆ ಓಡಿಬಂದ. ನಾನು ಉದ್ವೇಗದಿಂದ ಮರೆಯಿಂದ ಹಾರಿಕೊಂಡೇ ಹೋಗಿ ನನ್ನ ಮೊದಲ ಚಿರತೆ ಬೇಟೆಯ ಬಳಿ ನಿಂತಿದ್ದೆ. ನನಗೆ ದೊರೆತ ಬಹುಮಾನಕ್ಕೆ ನಾನು ಹೆಮ್ಮೆಪಡಲು ಕಾರಣಗಳಿದ್ದವು. ದಪ್ಪನಾದ ಕಪ್ಪು ಚರ್ಮ ಹೊಂದಿದ್ದ ಅದೊಂದು ಅತ್ಯುತ್ತಮ ಗಂಡು ಚಿರತೆಯಾಗಿತ್ತು.

## ಮೊದಲ ಹುಲಿಬೇಟೆ

ನಾನು ಒಂದು ತಿಂಗಳ ರಜ ಪಡೆದು ಡೆಹ್ರಾಡೂನ್‌ನಲ್ಲಿದ್ದ ನನ್ನ ಸೋದರನ ಬಳಿ ಒಂದುವಾರ ಕಳೆಯಲು ಹೋದೆ. ಕೆಲವು ಸಣ್ಣಪುಟ್ಟ ಪ್ರಾಣಿಗಳನ್ನು ಬೇಟೆಯಾಡುವುದು ನಮ್ಮ ಉದ್ದೇಶವಾಗಿತ್ತು. ಒಂದು ಮುಂಜಾವಿನಲ್ಲಿ ನಾವಿಬ್ಬರೂ 10-12 ಅಟ್ಟಾಳುಗಳನ್ನು ಕರೆದುಕೊಂಡು ಊರಿನ ಹತ್ತಿರವಿದ್ದ ಹುಲ್ಲುಗಾವಲಿನ ಕಡೆ ಹೋದೆವು. ಸಮತಟ್ಟಾದ ಹುಲ್ಲುಗಾವಲಿನ ಮಧ್ಯೆಮಧ್ಯೆ ಕಾಡುಕೋಳಿ, ನವಿಲು ಮತ್ತು ಕೆಲವೊಮ್ಮೆ ಕಾಡುಹಂದಿ ಮತ್ತು ಜಿಂಕೆಗಳಿಗೆ ಆಶ್ರಯ ನೀಡುತ್ತಿದ್ದ ಪೊದೆಕಾಡುಗಳಿದ್ದವು. ಸಣ್ಣಪುಟ್ಟ ಕಾಡುಪ್ರಾಣಿಗಳು ಹೊರಬರಲು ಇನ್ನೂ ಸಮಯವಿದ್ದುದರಿಂದ ನಾವು ಹುಲ್ಲುಗಾವಲಿನ ಅಂಚಿನಲ್ಲಿದ್ದ ಪೊದೆಕಾಡುಗಳಲ್ಲಿ ಜಿಂಕೆಗಳಿಗಾಗಿ ಹುಡುಕಲು ಮುಂದಾದೆವು.

ಇಬ್ಬನಿ ಬೀಳುತ್ತಿದ್ದ ಆ ತೀವ್ರ ಚಳಿಯ ಮುಂಜಾವಿನಲ್ಲಿ ಹುಲ್ಲುಗಳಿಂದ ಮಂಜು ಹನಿಹನಿಯಾಗಿ ಹರಿಯುತ್ತಿತ್ತು. ಬಯಲು ಪ್ರದೇಶವನ್ನು ದಾಟುತ್ತಿದ್ದಂತೆ ಅಲೆಮಾರಿ ಜನಾಂಗದವರು ವಸಂತಕಾಲವನ್ನು ಕಳೆಯಲು ಹಿಮಾಲಯದ ಕಡೆ ಗುಳೆ ಹೊರಟಿದ್ದುದು ನಮ್ಮ ಗಮನಕ್ಕೆ ಬಂದಿತು. ಅವರ ತಾಂಡಾದಿಂದ ಮುಗಿಲೆತ್ತರಕ್ಕೆ ಹೋಗುತ್ತಿದ್ದ ಹೊಗೆ, ಅಲ್ಲಲ್ಲಿ ಗುಂಪಾಗಿ ಮಲಗಿದ್ದ ಎಮ್ಮೆಗಳು ಕಂಡುಬಂದವು. ನಾವು ಮೊದಲ ಸೋವುಗೆಯ ಪ್ರಯತ್ನದಲ್ಲಿ ವಿಫಲರಾದ ಮೇಲೆ ಮುಂದಿದ್ದ ಕಾಡಿನ ಪ್ರಾಣಿಗಳಿಗೆ ತೊಂದರೆಯಾಗದಂತೆ ಕೇವಲ ಚಪ್ಪಾಳೆ ಹೊಡೆಯುತ್ತಾ ಮುಂದುವರಿದೆವು. ಎರಡು ಕಾಲ್ದಾರಿಗಳು ಸೇರುವ ಜಾಗದಲ್ಲಿ ನಾನು ನಿಂತುಕೊಂಡಿದ್ದೆ. ಆಗ ನನಗೆ ವೂಫ್‌ವೂಫ್ ಎನ್ನುವ ನವಿರಾದ ಸದ್ದು ಕೇಳಿತು. ಅಟ್ಟಾಳುಗಳು ಕರಡಿಯನ್ನು ನನ್ನ ಕಡೆ ಅಟ್ಟಿಸಿಕೊಂಡ ಬರುತ್ತಿರಬೇಕೆಂದು ನಾನು ಊಹಿಸಿದೆ. ಈ ಪ್ರಾಣಿಯ ಕೂಗು ನನ್ನ ಹತ್ತಿರ ಬರುತ್ತಿದ್ದಂತೆ ನಾನು ಹಿಮ್ಮಡಿಯನ್ನು ಎತ್ತಿ ಹುಲ್ಲಿನೊಳಗೆ ಗಮನಿಸುತ್ತಿದ್ದೆ. ಆ ಸದ್ದು ನನ್ನಿಂದ 50 ಅಡಿಗಳಷ್ಟು ಹತ್ತಿರ ಬಂದಾಗ ನಾನು ಹುಲಿಯೊಂದರ ಹಿಂಭಾಗದಲ್ಲಿ ನಿಂತಿದ್ದೇನೆಂಬ ಅರಿವಾಯಿತು. ಆಗ ನನ್ನ ಬಳಿ ಇದ್ದ ಬಂದೂಕು ಹುಲಿಬೇಟೆಗೆ ಸೂಕ್ತವಾದುದಾಗಿರಲಿಲ್ಲ. ಅದೇ ಸಮಯಕ್ಕೆ ಅಟ್ಟಾಳುಗಳಲ್ಲಿ ಒಬ್ಬ ಅರಿವಿಲ್ಲದೆ ಹುಲಿಯ ಹತ್ತಿರ ಬಂದಿದ್ದ. ಒಮ್ಮೆಲೆ ಹುಲಿಯನ್ನು ನೋಡಿದ ಅವನು ದೊಡ್ಡದಾಗಿ ರಕ್ತ ಹೆಪ್ಪುಗಟ್ಟುವಂತೆ ಕೂಗಿದ. ಅದೃಷ್ಟವಶಾತ್ ಹುಲಿ ಅವನ ಮೇಲೆ ಆಕ್ರಮಣ ಮಾಡದೆ ವಿರುದ್ಧ ದಿಕ್ಕಿನಲ್ಲಿ ಓಡತೊಡಗಿತು. ಅಲ್ಲಿಯವರೆಗೆ ಕಾಡಿನಲ್ಲಿ ನಾನು ಹುಲಿಯನ್ನು ನೋಡಿರಲಿಲ್ಲ. ಹಾಗಾಗಿ ನನ್ನ ಪ್ರಥಮ ಹುಲಿಬೇಟೆಗೆ ಇದು ಸೂಕ್ತ ಸಮಯವೆಂದುಕೊಂಡೆ. ಆ ಕ್ಷಣದಲ್ಲಿ ಗುಂಡನ್ನು ಹಾರಿಸುವುದು ಅಪಾಯಕಾರಿಯೆಂದು ತಿಳಿದಿದ್ದರೂ ನನ್ನೊಳಗಿನ ಒತ್ತಡವನ್ನು ತಾಳಲಾರದೆ ಓಡುತ್ತಿದ್ದ ಹುಲಿಯತ್ತ ಎರಡು ಗುಂಡು ಹಾರಿಸಿದೆ. ಪರಿಣಾಮ ಭಯಾನಕವಾಗಿತ್ತು. ದೊಡ್ಡದಾಗಿ ಘರ್ಜಿಸಿದ ಹುಲಿ ಎರಡು ಸುತ್ತು ತಿರುಗಿ ಅಟ್ಟಾಳುಗಳು ಬರುತ್ತಿದ್ದ ಕಡೆಗೇ ನುಗ್ಗಿತು. ಅದು ಹುಲ್ಲಿನಲ್ಲಿ ಮರೆಯಾಗುವಷ್ಟರಲ್ಲಿ ನಾನು ಮತ್ತೆ ಮೂರು ಗುಂಡುಗಳನ್ನು ಹಾರಿಸಿದೆ. ಜೊತೆಗೆ ಅಟ್ಟಾಳುಗಳಿಗೆ ದೂರ ಓಡುವಂತೆ ಕೂಗಿ ಹೇಳಿದೆ. ಅಷ್ಟರಲ್ಲಾಗಲೇ ಅವರು ಹಿಂದಕ್ಕೆ ಓಟಕಿತ್ತಿದ್ದರು. ಹತ್ತಿರದಲ್ಲೇ ಇದ್ದ ನನ್ನ ಸಹೋದರ ಪವಾಡಸದೃಶ್ಯವಾಗಿ ಹುಲಿಯಿಂದ ತಪ್ಪಿಸಿಕೊಂಡಿದ್ದ. ನಾವೆಲ್ಲಾ ಓಡುತ್ತಾ ಹುಲಿಯಿಂದ ದೂರ ಹೋಗಿ ಮತ್ತೆ ಸೇರಿ ನಮ್ಮ ಅನುಭವಗಳನ್ನು ಹಂಚಿಕೊಂಡೆವು. ಆಗಿನ ಪರಿಸ್ಥಿತಿ ಸಂಪೂರ್ಣ ನಮ್ಮ ವಿರುದ್ಧವಾಗಿತ್ತು. ಒಬ್ಬ ಅಟ್ಟಾಳು ಸೂಚಿಸಿದಂತೆ ಹತ್ತಿರದಲ್ಲೇ ಇದ್ದ ಆನೆಯೊಂದನ್ನು ತರಿಸಿಕೊಳ್ಳಲು ನಿರ್ಧರಿಸಿದೆವು. ಬಹಳ ಮುದಿಯಾಗಿ ದೃಷ್ಟಿ ಮಾಂದ್ಯವಾಗಿದ್ದರೂ ಅದೊಂದು ಆನೆ ಎನ್ನುವ ಕಾರಣಕ್ಕಾಗಿ ಅದರ ಮೊರೆಹೋಗಬೇಕಾಯಿತು. ಜೊತೆಗೆ ಒಂದು ದೊಡ್ಡ ಬಂದೂಕನ್ನೂ ನಾನು ತರಿಸಿಕೊಂಡೆ. ನಾಲ್ಕು ಜನ ಮರಹತ್ತುವವರನ್ನು ಕರೆದುಕೊಂಡು ಆನೆಯೊಂದಿಗೆ ನಾವು ಹೊರಟೆವು. ಹುಲಿ ಸತ್ತುಹೋಗಿರಬೇಕೆಂದು ನಾವು ಆಶಿಸುತ್ತಿದ್ದರೂ ನನಗೆ ಆ ನಿರೀಕ್ಷೆಯಿರಲಿಲ್ಲ.

ನಾನು ಹಿಂದೆ ನಿಂತಿದ್ದ ಜಾಗಕ್ಕೆ ಬಂದಾಗ ಮರವನ್ನೇರಿದ ಸಹಾಯಕರು ಹತ್ತಿರದ ಹುಲ್ಲುಗಳ ಮರೆಯಲ್ಲಿ ಹುಲಿ ಇರುವುದರ ಸೂಚನೆ ನೀಡಿದರು. ನಿಧಾನವಾಗಿ ಚಲಿಸುತ್ತಿದ್ದ ಆನೆ ಹುಲಿಯ ವಾಸನೆ ಹಿಡಿದಂತೆ ಸೊಂಡಿಲನ್ನು ನೆಲಕ್ಕೆ ಬಡಿಯುತ್ತಾ ನಿಂತುಬಿಟ್ಟಿತು. ತಕ್ಷಣ ಹುಲ್ಲಿನ ಮರೆಯಿಂದ ಹುಲಿಯ ಘರ್ಜನೆ ಕೇಳಿತು. ಭಯಭೀತವಾಗಿದ್ದ ಆನೆಗೆ ಸುಧಾರಿಸಿಕೊಳ್ಳಲು ಸಮಯ ನೀಡಿ ನಾನು ಹುಲ್ಲಿನ ಕಡೆ ಗುಂಡು ಹಾರಿಸುವುದು ಮತ್ತು ಹುಲಿ ನಮ್ಮ ಮೇಲೆ ದಾಳಿ ಮಾಡಿದರೆ ಗುಂಡು ಹಾರಿಸಲು ನನ್ನ ಸಹೋದರ ತನ್ನ ಬಂದೂಕಿನೊಡನೆ ಸಿದ್ಧನಾಗಿರುವುದು ಎಂದು ನಿರ್ಧರಿಸಿಕೊಂಡೆವು.

ನಾನು ಮೊದಲ ಗುಂಡು ಹಾರಿಸಿದೊಡನೆ ಹುಲಿ ಒಮ್ಮೆ ಜಿಗಿದು ಮತ್ತೆ ಹುಲ್ಲಿನಲ್ಲಿ ಮರೆಯಾಯಿತು. ಮತ್ತೊಮ್ಮೆ ಗುಂಡು ಹಾರಿಸಿದೊಡನೆ ಅದು ಜಿಗಿದು ನಾಗಾಲೋಟದಲ್ಲಿ ಓಡಿಹೋಯಿತು. ನಾವು ಹೆದರಿದ್ದ ಆನೆಯನ್ನು ಹುರಿದುಂಬಿಸುತ್ತಾ ನಿಧಾನವಾಗಿ ಮುನ್ನಡೆದೆವು. ಆನೆಯ ಹೆಜ್ಜೆಗಳು ಸ್ಥಿರವಾಗಿಲ್ಲದ್ದರಿಂದ ನಾನು ಹುಲಿಯ ತಲೆಗೆ ಮೂರು ಬಾರಿ ಇಟ್ಟಿದ್ದ ಗುರಿ ತಪ್ಪಿಹೋಯಿತು. ಅದೃಷ್ಟವಶಾತ್ ಕೊನೆಗೆ ಒಂದು ಗುಂಡನ್ನು ಹುಲಿಯ ಕಿವಿಯ ಒಳಗೆ ತೂರಿಸಿ ಅದಕ್ಕೆ ಅಂತ್ಯ ಹಾಡಿದೆ.

ಅದೊಂದು ಹೆಣ್ಣುಹುಲಿಯಾಗಿತ್ತು. ನಾನು ಮೊದಲು ಹೊಡೆದಿದ್ದ ಗುಂಡುಗಳು ಅದರ ದೇಹದ ಇತರ ಭಾಗಗಳಿಗೆ ಬಿದ್ದಿದ್ದರೂ ಮಾರಣಾಂತಿಕವಾಗಿರಲಿಲ್ಲ. ಸಾಮಾನ್ಯವಾಗಿ ಹುಲಿಗಳು ದಟ್ಟಕಾಡುಗಳಿಂದ ಹೊರಬರುವುದಿಲ್ಲ. ಆದರೆ ಅಲೆಮಾರಿಗಳ ಎಮ್ಮೆಗಳ ಮೇಲೆ ಆಕ್ರಮಣ ಮಾಡಲು ಬಂದಿದ್ದ ಇದು ಕಾಡಿಗೆ ಮರಳುವ ಮುನ್ನವೇ ಹುಲ್ಲು ಗಾವಲಿನಲ್ಲಿ ನಮಗೆ ಆಕಸ್ಮಿಕವಾಗಿ ಮುಖಾಮುಖಿಯಾಗಿತ್ತು. ಭಾರೀ ಘಟನೋಧದ ನಂತರ ನಮ್ಮ ಆನೆ ಹುಲಿ ಮತ್ತು ನಮ್ಮೆಲ್ಲರನ್ನೂ ಹೊತ್ತು ಘನತೆಯಿಂದ ಊರಿಗೆ ಮರಳಿತು.

(ಮುಂದುವರೆಯುವುದು)


Statement about ownership and other particulars of
...anjane Bodhane Prachodane Lankesh' Weekly,
...ngalore as required under Rule 8 of the Registration of
...wspapers (Central) Rule, 1956.

**FORM - IV**

(See Rule 8)

| | | |
|---|---|---|
| Place of Publication | : | Bangalore |
| Periodicity of Publication | : | Weekly |
| Printer's Name | : | Gauri Lankesh |
| Whether Citizen of India | : | Yes |
| Address | : | No. 9, E.A.T. Street, Basavanagudi, Bangalore-560 004. |
| Publisher's Name | : | Gauri Lankesh |
| Whether Citizen of India | : | Yes |
| Address | : | No. 9, E.A.T. Street, Basavanagudi, Bangalore-560 004. |
| Editor's Name | : | Gauri Lankesh |
| Whether Citizen of India | : | Yes |
| Address | : | No. 9, E.A.T. Street, Basavanagudi, Bangalore-560 004. |

...auri Lankesh, hereby declare that the particulars given above are ... to the best of my knowledge and belief.

...: 20.3.2017

Sd/-
GAURI LANKESH

# ಮುರಳಿ ಪ್ರಕರಣ ಸಿ.ಒ.ಡಿ ತನಿಖೆಯಾಗಲಿ


ಮುರಳಿ

ಇದು ಆರ್.ಚೊಕ್ಕನಹಳ್ಳಿ. ಚಿಕ್ಕಬಳ್ಳಾಪುರ ತಾಲೂಕಿನ ಪುಟ್ಟ ಹಳ್ಳಿ. ಗುಡಿಬಂಡೆಯಿಂದ ಕೇವಲ ಆರು ಕಿಲೋ ಮೀಟರ್ ದೂರದಲ್ಲಿರುವ ಕೇವಲ 30 ಮನೆಗಳಿರುವ ಹಳ್ಳಿ. ಅಲ್ಲೊಂದು ಪುಟ್ಟ ಕುಟುಂಬ. ಜಯಮ್ಮ ಮನೆಯ ಮುಖ್ಯಸ್ಥೆ. ನರಸಿಂಹಪ್ಪ ಆವರ ಗಂಡ. ವಯಸ್ಸಿದ್ದಾಗ ನರಸಿಂಹಪ್ಪ ಮರಳು ಹೊರುತ್ತಿದ್ದ. ಈಗ ಕೂಲಿ ಕೆಲಸ. ಜಯಮ್ಮ ಸಹ ಕೂಲಿಗೆ ಹೋಗುತ್ತಾರೆ. ಯಾವುದೇ ನಿರಾಶೆಗಳಿಲ್ಲದೆ ಮೂವರು ಮಕ್ಕಳನ್ನು ಪ್ರೀತಿಯಿಂದ ಆ ದಂಪತಿಗಳು ಸಾಕುತ್ತಿದ್ದರು. ಗಾಯಿತ್ರಿ ದೊಡ್ಡ ಮಗಳು. ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಎಂ.ಎ ಅರ್ಥಶಾಸ್ತ್ರದ ಎರಡನೇ ವರ್ಷದಲ್ಲಿ ಓದುತ್ತಿದ್ದಾಳೆ. ಎರಡನೇ ಮಗಳು ದ್ವಿತೀಯ ಪಿಯುಸಿ ವಾಣಿಜ್ಯಶಾಸ್ತ್ರ ಓದುತ್ತಿದ್ದಾಳೆ. ನನ್ನ ಈ ಲೇಖನ ಅಥವಾ ವರದಿಯ ಕೇಂದ್ರ ಬಿಂದು 'ಮುರಳಿ' ಮೂರನೇ ಮಗ. ಇಂದು ತಣ್ಣಗಾಗಿ ಉಸಿರಾಡದೇ ಭೂಮಿ ಹೊಕ್ಕಿ ಬರಿ ನೆನಪಾಗಿದ್ದಾನೆ. ಹೌದು ಗುಡಿಬಂಡೆ ಕೆರೆಯ ಪಕ್ಕದಲ್ಲಿ ನೇಣು ಬಿಗಿದ ಸ್ಥಿತಿಯಲ್ಲಿ ಪತ್ತೆಯಾಗಿದ್ದಾನೆ.

ಮುರಳಿ ಸರ್ಕಾರಿ ಪ್ರೌಢಶಾಲೆ ಗುಡಿಬಂಡೆಯಲ್ಲಿ 9 ನೇ ತರಗತಿ ಓದುತ್ತಿದ್ದ ಹುಡುಗ. ಅವನ ತಾಯಿ ಜಯಮ್ಮನಿಗೆ ಎರಡು ಹೆಣ್ಣು ಮಕ್ಕಳಾಗಿ ಸಂಬಂಧಿಕರು ಗಂಡಾಗಲಿಲ್ಲವೆಂದು ಜರೆಯುತ್ತಿದ್ದಾಗ, ನರಸಿಂಹಪ್ಪನಿಗೆ ಮತ್ತೊಂದು ಮದುವೆಗೆ ಹಿಂಸಿಸುತ್ತಿದ್ದಾಗ ಹುಟ್ಟಿದವನೇ ಮುರಳಿ. ಅಕ್ಕಂದಿರಂತೆಯೇ ಓದುವ ಅದಮ್ಯ ಆಸೆಯನ್ನಿರಿಸಿಕೊಂಡಿದ್ದ. ತನ್ನ ತಂದೆ ಮರಳು ಹೊತ್ತು ಮಂಡಿ ನೋವೆಂದು ಮಲಗಿದಾಗಲೆಲ್ಲಾ 'ಅಪ್ಪ ನಾನು ಚೆನ್ನಾಗಿ ಓದಿ ಕೆಲಸ ತಗೊಂಡು ನಿನ್ನ ಅಮ್ಮನ್ನ ಚೆನ್ನಾಗಿ ನೋಡ್ಕೋತಿನಿ. ನೀವು ಆಗ ಕೂಲಿಗೆ ಹೋಗದಂಗೆ ಮಾಡ್ತಿನಿ' ಎನ್ನುತ್ತಿದ್ದನಂತೆ. ಹೀಗೆ ಒಳ್ಳೆಯ ಕೆಲಸದ ಕನಸು ಕಾಣುತ್ತಿದ್ದ ಮುರಳಿ ಎಂದಿನಂತೆ ಜನವರಿ 18, 2017 ರಂದು ಶಾಲೆಗೆ ಬಂದ. ಆದರೆ ಮಧ್ಯಾಹ್ನದಷ್ಟೊತ್ತಿಗೆ ಮುರಳಿ ಜೀವನದಲ್ಲಿ ಆಕಸ್ಮಿಕ ಘಟನೆಯೊಂದು ನಡೆಯಿತು. ಮಧ್ಯಾಹ್ನದ ಸಮಯದಲ್ಲಿ ಆದೇ ಶಾಲೆಯ ಹತ್ತನೇ ತರಗತಿ ಓದುತ್ತಿದ್ದ ಸಾಯಿಗಗನ್ ಎಂಬ ವಿದ್ಯಾರ್ಥಿ ತನ್ನ ಇನ್ನಿಬ್ಬರು ಸ್ನೇಹಿತರೊಡನೆ ಏಕಾಏಕಿ ಮುರಳಿಯ ಮೇಲೆ ಹಲ್ಲೆ ಮಾಡಿದ. ಶಿಕ್ಷಕರು ಮಧ್ಯ ಪ್ರವೇಶಿಸಿ ಬುದ್ಧಿ ಹೇಳುವವರೆಗೂ ಥಳಿತಕ್ಕೊಳಗಾದನು ಮುರಳಿ. ಇದಕ್ಕೆ ಕಾರಣ ಮುರಳಿ ಸಾಯಿಗಗನ್ ತಂಗಿಯನ್ನು ಮಾತನಾಡಿಸಿದ್ದು. ಇದನ್ನು ಸಾಯಿಗಗನ್‌ಗೆ ಸಹಿಸಲಾಗಲಿಲ್ಲ! ತನ್ನ ತಂಗಿಯನ್ನು ಚುಡಾಯಿಸಿದ್ದಾನೆ ಎಂದು ಆರೋಪಿಸಿ ಥಳಿಸಿದ್ದಾನೆ.

ಆದರೆ ಮುರಳಿ ಎಂದಿನಂತೆ ಅದೆಲ್ಲವನ್ನೂ ಮರೆತು ಮನೆಗೆ ತೆರಳಿ ಮಾಮೂಲಿನಂತೆ ಪೋಷಕರೊಂದಿಗೆ ಮಾತನಾಡಿ ಮಲಗಿದ್ದಾನೆ. ಮಾರನೇ ದಿನ ಅಂದರೆ ಜನವರಿ 19 ರಂದು ಎಂದಿನಂತೆ ಶಾಲೆಗೆ ಹೋಗಿದ್ದಾನೆ. ಆದರೆ ಅಂದೂ ಸಹ ಅವನನ್ನು ಸಾಯಿಗಗನ್ ತಂಡ ಥಳಿಸಿದೆ. ಆದರೆ ಮುರಳಿ ಅಂದೂ ಸಹ ಮಾಮೂಲಿನಂತೆಯೇ ಮನೆಗೆ ಮರಳಿ ಬೆಳಗ್ಗೆ ಶಾಲೆಗೆ ಹೊರಟಿದ್ದಾನೆ. ಅಂದು ಜನವರಿ 20. ಮುರಳಿ ಕನಸುಮನಸಿನಲ್ಲೂ ನೆನೆಸಿರದ ಘಟನೆಯೊಂದು ಅವನ ಜೀವನದಲ್ಲಿ ನಡೆದುಹೋಯಿತು. ಶಾಲೆಗೆ ಬಂದು ಚೀಲವನ್ನು ಇಟ್ಟಿದ್ದ ಮುರಳಿಯನ್ನು ಮತ್ತೆ ಸಾಯಿಗಗನ್ ತಂಡ ಥಳಿಸಲು ಆರಂಭಿಸಿತು. ಸಾಯಿಗಗನ್ ಪೋಷಕರೂ ಶಾಲೆಗೆ ಬಂದಿದ್ದರು. ಸಾಯಿಗಗನ್ ತಂಡ ಮುರಳಿಯನ್ನು ಶಾಲಾ ಆವರಣದ ಹೊರಗೆ ಎಳೆದುಕೊಂಡು ಬಂದು ಥಳಿಸಲಾರಂಭಿಸಿತು.

ನಂತರ ಬೈಕಿನಲ್ಲಿ ಆದೆಲ್ಲಿಗೋ ಎಳೆದೊಯ್ಯಿತು. ಅಷ್ಟೆ. ಮಧ್ಯಾಹ್ನ 3 ಗಂಟೆಯಷ್ಟೊತ್ತಿಗೆ ತಂದೆ ನರಸಿಂಹಪ್ಪನಿಗೆ ತನ್ನ ಮಗ ನೇಣಿನಲ್ಲಿರುವುದು ತಿಳಿದು ಓಡಿಬಂದರು. ಎದೆ ಬಡಿದುಕೊಂಡು ಪ್ರಜ್ಞೆ ತಪ್ಪುವ ಸ್ಥಿತಿಯಲ್ಲಿದ್ದರು. ಅಲ್ಲಿಂದ ಏನೇನು ನಡೆಯಿತೋ ಒಂದೂ ತಿಳಿಯದ ಶಾಕ್‌ನಲ್ಲಿ ಕುಟುಂಬವಿತ್ತು. ಇಂದೂ ಸಹ ಅದೇ ಸ್ಥಿತಿಯಲಿದೆ. ಆದರೆ ಮುರಳಿಯದ್ದು ಆತ್ಮಹತ್ಯೆ ಎಂದು ಪೋಸ್ಟ್ ಮಾರ್ಟಂ ರಿಪೋರ್ಟ್ ಬಂದಿದೆ. ಥಳಿಸಿದ್ದಕ್ಕಾಗಿ ಆತ್ಮಹತ್ಯೆಗೆ ಪ್ರಚೋದನೆ ಎಂದು ಬಂಧಿಸಿದ್ದ ಬಾಲಾರೋಪಿಗಳಾದ ಸಾಯಿಗಗನ್ ಮತ್ತು ಇನ್ನಿಬ್ಬರನ್ನು ಬೇಲ್ ಮೇಲೆ ಬಿಡುಗಡೆ ಮಾಡಲಾಗಿದೆ.

ಆದರೆ ಮುರಳಿಯ ಪೋಷಕರು, ಸ್ಥಳೀಯ ದಲಿತ ಸಂಘರ್ಷ ಸಮಿತಿ ಮುಖಂಡರು ಹಾಗು ಸ್ಥಳೀಯ ನಾಗರಿಕರ ಪ್ರಕಾರ ಇದು ಕೊಲೆಯೆಂದೇ ಅನುಮಾನಿಸಲಾಗುತ್ತಿದೆ. ಮುರಳಿ ಥಳಿತದಿಂದ ಸತ್ತಿದ್ದು, ನಂತರ ನೇಣು ಹಾಕಿಕೊಂಡಿದ್ದಾನೆ ಎಂದು ಬಿಂಬಿಸಲು ಸಾಯಿಗಗನ್ ತಂಡದವರೊಂದಿಗೆ ಅವರ ಪೋಷಕರೂ ಸಹ ಕೈಜೋಡಿಸಿದ್ದಾರೆ ಎಂಬ ಅನುಮಾನವನ್ನು ಮುರಳಿ ಪೋಷಕರು ವ್ಯಕ್ತಪಡಿಸುತ್ತಿದ್ದಾರೆ. ಈ ಅನುಮಾನಗಳಿಗೆ ಪುಷ್ಠಿ ನೀಡುವಂತೆ ಪೊಲೀಸರು ಸಹ ನಡೆದುಕೊಂಡಿದ್ದಾರೆ. ಮುರಳಿಯ ತಂದೆ ಮಗನ ಸಾವಿನ ಆಘಾತದಲ್ಲಿರುವಾಗಲೇ ಅವರದ್ದೇ ಊರಿನ ಮೇಲ್ಜಾತಿ ಯುವಕನ ಕೈಲಿ ಅಲ್ಲಿನ ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ಗೌತಮ್‌ರವರು ಆತ್ಮಹತ್ಯೆ ಎಂಬಂತೆ ಹೇಳಿ ಬರೆಸಿ ನರಸಿಂಹಪ್ಪನ ಸಹಿ ಮಾಡಿಸಿ ಕೊಂಡಿದ್ದಾರೆ. ಪೊಲೀಸ್ ಶ್ವಾನದಿಂದ ತನಿಖೆಯಾಗಿಲ್ಲ, ನೇಣು ಬಿಗಿದಿರುವ ಮರವನ್ನು ಪರಿಶೀಲಿಸಿಲ್ಲ, ಏಕೆಂದರೆ ಮುರಳಿ ನೇಣಿನಲ್ಲಿ ಪತ್ತೆಯಾದ ಮರದ ಒಂದು ಕೊಂಬೆ ಮುರಿದಿದೆ. ನೇಣು ಹಾಕಿರುವ ಕೊಂಬೆ ತೀರ ಸಣ್ಣದ್ದಾಗಿದ್ದು ದೇಹ ಒದರುವಾಗ ನಿಜಕ್ಕೂ ತಡೆಯಲಾರದು. ನೇಣಿಗೆ ಯಾವುದೋ ಯುವತಿಯ ವೇಲು ಬಳಸಲಾಗಿದೆ. ಕೈಯಲ್ಲಿ ಶಾಲೆಯ ಐಡಿ ಕಾರ್ಡ್ ಇದೆ. ಶೂಗಳನ್ನು ಅಚ್ಚು ಕಟ್ಟಾಗಿ ಜೋಡಿಸಲಾಗಿದೆ. ಘಟನಾ ಸ್ಥಳಕ್ಕೆ ಸಾರ್ವಜನಿಕರನ್ನು ನಿರ್ಬಂಧಿಸಲಾಗಿಲ್ಲ, ದೇಹದ ಮೇಲಿನ ಬೆರಳಚ್ಚುಗಳನ್ನು ಸಂಗ್ರಹಿಸಲಾಗಿದೆಯೋ ಇಲ್ಲವೋ ತಿಳಿಯದು.

ಹಾಗೆಯೇ ಅದು ಶಾಲಾ ಸಮಯ. ಶಿಕ್ಷಕರಲ್ಲೊ... ಮುರಳಿಯನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗುತ್ತೇ... ಹೇಳಿ ಕರೆದುಕೊಂಡು ಹೋದರು ಎನ್ನಲಾಗುತ್ತಿದೆ. ... ಶವವಾಗಿ ಪತ್ತೆಯಾದ ಅದೇ ದಿನ ಸಾಯಿಗ... ಪೋಷಕರೂ ಸಹ ಶಾಲೆಗೆ ಬಂದಿದ್ದದ್ದು ಈ ಪ್ರಕರ... ನಿಗೂಢತೆಯನ್ನು ಹೆಚ್ಚಿಸಿದೆ.

ಒಟ್ಟಾರೆ ಈ ಪ್ರಕರಣದಲ್ಲಿ ದಲಿತ ಯು... ಮುರಳಿಯನ್ನು ಅಮಾನವೀಯವಾಗಿ ಕೊಲ್ಲಲಾ... ಎಂದೆನಿಸುತ್ತಿದೆ. ರಾಜಕೀಯ ಒತ್ತಡದಿಂದಾಗಿ ಪೊಲೀ... ಈ ಪ್ರಕರಣವನ್ನು ದುರ್ಬಲಗೊಳಿಸಿದ್ದಾರೆ ಎಂಬು... ಎದ್ದು ಕಾಣುತ್ತಿದೆ. ಮುರಳಿಯ ಪೋಷಕರು ಇದು ಕೊ... ಎಂದು ಹೇಳುತ್ತಿದ್ದರೂ ಪೊಲೀಸರ ಕಿವಿಗೆ ಕೇಳು... ಶವಪರೀಕ್ಷೆಯನ್ನು ಸ್ಥಳೀಯ ವೈದ್ಯರಿದ್ದರೂ ಬೆಂಗಳ... ವೈದ್ಯರಿಂದ ಶವಪರೀಕ್ಷೆ ಮಾಡಿಸಿರುವುದು ಅನುಮಾನ... ಇಮ್ಮಡಿಗೊಳಿಸಿದೆ.

ಇಷ್ಟೆಲ್ಲಾ ಅನಾಹುತ ನಡೆದಿದ್ದರೂ ಸಮಾಜ ಕಲ್ಯಾ... ಇಲಾಖೆಯಾಗಲೀ, ಸಾರ್ವಜನಿಕ ಶಿಕ್ಷಣ ಇಲಾಖೆಯಾಗ... ಮುರಳಿಯ ಪೋಷಕರನ್ನು ಸಂಪರ್ಕಿಸಿಲ್ಲ. ಶಾಲಾಸಮ... ದಲ್ಲಿಯೇ ಈ ಘಟನೆ ನಡೆದಿದ್ದರೂ ಶಾಲಾಡಳಿತ ಯಾವ... ಪ್ರತಿಕ್ರಿಯೆ ಮಾಡಿಲ್ಲ, ಅವರ ಮೇಲೆ ದೂರು ದಾಖಲಾ... ಶಾಲೆಗಳು ಉತ್ತಮ ಪ್ರಜೆಗಳನ್ನು ನಿರ್ಮಾಣ ಮಾಡು... ಎಂದು ನಾವೆಲ್ಲ ಹೇಳುತ್ತಿರುವಾಗ ಹತ್ತನೇ ತರ... ಹುಡುಗರು ಜಾತಿಮೇಲರಿಮೆಯನ್ನು ತಮ್ಮ ತಲೆಯ... ತುಂಬಿಕೊಂಡು ಇಂತಹ ಕೃತ್ಯವನ್ನು ಮಾಡುತ್ತಿದ್ದಾರೆ. ... ನಮ್ಮ ಶೈಕ್ಷಣಿಕ ವ್ಯವಸ್ಥೆಯ ಲೋಪವನ್ನು ಎತ್ತಿ ತೋರಿಸು...

ಅದೇನೇ ಇರಲಿ; ಮುರಳಿಯ ಸಾವು ಅನುಮಾನಾ... ವಾಗಿದೆ. ಕೊಲೆ ಎಂಬುದಕ್ಕೆ ಹಲವು ಸಾಕ್ಷಿಗಳಿವೆ. ಆದ್ದರಿ... ಈ ಪ್ರಕರಣವನ್ನು ಸಿ.ಒ.ಡಿಗೆ ವಹಿಸಬೇಕೆಂದು, ಮ... ಶವಪರೀಕ್ಷೆಯಾಗಬೇಕೆಂದು ಮುರಳಿಯ ಪೋಷಕರು ಹಾ... ಸಾರ್ವಜನಿಕರು ಆಗ್ರಹಿಸುತ್ತಿದ್ದಾರೆ. ಮತ್ತೊಂದು ಮನೆಯ... ಇಂತಹ ಘಟನೆಗಳಾಗಬಾರದೆಂದರೆ ನಿಷ್ಪಕ್ಷಪಾ... ತನಿಖೆಯಾಗಬೇಕಿದೆ.

■ ವರದಿಗಾ...

# ಯಡ್ಡಿಯ ಆರೋಪಗಳೆಲ್ಲ ವೀರಪ್ಪನ್ ಶಾಂತಿಮಂತ್ರದಂತಿದೆಯಲ್ಲ

ಕೆಲ ವರ್ಷಗಳ ಹಿಂದಿನ ಮಾತು. ಯಡ್ಡಿ ಬಿಜೆಪಿಗೆ ಸೆಡ್ಡುಹೊಡೆದು ಕೆಜೆಪಿ ಕಟ್ಟಿ ಚೆಡ್ಡಿಗಳ ವಿರುದ್ಧ ತೊಡೆತಟ್ಟದಂತಹ ಸಮಯ. ಆಗ ಇದೇ ಯಡ್ಡಿಯ ಮೇಲೆ ಇನ್ನಿಲ್ಲದ ವಾಗ್ದಾಳಿ ಮಾಡಿದ ಚೆಡ್ಡಿಗಳು ಮುಖ್ಯವಾಗಿ ಕೈಹಾಕಿದ್ದು ಆತನ ಭ್ರಷ್ಟಾಚಾರ ಹಾಗು ಜೈಲು ವಾಸದ ವಿಚಾರವನ್ನೇ. ಕನ್ನಡದ ಪನ್ನೀರ್‌ಸೆಲ್ವಂ ಸದಾನಂದ ಗೌಡರಂತೂ "ಈ ಯಡ್ಡಿ ಹೋದ ಮೇಲೆ ನಮ್ಮ ಬಿಜೆಪಿ ನಿಜಕ್ಕೂ ಸ್ವಚ್ಛವಾಯಿತು" ಎಂದು ಯಡ್ಡಿ ಎಂಥಾ ಪರಮ ಭ್ರಷ್ಟ ಎಂದು ನೇರವಾಗಿ ಹೀಯಾಳಿಸಿದ್ದರು. ನಂತರ ಹಳೆ ಗಂಡನ ಪಾದವೇ ಗತಿಯೆಂದು ಯಡ್ಡಿ ಮರಳಿ ಬಂದಾಗಲೂ ಬಿಜೆಪಿಯ ರಾಷ್ಟ್ರ ಹಾಗು ರಾಜ್ಯ ನಾಯಕರುಗಳು ಪಕ್ಷದಲ್ಲಿ ಈತನಿಗೆ ಉನ್ನತ ಸ್ಥಾನವನ್ನು ನೀಡಲು ಈ ಭ್ರಷ್ಟತೆಯ ಕಳಂಕದ ಕಾರಣಕ್ಕೆ ಹಿಂದೇಟು ಹಾಕಿ ನಿರಂತರವಾಗಿ ಕಡೆಗಣಿಸಿತ್ತು, ಕೊನೆಗೆ ಹಾಳೂರಿಗೆ ಉಳಿದವನೇ ಗೌಡ ಎಂಬಂತೆ ರಾಜ್ಯ ಬಿಜೆಪಿಯಲ್ಲಿ ಜಾತಿ ಇತ್ಯಾದಿಗಳ ಹಿನ್ನೆಲೆಯಲ್ಲಿ ಸಾಮೂಹಿಕ ನಾಯಕತ್ವದ ವರ್ಚಸ್ಸು ಯಡ್ಡಿಯನ್ನು ಬಿಟ್ಟರೆ ಇನ್ಯಾರಿಗೂ ಇಲ್ಲವೆಂಬ 'ಅರ್ಹತೆ'ಯ ಆಧಾರದಲ್ಲಿ ಯಡ್ಡಿಗೇ ಪಕ್ಷಾಧಿಕಾರವನ್ನು ಅನಿವಾರ್ಯವಾಗಿ ನೀಡಲೇಬೇಕಾಗಿ ಬಂತು. ಇಂತಹ ಪರಮ ಭ್ರಷ್ಟ ಯಡ್ಡಿ ತಾನು ಕೆಸರ ಕೂಪದಲ್ಲೇ ಮುಳುಗಿದ್ದರೂ ಬೇರೆಯವರ ಮುಖದಲ್ಲಿನ ಧೂಳನ್ನು ಎತ್ತಿ ಆಡಿ ಇದೀಗ ನಗೆಪಾಟಲೀಗೀಡಾಗುತ್ತಿದ್ದಾನೆ.


ಮೇಲ್ನೋಟಕ್ಕಿದು ಖುದ್ದು ಯಡ್ಡಿರಾಯನೇ ಸಿಎಮ್ ಸಿದ್ದರಾಮಯ್ಯನ ವಿರುದ್ಧ ಕಾಲು ಕೆದರಿ ಜಗಳಕ್ಕೆ ಹೊರಟಂತೆ ಕಾಣಿಸುತ್ತಿದ್ದರೂ ತೆರೆಮರೆಯ ಕೈಗಳು ನಿಜಕ್ಕೂ ಯಡ್ಡಿಯದ್ದಲ್ಲ. ಕುಖ್ಯಾತ ಆಪರೇಷನ್ ಕಮಲ ನಡೆಸಿ ಅಧಿಕಾರ ಸಿಕ್ಕಿದರೂ ಅದನ್ನು ಉಳಿಸಿಕೊಳ್ಳಲು ಮೂರ್ನಾಲ್ಕು ತಿಂಗಳಿಗೊಮ್ಮೆ ರೆಸಾರ್ಟ್ ರಾಜಕಾರಣ ಮಾಡುತ್ತಿದ್ದ ಈ ಯಡ್ಡಿ ಆಪರೇಷನ್ ಕಮಲ ಹಾಗು ರೆಸಾರ್ಟ್ ರಾಜಕಾರಣಕ್ಕೆ ಸುರಿದ ಕೋಟಿಗಟ್ಟಲೆ ಹಣಕ್ಕೆ ಲೆಕ್ಕವೇ ಇರಲಿಲ್ಲ, ರೆಡ್ಡಿಯ ಹಡಬೆ ಹಣದ ಆಧಾರದಲ್ಲೇ ತಾನು ಅಧಿಕಾರ ನಡೆಸಿದ್ದು ಎಂಬ ಅರಿವು ಯಡ್ಡಿಗೂ ಇದೆ. ಆದರೂ ತನ್ನ ಅಸ್ತಿತ್ವ ಉಳಿಸಿಕೊಳ್ಳುವ ಸಲುವಾಗಿ ಗಾಳ ಹಾಕಿ ಹಿಡಿಯಲ್ಪಟ್ಟ ಸಿದ್ದುವಿನ ಮಾಜಿ ಆಪ್ತ ಶ್ರೀನಿವಾಸ್ ಪ್ರಸಾದ್ ಮೊದಲಾದವರ ನೆರವಿನಿಂದ "ವಿಭೀಷಣ ಪ್ರಯೋಗ"ವನ್ನು ಯಡ್ಡಿ ಇಲ್ಲಿ ಪ್ರಯೋಗಿಸ ಹೊರಟಿದ್ದಾರಷ್ಟೆ.

ಹಿಟ್ಲರ್ ಅನುಯಾಯಿಗಳು ಯಾವತ್ತಿದ್ದರೂ ಟೀಕೆ, ವಿರೋಧ, ಅಪಸ್ವರವನ್ನು ಎಂದಿಗೂ ಸಹಿಸುವುದಿಲ್ಲ, ಬಲಾಢ್ಯವೋ ಡಮ್ಮಿಯೋ ದೇಶದಲ್ಲಿ ಹೆಸರು.ಓಂದು ಕಾಂಗ್ರೆಸ್ ಎನ್ನುವ ವಿರೋಧ ಪಕ್ಷವಿದೆ. ಸದ್ಯಕ್ಕೆ ಕರ್ನಾಟಕದಲ್ಲಿ ಗಟ್ಟಿಯಾಗಿರುವ ಅದನ್ನು ಇಲ್ಲವಾಗಿಸುವ (ಕಾಂಗ್ರೆಸ್ ಮುಕ್ತ) ಡೀಲನ್ನು ಅಮಿತ್ ಷಾ ರಾಜ್ಯದ ಚೆಡ್ಡಿಗಳ ರಾಜ್ಯಾಧ್ಯಕ್ಷ ಯಡ್ಡಿಗೆ ನೀಡಲಾಗಿದ್ದನ್ನು ಯಡ್ಡಿ ಡೈರಿ ಹೆಸರಲ್ಲಿ ಈಗ ನಿರ್ವಹಿಸಹೊರಟಿದ್ದಾರಷ್ಟೆ. ಆದರೆ ಪರಮ ಭ್ರಷ್ಟ ಯಡ್ಡಿಯ ಈ ಓರಾಟ ನಮ್ಮ ವೀರಪ್ಪಣ್ಣನ ಶಾಂತಿಮಂತ್ರ ಪಠಣದಂತೆ ಕೇಳಿಸ್ತಿರೋದು ಮಾತ್ರ ವಿಚಿತ್ರವಾದರೂ ಸತ್ಯ.

ನವೆಂಬರ್‌ನ ನೋಟ್ ಬ್ಯಾನ್ ಬಳಿಕ ನಡೆದ ಐಟಿ ದಾಳಿಗಳೆಲ್ಲ ಕೇವಲ ಕಾಂಗ್ರೆಸ್ ನಾಯಕರಿಗಷ್ಟೇ ಸೀಮಿತಗೊಂಡವು. ರೆಡ್ಡಿಯ ಭರ್ಜರಿ ಮದುವೆ, ಗಡ್ಕರಿಯ ಮಗಳ ಭರ್ಜರಿ ಮದುವೆಗಳೆಲ್ಲ ಯಾರಿಗೂ ಬೇಡವಾದವು. ಇವನ್ನೆಲ್ಲ ನೋಡಿದರೆ ಇದೊಂದು ವ್ಯವಸ್ಥಿತ ತಂತ್ರದಂತೆ ಯಾರಿಗೇ ಆದರೂ ಕಾಣಿಸದೇ ಇರದು. ಸಿದ್ದರಾಮಯ್ಯ ತನ್ನ ಕುರ್ಚಿ ಉಳಿಸಿಕೊಳ್ಳಲು ಹೈಕಮಾಂಡ್‌ಗೆ ಕೋಟಿಗಳ ಕಪ್ಪ ಕೊಟ್ಟ ಸುದ್ದಿಯನ್ನು ಯಡ್ಡಿಯನ್ನು ಬಿಟ್ಟು ಬೇರೆ ಯಾರಾದರೂ ಅಂದಿದ್ದರೆ ಅದಕ್ಕೊಂದು ಬೆಲೆಯಿತ್ತು, ಆದರೆ ಈ ವಿಚಾರದಲ್ಲಿ ಯಡಿಯೂರಪ್ಪನಿಗೆ ಭ್ರಷ್ಟಾಚಾರದ ವಿಚಾರ ಮಾತನಾಡುವ ಯಾವ ನೈತಿಕ ಅರ್ಹತೆಯೂ ಉಳಿದಿಲ್ಲ, ಇದೇ ಯಡ್ಡಿಯ ಅಧಿಕಾರದ ವೇಳೆಯಲ್ಲಿ ಈಗಿನ ವಿದೇಶಾಂಗ ಸಚಿವೆ ಹಾಗು ಮುಂದಿನ ರಾಷ್ಟ್ರಪತಿ ಅಭ್ಯರ್ಥಿ ಸುಷ್ಮಾ ಸ್ವರಾಜ್ ವರಮಹಾಲಕ್ಷ್ಮಿ ಹಬ್ಬದ ನೆಪದಲ್ಲಿ ರೆಡ್ಡಿ ಮನೆಗೆ ಬಂದು ಲಕ್ಷ್ಮಿಯನ್ನು "ಉಡಿ ತುಂಬಿಸಿಕೊಂಡು" ಹೋಗುತ್ತಿದ್ದ ವಿಚಾರ ಯಾರಿಗೆ ತಾನೆ ಗೊತ್ತಿಲ್ಲ? ಇದೂ ಕೂಡ ಒಂದು ರೀತಿಯ ಕಪ್ಪವೇ ತಾನೇ? ಇಂತಹ ಗಣಿಕಳ್ಳರ ವರಲಕ್ಷ್ಮಿ 'ಅಮ್ಮ' ರೆಡ್ಡಿಯ ಮಗಳು ವಧುವಾಗಿ ಹಸೆಮಣೆಯೇರಿದಾಗ ಮಾತ್ರ ಬಾರದೇ ಕಿಡ್ನಿಯ ನೆಪ ಹೇಳಿ ತಪ್ಪಿಸಿಕೊಂಡರು.

ಗಣಿಧೂಳು ರೌಡಿಸಮ್‌ನಲ್ಲೇ ಮುಳುಗಿದ್ದ ಗಣಿಕಳ್ಳರು ಒಂದುವೇಳೆ ಡೈರಿ ಬರೆಯುವ ಅಭ್ಯಾಸವನ್ನೂ ಇಟ್ಟುಕೊಂಡಿದ್ದರೆ ಇದನ್ನೆಲ್ಲ ದಾಖಲಿಸುತ್ತಿದ್ದರೇನೋ? ಆದರೆ ಕಳ್ಳರಿಗೂ ಒಂದು ನಿಯತ್ತನ್ನೋದಿದೆ, ಮುಂದಾಲೋಚನೆಯ ಲೆಕ್ಕಾಚಾರವೂ ಇದೆ. ಮುಂದೆ ಈ ಅಮ್ಮಗಾರು ನಮ್ಮ ದುಡ್ಡಿನ ಋಣಕ್ಕೆ ಪ್ರತಿಯಾಗಿ ಕೇಂದ್ರದಲ್ಲಿ ಉನ್ನತ ಸ್ಥಾನ ಕೊಟ್ಟು ಸಹಕರಿಸಬಹುದೆಂಬ ಕಪಟರಹಿತ ಮನಸ್ಸಿನಿಂದ ಅವರು ಬಾಚಿ ಬಾಚಿ ಅಮ್ಮನ ಚೀಲವನ್ನು ತುಂಬಿದ್ದೇ ಬಂತು. ಆದರೆ, ಅಮ್ಮ ಮಾತ್ರ ಮಗಳ ಮದುವೆಗೆ ನೂರು ರೂಪಾಯಿ ಮುಯ್ಯಿ(ಉಡುಗೊರೆ)ಯನ್ನೂ ಹಾಕಲು ಬಾರದೇ ಮೋಸ ಮಾಡಿದಳು. ಎಂಥಾ ದುರ್ವಿಧಿ..

-ಓದುಗ, ಬೆಂಗಳೂರು




ಗೋವ ಮತ್ತು ಪಂಜಾಬ್ ಚುನಾವಣೆಗಳು ನಡೆದು ಎರಡು ವಾರದ ಮೇಲಾಯ್ತು. ಫಲಿತಾಂಶಕ್ಕೆ ಇನ್ನೂ ಎರಡು ವಾರ ಕಾಯಬೇಕು! ಏಕೆ?

ಇದು ಕಂಪ್ಯೂಟರ್ ಯುಗ! ಪ್ರತಿಯೊಂದಕ್ಕೂ ಶೀಘ್ರ, ಅತಿ ಶೀಘ್ರ ಎನ್ನುವ ಕಾಲ. ಹೀಗಿರುವಾಗ ಚುನಾವಣಾ ಫಲಿತಾಂಶವನ್ನು ತಿಳಿದುಕೊಳ್ಳಲು ಜನ ಕಾತರರಾಗಿರುವುದು ಅತ್ಯಂತ ಸಹಜವಾಗಿದೆ. ಅಮೆರಿಕದಲ್ಲಿ ಸಂಜೆ 6ಕ್ಕೆ ಚುನಾವಣೆ ಮುಗಿದರೆ ಅದೇ ರಾತ್ರಿ 10ಕ್ಕೆ ಫಲಿತಾಂಶ ಪ್ರಕಟವಾಗುತ್ತದೆ. ನಮ್ಮ ನೆರೆ ರಾಷ್ಟ್ರಗಳಾದ ಶ್ರೀಲಂಕ, ಪಾಕಿಸ್ತಾನಗಳಲ್ಲೂ ಸಹ ಅಷ್ಟೇ ಶೀಘ್ರವಾಗಿ ಚುನಾವಣಾ ಫಲಿತಾಂಶವನ್ನು ಪ್ರಕಟಿಸಲಾಗುತ್ತದೆ. ಹಾಗಿರುವಾಗ, ಭಾರತದಲ್ಲಿ ಚುನಾವಣಾ ಫಲಿತಾಂಶಕ್ಕಾಗಿ ತಿಂಗಳುಗಟ್ಟಲೆ ಕಾಯಬೇಕು !?!? ಏಕೆ???

ಇದು ಪ್ರತಿಯೊಬ್ಬ ಭಾರತೀಯನೂ ನಾಚಿಕೆಪಟ್ಟುಕೊಳ್ಳಬೇಕಾದ ಸಂಗತಿಯಲ್ಲವೇ?

ಸರ್ಕಾರಿ ಮೂಲಗಳ ಪ್ರಕಾರ, ದೇಶದ ಬೇರೆ ರಾಜ್ಯಗಳಲ್ಲಿ ಚುನಾವಣೆಗಳು ನಡೆಯುತ್ತಿರುವುದರಿಂದ, ಈ ರಾಜ್ಯಗಳ ಫಲಿತಾಂಶ ಆ ರಾಜ್ಯಗಳಲ್ಲಿ ನಡೆಯುವ ಚುನಾವಣೆಗಳ ಮೇಲೆ ಪರಿಣಾಮ ಬೀರುವುದಂತೆ! ... ಅದರ ಅರ್ಥ ನಮ್ಮ ಜನರಿಗೆ ಚುನಾವಣೆಗಳಲ್ಲಿ ಮ... ಚಲಾಯಿಸುವುದು ಹೇಗೆ ಎಂಬುದೂ ಗೊತ್ತಿಲ್ಲ ಎಂದಾಯ... ಇದು ಭಾರತೀಯರಿಗೆ ಇನ್ನೂ ಹೆಚ್ಚು ನಾಚಿಕೆಗೇಡಿ... ಸಂಗತಿ! ಏಕೆಂದರೆ ಭಾರತ ಇಡೀ ವಿಶ್ವದಲ್ಲಿ ಅತಿದೊ... ಪ್ರಜಾಪ್ರಭುತ್ವ ರಾಷ್ಟ್ರ ಎಂದು ನಾವು ಹೆಮ್ಮೆಯಿ... ಹೇಳಿಕೊಳ್ಳುವುದುಂಟು. ಜನರಿಗೆ ಸರಿಯಾಗಿ ಮ... ಚಲಾಯಿಸುವುದೇ ಬರಲ್ಲ ಅಂದಮೇಲೆ ಅದು ಪ್ರಜಾಪ್ರಭು... ಆಗಲು ಸಾಧ್ಯವೇ???

ಅಂದರೆ, ಸ್ವಾತಂತ್ರ್ಯ ಬಂದು 70 ವರ್ಷ ಆದರೂ... ನಮ್ಮ ನಾಯಕರು ಜನರನ್ನು ಮತ ಹಾಕಲು ಅರ್ಹರನ್ನಾ... ಮಾಡಿಲ್ಲ!

ಹೀಗಿರುವಾಗ ಚುನಾವಣಾ ಫಲಿತಾಂಶ ಕಟ್ಟಿಕೊಂಡು... ಏನು ಮಾಡೋದು ಎನ್ನುವಿರಾ?? ಅದೂ ಸರಿಯೇ...

ಆದರೆ ಈವರೆಗೂ ನಮ್ಮನ್ನಾಳಿದವರು, ನಾವೇ... ಆರಿಸಿದವರಾಗಿದ್ದರು; ನಮ್ಮಿಂದಲೇ ಅಧಿಕಾ... ಪಡೆದವರಾಗಿದ್ದರು. ಆದಾಗ್ಯೂ ಅವರು ಕೇವಲ ಒಂದು... ಒಂದು ಸರಳವಾದ ಕೆಲಸವನ್ನು ಮಾಡಿದ್ದರೆ, ಇಂದು ಈ... ನಾಚಿಕೆಗೇಡಿನ ಪರಿಸ್ಥಿತಿಯಲ್ಲಿ ದೇಶ ಇರುತ್ತಿರಲಿಲ್ಲ... ಅದೇನೆಂದರೆ, ಪ್ರತಿಯೊಬ್ಬರಿಗೂ ಉಚಿತವಾಗಿ ಉತ್ತಮ... ಹಾಗೂ ಸಮಾನವಾದ ವಿದ್ಯಾಭ್ಯಾಸವನ್ನು ಕೊಟ್ಟಿದ್ದರೆ, ಖಂಡಿ... ಇಂದು ಸದೃಢವಾದ ಪ್ರಜಾಪ್ರಭುತ್ವ ದೇಶದಲ್ಲಿ... ಬೇರೂರಿರುತ್ತಿತ್ತು. ಸದೃಢ ಪ್ರಜಾಪ್ರಭುತ್ವ ಇರುವ... ಪ್ರಗತಿಯೂ ತಂತಾನೆ ಬಂದು ನೆಲೆಸುತ್ತದೆ. ಈ... ಸಂದರ್ಭದಲ್ಲಿ ಅದಕ್ಕಿಂತ ಹೆಚ್ಚಿನದನ್ನು ಯಾರು ತಾನೇ... ಬಯಸುತ್ತಾರೆ?

-ವೀರಖ್ಯಾತಯ್ಯ, ಬೆಂಗಳೂರು

ವಿ.ಸೂ. : ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ... ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು. ನಿಮ್ಮ ಪ್ರತಿಕ್ರಿಯೆಗಳನ್ನು 9980331427 ನಂಬರ್‌ಗೂ ... ಚಿಕ್ಕದಾಗಿ ಮತ್ತು ಚೊಕ್ಕದಾಗಿ SMS ಕಳುಹಿಸಬಹುದು.

ಬೆಂಗಳೂರು ಅಂತರರಾಷ್ಟ್ರೀಯ ಸಿನಿಮೋತ್ಸವ Bengaluru

■ ಕೆ.ಫಣಿರಾಜ್ 3

# ದುರಂತದ ಬಾಗಿಲಲ್ಲಿ ಎರಡು ಯುವ ಬದುಕುಗಳು

ರೋಡ್‌ಟು ಮಂಡಲಾಯ್ (2016)
ನಿರ್ದೇಶನ: ಮಿಡಿ ಜೆಡ್ ದೇಶ: ತೈವಾನ್

34ರ ಯುವಕ ಮಿಡಿ ಹುಟ್ಟಾ ಬರ್ಮಾ(ಮೈನ್ಮಾರ್)ದವನು. ಆತನ ದೆತಾಯಿಗಳು ಚೀನಾದಿಂದ ವಲಸೆ ಬಂದವರು. ಉನ್ನತ ವಿದ್ಯಾಭ್ಯಾಸಕ್ಕಾಗಿ ವಾನಿಗೆ ಹೋದವನು, ಅಲ್ಲಿನ ಪೌರತ್ವ ಪಡೆದು, ಅಲ್ಲೇ ನೆಲೆ ನಿಂತಿರುವನು ಮ್ಸೊ- ಈ ಸಿನಿಮಾವನ್ನು ಅರ್ಥಮಾಡಿಕೊಳ್ಳಲು ಉಪಯುಕ್ತ). 2011ರಿಂದ ಡಿದು ಇಲ್ಲಿಯವರೆಗೆ ಒಂದು ಕಿರುಚಿತ್ರ, 2 ಸಾಕ್ಷ್ಯಚಿತ್ರ ಹಾಗು 4 ಕಥಾ ತ್ರಗಳನ್ನು ಮಿಡಿ ನಿರ್ದೇಶಿಸಿದ್ದಾನೆ. 2014ರ ಬರ್ಲಿನ್ ಚಿತ್ರೋತ್ಸವದಲ್ಲಿ ದರ್ಶಿತವಾದ 'ಐಸ್ ಪಾಯ್ಸನ್' ಸಿನಿಮಾದ ಮೂಲಕ ಜಾಗತಿಕ ಸಿನಿಮಾದ ಮನ ಸೆಳೆದವನು. ಪ್ರಸ್ತುತ ಸಿನಿಮಾವು ವೆನಿಸ್ ಸಿನಿಮ ಹಬ್ಬದಲ್ಲಿ ಪ್ರದರ್ಶಿತವಾಗಿ ಂದು ಪ್ರಶಸ್ತಿಯನ್ನೂ ಪಡೆದಿದೆ.

ಸಿನಿಮಾದ ಕಥಾಸಾರಾಂಶ

ಹ ಹರೆಯದ ಯುವತಿ ಲಿಂಯಾಂಕಿ, ಬರ್ಮಾದಲ್ಲಿನ ಉದ್ಯೋಗರಹಿತ ಡತನದಿಂದ ಪಾರಾಗಿ, ಒಂದು ಮಾನವಂತ ಉದ್ಯೋಗ ಪಡೆದು ಬದುಕಲು ನೂನುಬಾಹಿರ ಮಾರ್ಗದಲ್ಲಿ ಥೈಲ್ಯಾಂಡ್ ಪ್ರವೇಶಿಸುತ್ತಾಳೆ. ಈ ಕಠಿಣ ಕ್ಷಣದ ಹೊತ್ತಲ್ಲಿ ಯುವಕ ಗುವೊನ ಸಹಕಂಪನದ ಪರಿಚಯವಾಗುತ್ತದೆ. ಬ್ಯಾಂಕಾಕ್‌ನ ಹೊರವಲಯದಲ್ಲಿ ಬದುಕುತ್ತಿರುವ ತನ್ನ ಬರ್ಮಾದ ಗೆಳತಿಯ ಸಹಾಯವನ್ನಷ್ಟೇ ನಂಬಿ ಲಿಂಯಾಂಕಿ ಬಂದಿರುತ್ತಾಳೆ. ಅವಳ ಗೆಳತಿಯ ಸಹಾನುಭೂತಿಯ ಆಶ್ರಯ ದೊರಕಿದರೂ, ಅವಳ ಬಳಿ ಕಾನೂನುರೀತ್ಯಾ ಅವಶ್ಯಕವಾದ 'ಉದ್ಯೋಗ ಪರವಾನಗಿ ಪತ್ರ'ವಿರದ ಕಾರಣ, ಅವಳು ಬಯಸಿದ ನಯವಿನಯದ ಮಾನವಂತ ಕೆಲಸಗಳು ಅವಳಿಗೆ ಮರೀಚಿಕೆಯಾಗುತ್ತವೆ. ಉಳಿಯಲು ಅವಳು ಹೊಟೇಲೊಂದರಲ್ಲಿ ವಸತಿಸಹಿತ ಮುಸರೆ ತೊಳೆಯುವ ಕೆಲಸ ಮಾಡತೊಡಗುತ್ತಾಳೆ. ಕಾನೂನುಬಾಹಿರ ಭ್ರಷ್ಟಮಾರ್ಗದಲ್ಲಿ 'ಉದ್ಯೋಗ ಪರವಾನಗಿ ಪತ್ರ'ವನ್ನು ಸ್ವಲ್ಪ ಕಾಸು ಖರ್ಚು ಮಾಡಿದರೆ ಪಡೆಯುವ ಸಂಪರ್ಕಗಳು ಇವೆ ಎಂದು ತಿಳಿದನಂತರ, ಅದನ್ನು ಪಡೆಯಲು ಹಣ ಉಳಿಸುವುದರಲ್ಲಿ ಗಳು ಗಮನ ಹರಿಸುತ್ತಾಳೆ. ಈ ನಡುವೆ ಆ ಹೋಟೆಲಿನ ಮೇಲೆ ಅಧಿಕಾರಿಗಳು ದಾಳಿ ಮಾಡಿ, ಲಿಂಯಾಂಕಿಯನ್ನೂ ಸೇರಿದಂತೆ, ಕಾನೂನುಬಾಹಿರ ವಲಸಿಗರನ್ನು ಬಂಧಿಸುತ್ತಾರೆ. ಹೊಟೇಲಿನ ಮಾಲಿಕನಿಗೆ ಇದು ಹೊಸದೇನೂ ಅಲ್ಲವಾಗಿ, ಲಂಚ ಕೊಟ್ಟು ಅವರನ್ನೆಲ್ಲ ಬಿಡಿಸುತ್ತಾನೆ; ಆದರೆ 'ಉದ್ಯೋಗ ಪರವಾನಗಿ ಪತ್ರ' ತರದೆ ಮತ್ತೆ ಕೆಲಸ ಕೊಡುವುದಿಲ್ಲ ಎಂದು ಬೀದಿಗೆ ಬಿಟ್ಟುಹೋಗುತ್ತಾನೆ. ಲಿಂಯಾಂಕಿ ಆ ಮುಸುರೆ ತೊಳೆಯುವ ಕೆಲಸ ತೊರೆದು ತಾನು ಕೆಲಸ ಮಾಡುತ್ತಿರುವ ಬಟ್ಟೆಗಿರಣಿಯಲ್ಲಿ ಕೆಲಸ ಮಾಡಿದರೆ ಹೆಚ್ಚು ಸಂಬಳ ಸಿಗುತ್ತದೆ ಎಂದು ಹಿಂದೊಮ್ಮೆ ಗುವೊ ಪುಸಲಾಯಿಸಿರುತ್ತಾನೆ; ಆದರೆ ಲಿಂಯಾಂಕಿ ಸ್ವಾಭಿಮಾನದಿಂದ ನಿರಾಕರಿಸಿರುತ್ತಾಳೆ; ಈಗ ಮತ್ತೊಮ್ಮೆ ಅವನ ಸಹಾನುಭೂತಿಯಲ್ಲಿ ಬಟ್ಟೆಗಿರಣಿಯಲ್ಲಿ ಕೆಲಸ ದೊರಕುತ್ತದೆ. ಇಷ್ಟೆಲ್ಲದರ ನಡುವೆಯೂ ಲಿಂಯಾಂಕಿ, 'ಉದ್ಯೋಗ ಪರವಾನಗಿ ಪತ್ರ' ದೊರಕಿಸಿಕೊಳ್ಳುವ ಛಲ ಬಿಟ್ಟಿರುವುದಿಲ್ಲ. ಬದುಕಿನ ಈ ಗತಿಯಲ್ಲಿ ಲಿಂಯಾಂಕಿ ಗುವೊರ ನಡುವೆ ವಯೋಸಹಜ ಪ್ರೇಮಾಂಕುರವಾಗಿರುತ್ತದೆ - ಅದಕ್ಕೆ ಸಹ ನಿರಾಶ್ರಿತರ ಬದುಕಿನ ಪಾಡಿನ ಬೆನ್ನೆಲುಬೂ ಇರುತ್ತದೆ. ಗುವೊಗೆ 'ಉದ್ಯೋಗ ಪರವಾನಗಿ ಪತ್ರ'ಕ್ಕಾಗಿನ ಬಡಿದಾಟಕ್ಕಿಂತ ಈಗಿರುವ ಸ್ಥಿತಿಯಲ್ಲೇ ಒಂದು ಸಂಸಾರ ಸ್ಥಾಪಿಸಿಕೊಳ್ಳುವುದು ಸರಿಯೆನಿಸಿದರೆ, ಲಿಂಯಾಂಕಿಗೆ ಆ ಸ್ಥಿತಿ ಶರಣಾಗತಿ ಒಪ್ಪಿತವಲ್ಲ; ಆಕೆ ಗುವೊ ಹಾಗು ತನ್ನಂತಹ ಹತ್ತಾರು ಸಹ ನಿರಾಶ್ರಿತರಿಗೆ 'ಉದ್ಯೋಗ ಪರವಾನಗಿ ಪತ್ರ'ವೊಂದನ್ನು ದೊರಕಿಸಿಕೊಡಲು ಯಶಸ್ವಿಯಾಗುತ್ತಾಳೆ-ಆದರೆ ಲಂಚ ಪಡೆದ ಅಧಿಕಾರವರ್ಗ ಪೂರ್ಣ ಪ್ರಮಾಣದ ಅಧಿಕೃತ 'ಉದ್ಯೋಗ ಪರವಾನಗಿ ಪತ್ರ' ನೀಡಿರುವುದಿಲ್ಲ. ಗಿರಣಿ ಕೆಲಸದ ಅವಘಡವೊಂದರಲ್ಲಿ ಗುವೊ ದೈಹಿಕವಾಗಿ ಜರ್ಜರಿತನಾಗುತ್ತಾನೆ; ಅವನ ವೈದ್ಯಕೀಯ ಉಪಚಾರದ ಖರ್ಚು ಕೊಟ್ಟು, ಈ ಅವಘಡಕ್ಕೆ ಗಿರಣಿ ಮಾಲಿಕರು ಜವಾಬ್ದಾರರಲ್ಲ ಎಂಬ ಹೇಳಿಕೆಯನ್ನು ಲಿಂಯಾಂಕಿಯ ಸಾಕ್ಷಿತ್ವದಲ್ಲಿ ಗುವೊ ಪಡೆಯಬೇಕಾಗುತ್ತದೆ. ಗುವೊನ ಈ ಸ್ಥಿತಿಯಲ್ಲಿ ದೊರಕಿರುವ 'ಉದ್ಯೋಗ ಪರವಾನಗಿ ಪತ್ರ'ವನ್ನು ಹಿಡಿದು, ತಮಗಿಬ್ಬರಿಗೂ ನಯವಿನಯದ ಕೆಲಸ ಹುಡುಕಲು ಹೊರಟಾಗ 'ಉದ್ಯೋಗ ಪರವಾನಗಿ ಪತ್ರ'ವು ಅಧಿಕೃತವಾಗಿಲ್ಲ ವೆಂಬುದು ಬಹಿರಂಗವಾಗಿ, ಲಿಂಯಾಂಕಿಯ ಕನಸು ಮತ್ತೊಮ್ಮೆ ಭಗ್ನವಾಗುತ್ತದೆ. ಆಸರೆಹೀನ ದುಃಖಿತ ಗಳಿಗೆಯಲ್ಲಿ ಗುವೊ ಕಳೆದುಕೊಂಡ ಶಕ್ತಿಯನ್ನು ಪುರುಷಛಲದಲ್ಲಿ ಮರುಸ್ಥಾಪಿಸಿಕೊಂಡು ತನ್ನ ಕೆಲಸ ಉಳಿಸಿಕೊಳ್ಳುವ ಹುಚ್ಚಿಗೆ ಬೀಳುತ್ತಾನೆ; ಹೇಗಾದರೂ ಥೈವಾನಿನ 'ಅಧಿಕೃತ ಪ್ರಜೆ'ಯ ಪತ್ರ ಪಡೆದರೆ, ಹೆಚ್ಚು ವರಮಾನದ ನಯವಾದ ಉದ್ಯೋಗ ದೊರಕಿಸುವ ಭರವಸೆ ನೀಡಿದವರನ್ನು ನಂಬಿ ಲಿಂಯಾಂಕಿ 'ಅಧಿಕೃತ ಪ್ರಜೆ'ಯ ಪತ್ರವನ್ನು ಭ್ರಷ್ಟ ಮಾರ್ಗದಲ್ಲಾದರೂ ಪಡೆಯುವ ಸಾಹಸಕ್ಕೆ ಇಳಿಯುತ್ತಾಳೆ - ತನ್ನ ಹೆಸರಿನ ಸಹಿತ ಪೂರ್ವದ ನೆಲ, ಬದುಕಿನ ಸಂಬಂಧಗಳನ್ನೆಲ್ಲವನ್ನೂ ಕಳಚಿಕೊಂಡು, ಹೊಸ ಹೆಸರು ಅಸ್ಮಿತೆಯನ್ನು ಉರು ಹಚ್ಚಿಕೊಂಡು, ಹೊಸದಾಗಿ ಹುಟ್ಟುವ ಛಲದಲ್ಲಿ- 'ಅಧಿಕೃತ ಪ್ರಜೆ'ಯ ಪತ್ರವನ್ನೂ ಪಡೆಯುತ್ತಾಳೆ. ಲಿಂಯಾಂಕಿ-ಗುವೊ ಇದೀಗ ಕವಲು ದಾರಿಯಲ್ಲಿರುವುದು ಗುವೊನಿಗೆ ಅಸಹನೀಯವಾಗುತ್ತದೆ; ದುರಂತದ ಬಾಗಿಲಲ್ಲಿ ಎರಡು ಯುವ ಬದುಕುಗಳು ಕೊನೆಯಾಗುತ್ತವೆ.



ಈ ಸಿನಿಮಾ ಯಾಕೆ ಮುಖ್ಯ?

'ರೋಡ್ ಟು ಮಂಡಲಾಯ್' ಬ್ರಿಟಿಷ್ ವಸಾಹತುಶಾಹಿಯ ವಕ್ತಾರ ಬುದ್ಧಿಜೀವಿಯಾಗಿದ್ದ ರುಡ್ಯಾರ್ಡ್ ಕಿಪ್ಲಿಂಗ್‌ನ ಪ್ರಖ್ಯಾತ ಕವಿತೆಯ ಶಿರೋನಾಮೆಯಾಗಿದೆ! ಬರ್ಮಾ ಬ್ರಿಟಿಷ್ ವಸಾಹತುಶಾಹಿಯಾಗಿದ್ದಾಗ ಬರ್ಮಾದ ಮಂಡಲಾಯ್ ನಗರವು ವಸಾಹತುಶಾಹಿಯ ಪ್ರಧಾನ ನಗರವಾಗಿತ್ತು, ಕಿಪ್ಲಿಂಗ್ 1892ರಲ್ಲಿ ಬ್ರಿಟನ್ನಿಗೆ ಮರಳುವಾಗ ಮಂಡಲಾಯ್ ಮಾರ್ಗವಾಗಿ ಪ್ರಯಾಣಿಸಿದ. ಅಲ್ಲಿ ಅವನ 'ಕಣ್ಣಿಗೆಕಂಡದ್ದು' ಸೆರಗು ಹೊದೆಯದ ಬರ್ಮಾದ ಸುಂದರ ಹೆಂಗಸರು; ಅವರ ಸೌಂದರ್ಯದಿಂದ ಆಕರ್ಷಿತನಾದ ಕಿಪ್ಲಿಂಗಿಗೆ, ಮಂಡಲಾಯ್ 'ಪೌರತ್ಯ ಕನ್ಯಾಸೊಬಗಿಗೆ' ಒಂದು ಪ್ರತಿಮೆಯಾಯಿತು. ಆ ನಂತರದಲ್ಲಿ ಇದೇ ಭಾವದ ಅನೇಕ ಹಾಡುಗಳನ್ನು ಪಾಶ್ಚಾತ್ಯ ಪಾಪ್ ಗಾಯಕರು ಬರೆದು ಹಾಡಿದಿದ್ದೆ. ಹೀಗಾಗಿ, 'ರೋಡ್ ಟು ಮಂಡಲಾಯ್' ಎನ್ನುವುದು ಮರಳಿಗೂಡಿಗೆ ತೆರಳುವವರಿಗೆ 'ನಡುವಿರಾಮದಲ್ಲಿ ದಕ್ಕುವ ಸುಂದರ ವಯೋಗ ವಿರಹ'ಕ್ಕೆ ಒಂದು ಅಧಿಕಾರಸ್ಥ ಪ್ರತಿಮೆಯಾಗಿ ಹೋಯಿತು! ಮೊದಲಾಗಿ ಮಿಡಿ ಜೆಡ್ ತನ್ನ ವಲಸಿಗರ ದುರಂತ ಕಥನಕ್ಕೆ ಆ ಹೆಸರು ಕೊಟ್ಟು, ಆ ಇಡಿ ವಸಾಹತುಶಾಹಿ ಸೌಂದರ್ಯಪ್ರಜ್ಞೆಯನ್ನು ಬುಡಮೇಲು ಮಾಡುತ್ತಾನೆ. ಈ ಸೂಕ್ಷ್ಮ ಅಸಮಾನ್ಯ.

ಅರ್ಥ ಜಾಗತೀಕರಣವು ಅನಿವಾರ್ಯ ವಿದ್ಯಮಾನವೆಂದು ಜಗತ್ತಿನ ಎಲ್ಲ ಪ್ರಭುತ್ವಗಳೂ ತಮ್ಮ ಪ್ರಜೆಗಳನ್ನು ನಂಬಿಸತೊಡಗಿವೆ. ಅಂತಾರಾಷ್ಟ್ರೀಯ ಸಹಮತ ಸೃಷ್ಟಿಸಿ ಬಂಡವಾಳವು ಶ್ರಮ ಅಗ್ಗವಾಗಿರುವ ನಾಡುಗಳಿಗೆ ಸಲೀಲವಾಗಿ ಹರಿಯುವಂತಹ ಒಪ್ಪಂದಗಳನ್ನು ಗಟ್ಟಿಗೊಳಿಸಿವೆ; ಅದೇ ಹೊತ್ತಿಗೆ ಬಡತನದಲ್ಲಿ ನರಳುತ್ತಿರುವ ಜನರನ್ನು ಅಗ್ಗದ ಕೂಲಿಗಳಾಗಿ ತಮ್ಮ ಮೂಲದ ಠಾವಿಗೆ ಕಟ್ಟಿ ಹಾಕುವ ವಲಸೆ ನಿಯಮಗಳನ್ನು ಕಠಿಣಗೊಳಿಸಿವೆ. ಬಡತನದಿಂದ ವಿಮೋಚಿತರಾಗುವ ಮಾರ್ಗ ಹುಡುಕುವ ಬಡಜನರ ಹಂಬಲಕ್ಕೆ ಮರೀಚಿಕೆಯ ಭ್ರಷ್ಟ ಮಾರ್ಗಗಳನ್ನು ಇದೇ ಪ್ರಭುತ್ವಗಳ ಅಧಿಕಾರಶಾಹಿ ಸೃಷ್ಟಿಸಿಕೊಂಡಿದೆ! ಇದ್ದಲ್ಲಿ ಹಸಿದು ಸಾಯುವುದಕ್ಕಿಂತ ಅಧಿಕಾರ ಭ್ರಷ್ಟಾಚಾರದ ಬಲೆಯ ತೆರೆದೆಡೆಗಳಲ್ಲಿ ನುಸುಳಿ, ದುಡಿದು ಮಾನವಂತವಾಗಿ ಬದುಕುಳಿಯಬೇಕು ಎಂಬುದು ಸಹಜ ಮಾನುಷ ಆಸೆ; ವಿಧಿನಿಯಮ ತಿಳಿದೂ ಅದರ ವಿರುದ್ಧ ಸೆಣಸಿ ಬದುಕುವ ಛಲದ ಗ್ರೀಕ್ ದುರಂತ ನಾಟಕಗಳೂ ನೈಜ ದುರಂತಗಳು; ಆದರೆ ಜಾಗತೀಕರಣ ಸೃಷ್ಟಿಸಿರುವ ಭ್ರಷ್ಟ ಅಧಿಕಾರಶಾಹಿಯ ಬಲೆಯ ಎಡೆಯಲ್ಲಿ ನುಸುಳುವುದು ದುರಂತ ಪ್ರಹಸನ- ಇಷ್ಟನ್ನು, ಎಲ್ಲೂ ವಿರುದನಿಯೆತ್ತದೆ, ಇಬ್ಬರು ಯುವಜನರ ವ್ಯವಸ್ಥೆ ನಿರ್ಮಿತ ಸಹ ದುಃಖದ ಸಂಗತ್ವದ ದುರಂತ ಕಥನವಾಗಿ ಹೇಳುವುದು ಸುಲಭವಲ್ಲ, ಮಿಡಿ ಅದನ್ನು ಬಹಳ ಮಟ್ಟಿಗೆ ಸಾಧಿಸಿದ್ದಾನೆ.

ಆಯ್ತು ಲಿಂಯಾಂಕಿ ಮುಕ್ತಿ ಪಡೆದು ಥೈಲ್ಯಾಂಡಿನ ಪ್ರಜೆಯಾದರೂ, ಪಡೆವ ಸೌಭಾಗ್ಯವೇನು? ಇದನ್ನು ಮಿಡಿ ಎರಡು ದೃಶ್ಯಗಳಲ್ಲಿ ತಟ್ಟುವಂತೆ ಹೇಳುತ್ತಾನೆ. 'ಉದ್ಯೋಗ ಪರವಾನಗಿ ಪತ್ರ' ದೊರಕುವ ಬಗ್ಗೆ ಲಿಂಯಾಂಕಿಗೆ ಬಂದ ಸಂದೇಶವನ್ನು ಗುವೊ ಪಡೆದು, ಅವಳಿಂದ ಮುಚ್ಚಿಟ್ಟಿರುತ್ತಾನೆ; ಗಿರಣಿ ಅವಘಡದಲ್ಲಿ ದೈಹಿಕ ಜರ್ಜರಿತನಾಗಿ ಹಾಸಿಗೆ ಹಿಡಿದಿರುವ ಹೊತ್ತಲ್ಲಿ ಇದು ಗೊತ್ತಾಗಿ, ಗುವೊನ ಬಳಿ ಬಂದ ಲಿಂಯಾಂಕಿ 'ನನಗ್ಯಾಕೆ ಇದನ್ನು ತಿಳಿಸಲಿಲ್ಲ' ಎಂದು ಸಿಟ್ಟಲ್ಲಿ ಕೇಳುವಾಗ, ಗುವೊ ಪುರುಷ ಅಹಂಕಾರದಲ್ಲಿ ಕೊಡೋ ಉತ್ತರ 'ಅದ್ನ ತಗೊಂಡು ಏನು ಮಾಡ್ತಿ! ಬ್ಯಾಂಕಾಕ್‌ನಲ್ಲಿ ಮೈಮಾರಿಕೊಳ್ತಿಯಾ!' ಅವನ ಈ ಗಂಡು ಧಿಮಾಕಿನಿಂದ ಲಿಂಯಾಂಕಿಗೆ ಆಗುವ ರೇಜಿಗೆ ಕೋಪಗಳನ್ನು ಮಿಡಿ ಒಂದು ದೃಶ್ಯದಲ್ಲಿ ದಾಖಲಿಸುತ್ತಾನೆ. ಲಿಂಯಾಂಕಿಗೆ 'ಅಧಿಕೃತ ಪ್ರಜೆ'ಯ ಪತ್ರ ಸಿಕ್ಕುವುದು ಖಾತ್ರಿಯಾದ ಹೊತ್ತಲ್ಲಿ ಅವಳೊಂದು ದುಸ್ವಪ್ನ ಕಾಣುತ್ತಾಳೆ: ಅವಳು ಪಂಚತಾರಾ ಹೊಟೇಲ್ ಒಂದರ ಪರಿಚಾರಿಕೆಯ ಸುಂದರ ವೇಷದಲ್ಲಿ ಒಂದು ಸುಸಜ್ಜಿತ ಕೋಣೆಯ ಕಿಟಕಿಯಿಂದ ಬ್ಯಾಂಕಾಕಿನ ನಗರ ನೋಡುತ್ತಾ ನಿಂತಿದ್ದಾಳೆ; ಒಮ್ಮೆಲೇ ಭಯಾನಕ ಶಬ್ದವಾಗುತ್ತದೆ; ಹೆದರಿ ಹಿಂದಿರುಗಿದರೆ, ಮೆತ್ತನೆಯ ಹಾಸಿಗೆಯ ಮೇಲೆ ಉಡವೊಂದು ನಾಲಿಗೆ ಚಾಚುತ್ತ ಕುಳಿತಿದೆ; ಅವಳು ಚೀರಿ ಕಿಟಕಿಯ ಬಳಿ ಸರಿದಂತೆ ಉಡವು ಅವಳ ಮೈಯೇರಿ ನೆಕ್ಕಲು ಶುರುಮಾಡುತ್ತದೆ - ಉಡ ಮೈಯೇರುವುದು ದೃಶ್ಯದಲ್ಲಿ ಕಾಣುವುದಿಲ್ಲ, ಕಿಟಕಿಯಿಂದ ಕಾಣುವ ಬ್ಯಾಂಕಾಕ್ ನಗರಿ ದೃಶ್ಯದ ಹಿನ್ನೆಲೆಯಲ್ಲಿ ಕೇಳುವ ಭಯಂಕರ ಭಯ ವಿಹಲ್ವಿತ ಚೀತ್ಕಾರವಾಗಿ ಮಾತ್ರ ಕೇಳುತ್ತದೆ. ಎರಡು ದೃಶ್ಯಗಳಲ್ಲಿ ಮಿಡಿ ತೋರುವ ಸೂಕ್ಷ್ಮವೂ ಸುಲಭ ಸಾಧಿತವಲ್ಲ. ■

# ಬೀಜ ನಿಗಮ: ಗೋಣಿಚೀಲ ಗೋಲ್‌ಮಾಲ್!

ಹುಚ್ಚನ ಮದ್ವೇಲಿ ಉಂಡೋನೆ ಜಾಣ ಅನ್ನೋ ಮಾತನ್ನು ಕರ್ನಾಟಕ ರಾಜ್ಯ ಬೀಜ ನಿಗಮ ಮಂಡಳಿಗೆ ಅನ್ವಯಮಾಡಿಸಿದಂತಿದೆ. ಡೆಪ್ಯುಟೇಷನ್ ಅಧಿಕಾರಿಗಳು ಮತ್ತು ಚುನಾಯಿತ ನಿರ್ದೇಶಕರುಗಳ ಕಾರುಬಾರಿನಲ್ಲಿ ಬೀಜ ನಿಗಮದ ಬೊಕ್ಕಸ ಹಗಲು ದರೋಡೆಯಾಗುತ್ತಿದೆ.

ರೈತನ ಗೋಳು ಒಂದಾ ಎರಡಾ. ಸುರಿವ ಮಳೆಯಿಂದ ಹಿಡಿದು ಹೊಲದಲ್ಲೊಂದು ಮಾರ್ಕೆಟ್ ಬಿಕರಿಯವರೆಗೆ ಮಧ್ಯವರ್ತಿಗಳ ಉದ್ಧಾರಕ್ಕೊಂದು ನೇಗಿಲಯೋಗಿ ಬದುಕು ಸವೆಸಬೇಕೆ ವಿನಾಃ ತನ್ನ ಪಾಪ್ಯೆಸೆಯ ಆದಾಯವಿಲ್ಲ. ರೈತನ ಸಂಕಷ್ಟ ಬಗೆಹರಿಸ್ತೀವಿ ಅಂತ ಸರ್ಕಾರಗಳು ಯೋಜನೆಗಳ ಮೇಲೆ ಯೋಜನೆ ಘೋಷಿಸಿದ್ದೇ ಬಂತು. ಅವು ರೈತರ ಕೈತಲುಪುವ ಮೊದಲೇಗಾಗಲೇ ಸತ್ತೇ ಹೋಗಿರುತ್ತವೆ. ಇಂಥಾ ರೈತನಿಗೆ ಕನಿಷ್ಠಪಕ್ಷ ಬಿತ್ತುವ ಬೀಜಗಳನ್ನಾದರೂ ಉತ್ತಮ ಗುಣಮಟ್ಟದಲ್ಲಿ ಹಾಗೂ ಕಡಿಮೆ ದರದಲ್ಲಿ ಪೂರೈಕೆ ಮಾಡಬೇಕು ಅಂತ ಸರ್ಕಾರ ಈ ಬೀಜ ನಿಗಮವನ್ನು ಕಟ್ಟಿಹಾಕಿದೆ. ರಾಷ್ಟ್ರೀಯ ನಿಗಮವೊಂದಿದ್ದರೆ ಆಯಾ ರಾಜ್ಯಗಳ ಬೀಜ ನಿಗಮಗಳೂ ಪ್ರತ್ಯೇಕವಾಗಿ ಕಾರ್ಯನಿರ್ವಹಿಸುತ್ತವೆ. ಆದರೆ ಕರ್ನಾಟಕ ರಾಜ್ಯ ಬೀಜ ನಿಗಮ ಹಗರಣಗಳ ಉಗ್ರಾಣವಾಗಿ ಕೂತಿದೆ. ಬೀಜಗಳನ್ನು ತುಂಬಿ, ಪೂರೈಕೆ ಮಾಡಲೆಂದು ಖರೀದಿಸುವ ಗೋಣಿಚೀಲದ ವ್ಯವಹಾರ ಗೋಲ್‌ಮಾಲ್‌ನ ಉದಾಹರಣೆ ಈ ನಿಗಮದೊಳಗೆ ನಡೆಯುತ್ತಿರುವ ಹೊಲಸನ್ನು ತೋರಿಸಲು.

ವರ್ಷಕ್ಕೆ ಸುಮಾರು 150 ರಿಂದ 160 ಕೋಟಿ ರೂಪಾಯಿ ವಹಿವಾಟು ನಡೆಸುವ ರಾಜ್ಯ ಬೀಜ ನಿಗಮಕ್ಕೆ ಸುಭಾಸ್ಕರ್ ಅಧ್ಯಕ್ಷ. ಒಬ್ಬ ವ್ಯವಸ್ಥಾಪಕ ಸೇರಿದಂತೆ, ಚುನಾಯಿತರಾದ ನಾಲ್ವರು ರೈತಾಪಿ ಶೇರುದಾರ ನಿರ್ದೇಶಕರು ಪ್ರಧಾನವಾಗಿ ನಿಗಮದ ದೇಖಾರೇಖಿ ನೋಡಿಕೊಳ್ಳುತ್ತಾರೆ. ಆದರಲ್ಲೂ ವ್ಯವಸ್ಥಾಪಕ ಕೈಹಾಕಿದ್ದಲ್ಲಿರೋದೇ ನಿರ್ಣಾಯಕ ಕಸುಬು. ಅಧ್ಯಕ್ಷನದೇನಿದ್ದೂ ತೋರಿಸಿದ ಜಾಗಕ್ಕೆ ಸಹಿ ಹಾಕುವುದಷ್ಟೇ ಕಾಯಕ. ಸದ್ಯ ನಿಗಮಕ್ಕೆ ಶಿವಮೂರ್ತಪ್ಪ ಎಂಬಾತ ವ್ಯವಸ್ಥಾಪಕನಾಗಿದ್ದಾನೆ. ಈತ ಮೂಲ ಇಲಾಖೆಯವನಲ್ಲ, ಕೃಷಿ ಇಲಾಖೆಯಿಂದ ನಿಗಮಕ್ಕೆ ಡೆಪ್ಯುಟೇಷನ್ ಮೇಲೆ ಬಂದು ತಳವೂರಿದವನು. ಇನ್ನು ಈ ಸಲ ಕೋಲಾರ ವಿಭಾಗದಿಂದ ಬಿ.ಎಲ್.ನಾಗರಾಜು, ಬಳ್ಳಾರಿ ವಿಭಾಗದಿಂದ ರಾಜೇಂದ್ರ ಪ್ರಸಾದ್, ಗದಗ ವಿಭಾಗದಿಂದ ಐ.ಎಸ್.ಪಾಟೀಲ್ ಮತ್ತು ಹಾವೇರಿ ವಿಭಾಗದಿಂದ ಹೊಸಮನಿ ಎಂಬ ನಾಲ್ವರು ಷೇರುದಾರರು ನಿರ್ದೇಶಕರಾಗಿ ಚುನಾಯಿತರಾಗಿದ್ದಾರೆ.

ತನಗೆ ಬೇಕಾದ ಗೋಣಿಚೀಲಗಳಿಗಾಗಿ ರಾಜ್ಯ ಬೀಜ ನಿಗಮ ಪ್ರತಿವರ್ಷ ಟೆಂಡರ್ ಕರೆದು ಗುತ್ತಿಗೆ ನೀಡುತ್ತೆ. ಅಚ್ಚರಿಯೇನೆಂದರೆ ಸತತ ಹತ್ತು ವರ್ಷಗಳಿಂದ ಈ ಗುತ್ತಿಗೆ ಕೆ.ಎಲ್.ಜ್ಯೂಟ್ ಪ್ರೊಡಕ್ಟ್ಸ್ ಎಂಬ ಕೊಲ್ಕೊತ್ತಾ ಮೂಲದ ಕಂಪನಿಗೇ ಸಿಗುತ್ತಾ ಬಂದಿದೆ. ಇದೇ ಕಂಪನಿ ರಾಷ್ಟ್ರೀಯ ಬೀಜ ನಿಗಮಕ್ಕೂ ಗೋಣಿಚೀಲಗಳನ್ನು ಸರಬರಾಜು ಮಾಡುತ್ತಾ ಬಂದಿದೆ. ಒಂದೇ ಕಂಪನಿಯಾದ್ದರಿಂದ ರಾಜ್ಯ ನಿಗಮ ಮತ್ತು ರಾಷ್ಟ್ರೀಯ ನಿಗಮಗಳಿಗೆ ವಿಧಿಸುತ್ತಿದ್ದ ದರ ಹೆಚ್ಚೂಕಮ್ಮಿ ಒಂದೇ ತೆರನಾಗಿರುತ್ತಿತ್ತು, ರಾಷ್ಟ್ರೀಯ ನಿಗಮ 85x56cm ಅಳತೆಯ ಚೀಲಗಳನ್ನು ಖರೀದಿಸಿದರೆ ರಾಜ್ಯ ನಿಗಮ 86.5x56cm ಅಳತೆಯ ಚೀಲಗಳನ್ನು ಖರೀದಿಸುತ್ತದೆ. ಉದ್ದದಲ್ಲಿ 1.5 ಸೆ.ಮೀ ವ್ಯತ್ಯಾಸವಷ್ಟೇ. ಹಾಗಾಗಿ ರಾಷ್ಟ್ರೀಯ ನಿಗಮಕ್ಕೆ ಈ ಕಂಪನಿ ಪ್ರತಿ ಚೀಲಕ್ಕೆ 35.88 ರೂ, ದರ ವಿಧಿಸಿದರೆ ರಾಜ್ಯ ನಿಗಮಕ್ಕೆ 36 ರಿಂದ 37 ರೂಪಾಯಿ ದರ (ಉದ್ದ ಹೆಚ್ಚಿದ್ದರಿಂದ) ವಿಧಿಸುತ್ತಿತ್ತು.

ಆದರೆ ಈ ಸಲ ಗೋಣಿಚೀಲದ ವ್ಯವಹಾರದಲ್ಲಿ ಗೋಲ್‌ಮಾಲ್ ಮಾಡಬೇಕೆಂದೆ ಒಂದಷ್ಟು ವ್ಯವಸ್ಥೆ ಮಾಡಿಕೊಂಡು ವ್ಯವಹಾರಕ್ಕಿಳಿದಿದ್ದರು. ಪ್ರತಿ ಚೀಲಕ್ಕೆ ವಿಧಿಸುತ್ತಿದ್ದ ದರವನ್ನು ಸಿಕ್ಕಾಪಟ್ಟೆ ಜಾಸ್ತಿ ನಮೂದಿಸಿ, ಆದರಿಂದ ಬರುವ ಹೆಚ್ಚುವರಿ ಬಿಲ್ ಅನ್ನು ಲಪಟಾಯಿಸಬೇಕೆನ್ನುವುದು ವ್ಯವಸ್ಥಾಪಕ, ನಾಲ್ವರು ಚುನಾಯಿತ ನಿರ್ದೇಶಕರು ಮತ್ತು ಪೂರೈಕೆದಾರ ಕಂಪನಿಯ ಹುನ್ನಾರವಾಗಿತ್ತು. ಆದರೆ ಅದೇ ಕಂಪನಿ ರಾಷ್ಟ್ರೀಯ ನಿಗಮಕ್ಕೂ ಚೀಲ ಪೂರೈಕೆ ಮಾಡುತ್ತಿದ್ದರಿಂದ ಅಲ್ಲಿನ ದರಕ್ಕಿಂತ ವಿಪರೀತ ವ್ಯತ್ಯಾಸವಿರುವ ದರ ವಿಧಿಸಿದರೆ, ಎರಡೂ ನಿಗಮಗಳ ಇನ್‌ವಾಯ್ಸ್ ಟ್ಯಾಲಿ ಮಾಡಿದಾಗ ರೆಡ್‌ಹ್ಯಾಂಡಾಗಿ ತಗುಲಿಕೊಳ್ಳುವ ಅಪಾಯವಿತ್ತು. ಅದನ್ನು ಮನಗಂಡು ಈ ಸಲ ಚೀಲ ಪೂರೈಕೆ ಟೆಂಡರ್ ಯಥಾಪ್ರಕಾರ ಕೆ.ಎಲ್.ಜ್ಯೂಟ್ ಕಂಪನಿಯ ಪಾಲಾಗದಂತೆ ಮುಂಬೈನ ದಿ ಸ್ಟೇಟ್ ಟ್ರೇಡಿಂಗ್ ಕಾರ್ಪೊರೇಷನ್ ಕಂಪನಿಗೆ ದಕ್ಕುವಂತೆ ನೋಡಿಕೊಂಡಿದ್ದರು. ಅಸಲೀ ವಿಚಾರ ಇರೋದೆ ಇಲ್ಲಿ, ಈ ಹೊಸ ಕಂಪನಿ ಹಳೇ ಕಂಪನಿಯ ಹೊಸ ರೂಪವಷ್ಟೆ. ಈಗ ರಾಷ್ಟ್ರೀಯ ಬೀಜ ನಿಗಮಕ್ಕೆ ಪೂರೈಕೆ ಮಾಡೋದು ಕೆ.ಎಲ್ ಜ್ಯೂಟ್ ಕಂಪನಿ, ರಾಜ್ಯ ನಿಗಮಕ್ಕೆ ಮುಂಬೈ ಮೂಲದ ಬೇರೊಂದು ಕಂಪನಿ! ದರ ಹೆಚ್ಚಿಗೆ ಮಾಡಿದ್ದನ್ನು ಯಾರೂ ಪ್ರಶ್ನಿಸಲುಬಾರದು. ಯಾಕೆಂದರೆ ಆ ಕಂಪನಿಯ ಕ್ವಾಲಿಟಿಗೂ ಈ ಕಂಪನಿ ಕ್ವಾಲಿಟಿಗೂ ವ್ಯತ್ಯಾಸವಿದೆ ಅಂತ ಸಬೂಬು ಹೇಳಬಹುದಲ್ಲವೇ!

ಹೀಗೆ ಸೃಷ್ಟಿಸಲಾದ ಹೊಸ ಕಂಪನಿಯ ಅದೇ ಹಳೆಯ ಚೀಲಗಳಿಗೆ ಹಿಂದೆ ವಿಧಿಸುತ್ತಿದ್ದ 37 ರೂಪಾಯಿಗೆ ಬದಲು ಏಕಾಏಕಿ 48.87 ರೂಪಾಯಿಗೆ ಏರಿಸಿಕೊಂಡಿದ್ದರು. ಅಂದರೆ ಪ್ರತಿ ಚೀಲಕ್ಕೆ ಹೆಚ್ಚುವರಿ ಅಜಮಾಸು 13 ರೂಪಾಯಿ ಲಪಟಾಯಿಸುವ ಪ್ಲಾನು. ಅಂದಹಾಗೆ ಈ ವರ್ಷ ಬರೋಬ್ಬರಿ 2,75,000 ಚೀಲಗಳನ್ನು ರಾಜ್ಯ ನಿಗಮ ಖರೀದಿ ಮಾಡಿದೆ. ಹಳೆಯ ರೇಟಿನ ಪ್ರಕಾರ ಇಷ್ಟು ಚೀಲಗಳಿಗೆ ಒಂದೂ ಮುಕ್ಕಾಲು ಕೋಟಿ ಬಿಲ್ ಆಗುತ್ತಿತ್ತು, ಆದರೆ ಬೆಲೆ ಏರಿಸಿದ್ದರಿಂದ ಹೆಚ್ಚುವರಿ 35 ಲಕ್ಷ ರೂಪಾಯಿ ನಿಗಮದ ಬೊಕ್ಕಸಕ್ಕೆ ಕತ್ತರಿ ಬಿದ್ದಿದೆ.



ಶಿವಮೂರ್ತಪ್ಪ

ಇಷ್ಟೂ ಹಣ ವ್ಯವಸ್ಥಾಪಕನಿಂದ ಹಿಡಿದು, ಚುನಾಯಿತ ನಿರ್ದೇಶಕರು ಮತ್ತು ಕಂಪನಿಯವರ ನಡುವೆ ಹಂಚಿಹೋಗಿದೆ!

ಅಂದಹಾಗೆ, ಟೆಂಡರ್ ಬಿಡ್ಡಿಂಗ್‌ನಲ್ಲಿ ಬೇರೆ ಸಣ್ಣಮಟ್ಟಿ ಕಂಪನಿಗಳು ಭಾಗವಹಿಸುವದನ್ನು ತಪ್ಪಿಸಲು ಒಂದು ಕಂಪನಿಗೆ ಇದ್ದ ವಾರ್ಷಿಕ ವಹಿವಾಟು ಮಿತಿಯನ್ನು 10 ಕೋಟಿಯಿಂದ ಅನಾಮತ್ತು 35 ಕೋಟಿಗೆ ಹೆಚ್ಚಿಸಿದ್ದರು. ಹಾಗಾಗಿ ಬೇರಾವ ಕಂಪನಿಗಳು ಬಿಡ್‌ನಲ್ಲಿ ಭಾಗವಹಿಸಲಿಲ್ಲ. ತಾವಂದುಕೊಂಡಂತೆ ಮುಂಬೈ ಮೂಲದ ಹೊಸ ಹೆಸರಿನ ಹಳೇ ಕೊಲ್ಕೊತ್ತಾ ಕಂಪನಿಗೇ ಬಿಡ್ ಸಿಗುವಂತೆ ನೋಡಿಕೊಂಡಿದ್ದರು. ಈ ಅವ್ಯವಹಾರದಲ್ಲಿ ನಾಲ್ವರು ಚುನಾಯಿತ ನಿರ್ದೇಶಕರೇ ಮುಂಚೂಣಿ ವಹಿಸಿದ್ದು ಅವರೇ ವ್ಯವಸ್ಥಾಪಕ ಶಿವಮೂರ್ತಪ್ಪನ ಮೂಗಿಗೆ ತುಪ್ಪ ಸವರಿ ಹಗರಣ ನಡೆಸಿದ್ದಾರೆ ಅನ್ನೋ ಮಾತುಗಳು ನಿಗಮದ ಕಾಂಪೌಂಡಿನಲ್ಲೇ ಕೇಳಿಬರುತ್ತಿವೆ.

ಇದು ಬೀಜ ನಿಗಮ ಅವ್ಯವಹಾರದ ಒಂದು ಸ್ಯಾಂಪಲ್ ಅಷ್ಟೇ. ಟ್ರಾನ್ಸ್‌ಪೋರ್ಟೇಷನ್ನಿಂದ ಹಿಡಿದು ಬೀಜ ಪೂರೈಕೆವರೆಗೆ ಹತ್ತಾರು ಗೋಲ್‌ಮಾಲ್‌ಗಳು ನಡೆಯುತ್ತಿವೆ. ಈ ಸಂಸ್ಥೆಯನ್ನು ರಿಪೇರಿ ಮಾಡುವವರು ಯಾರು?

■ ವರದಿಗಾರ

Registered No.RNP/KA/BGS/2036/2017-19 Posted at :BGPSO, Mysore Road, Bangalore-26 Thursday R B P LANKESH, Kannada Weekly Price Rs. 15/- 15-03-2017 RNI No. KARKAN2005/14



## ಚಿತ್ತಾರದ ಪ್ರೀತಿಗೆ ಆರು ತಿಂಗಳು

ಅಮೂಲ್ಯ ಮತ್ತು ಜಗದೀಶ್ ನಿಶ್ಚಿತಾರ್ಥ ಮಾರ್ಚ್ ಮೊದಲ ವಾರದಲ್ಲಿ ನಡೆಯಲಿದೆ. ಬೆಂಗಳೂರಿನ ಆರ್.ಆರ್ ನಗರದ ಮಾಜಿ ಕಾರ್ಪೊರೇಟರ್ ರಾಮಚಂದ್ರ ಅವರ ಪುತ್ರ ಜಗದೀಶ್ ಜತೆ ಅಮೂಲ್ಯ ವಿವಾಹ ಆಗಲಿದ್ದಾರೆ.

ಹುಡುಗಿ ನೋಡುವ ಶಾಸ್ತ್ರ ಮೊನ್ನೆಯಷ್ಟೇ ಅಮೂಲ್ಯ ಮನೆಯಲ್ಲಿ ನಡೆದರೂ, ಇದು ಪಕ್ಕಾ ಲವ್‌ಮ್ಯಾರೇಜ್ ಅನ್ನುತ್ತಾರೆ ಅಮೂಲ್ಯ ಫ್ರೆಂಡ್ಸ್. ಜಗದೀಶ್ ಮತ್ತು ಅಮೂಲ್ಯ ವರ್ಷದ ಹಿಂದೆಯೇ ಭೇಟಿಯಾದವರು. ಗಣೇಶ್ ಮನೆಯಲ್ಲಿ ನಡೆಯುತ್ತಿದ್ದ ಪ್ರತಿ ಔತಣಕೂಟದಲ್ಲೂ ಜಗದೀಶ್ ಭಾಗಿ ಆಗುತ್ತಿದ್ದರು. ಅಲ್ಲಿಯೇ ಮೊದಲ ಬಾರಿಗೆ ಅಮೂಲ್ಯರನ್ನು ಜಗದೀಶ್ ನೋಡಿದ್ದು, ಪರಿಚಯ ಸ್ನೇಹಕ್ಕೆ ತಿರುಗಿ, ಆರು ತಿಂಗಳ ಹಿಂದೆಯಷ್ಟೇ ಸ್ನೇಹವು ಪ್ರೀತಿಯಾಗಿದೆ. ಅದು ಗಣೇಶ್ ಮತ್ತು ಶಿಲ್ಪಾ ಗಣೇಶ್ ಮಧ್ಯಸ್ಥಿಕೆಯಲ್ಲಿ ಮದುವೆ ಹಂತಕ್ಕೆ ಬಂದುನಿಂತಿದೆ.

ಜಗದೀಶ್ ಲಂಡನ್‌ನಲ್ಲಿ ಓದುತ್ತಿದ್ದಾರೆ. ಹಾಗಾಗಿ ಅಮೂಲ್ಯ ಕೂಡ ಎರಡು ತಿಂಗಳ ಹಿಂದೆ ತಾವು ಓದುವುದಕ್ಕಾಗಿ ಲಂಡನ್‌ಗೆ ಹೋಗುವ ಮಾತುಗಳನ್ನೂ ಆಡಿದ್ದರು. ಇದು ಪ್ರೀತಿಯ ಸೆಳೆತದ ಮಾತಾಗಿತ್ತು ಅನ್ನುವುದು ಅಮೂಲ್ಯರನ್ನು ಹತ್ತಿರದಿಂದ ಬಲ್ಲವರ ಮಾತು. ಏನೇ ಆಗಲಿ ಪ್ರೀತಿ ಮದುವೆಯಲ್ಲಿ ಮುಕ್ತಾಯವಾಗಿದ್ದು ಮಾತ್ರ ಖುಷಿಕೊಡುವಂಥದ್ದು.

## ಸಿಡಿದೆದ್ದ ಪರಮಶಿವ

ಕ್ರೇಜಿಸ್ಟಾರ್ ರವಿಚಂದ್ರನ್ ಕಳೆದ ಎರಡು ವರ್ಷಗಳಿಂದ ವಿಪರೀತ ಮಾನಸಿಕ ಒತ್ತಡದಲ್ಲಿದ್ದರು. ಅಂದುಕೊಂಡಂತೆ ಅವರ ಸಿನಿಮಾಗಳು ಗೆಲ್ಲಲಿಲ್ಲ, ಸಿನಿಮಾ ನಿರ್ಮಾಣಕ್ಕೂ ಅವರ ಹತ್ತಿರ ದುಡ್ಡಿರಲಿಲ್ಲ, ಹಾಗಾಗಿ ಕಿರುತೆರೆ ಕೈ ಹಿಡಿಯಿತು. ರಿಯಾಲಿಟಿ ಶೋಗಳೇ ಅವರನ್ನು ಉಸಿರಾಡುವಂತೆ ಮಾಡಿದವು. ನಂತರ 'ಮಾಣಿಕ್ಯ' ಮತ್ತು 'ಹೆಬ್ಬುಲಿ' ಚಿತ್ರಗಳು ಬಾಕ್ಸ್ ಆಫೀಸ್‌ನಲ್ಲಿ ಸದ್ದು ಮಾಡುತ್ತಿದ್ದಂತೆಯೇ ಕ್ರೇಜಿಸ್ಟಾರ್‌ಗೆ ಮತ್ತೆ ಜೀವ ಬಂದಿದೆ. ಈಗ ಬರೋಬ್ಬರಿ ಮೂರು ಸಿನಿಮಾಗಳಿಗೆ ಅವರು ಸಹಿ ಮಾಡಿದ್ದಾರೆ. ರವಿಚಂದ್ರನ್ ಶಿವನ ಭಕ್ತನಾದ ಕಾರಣ, ಶಿವರಾತ್ರಿಯ ದಿನದಂದೇ ಮೂರು ಚಿತ್ರಗಳಿಗೂ ಮುಹೂರ್ತ ಕೂಡ ಆಗಿದೆ. ಎರಡು ಸಿನಿಮಾಗಳಲ್ಲಿ ರವಿಚಂದ್ರನ್ ಕೇವಲ ನಟ. ಮತ್ತೊಂದು ಚಿತ್ರದಲ್ಲಿ ನಟನೆಯ ಜತೆಗೆ ನಿರ್ದೇಶನದ ಹೊಣೆಯನ್ನು ಹೊತ್ತಿದ್ದಾರೆ.

ಒಂದು ಚಿತ್ರವನ್ನು 'ಕರ್ವ' ಸಿನಿಮಾ ಖ್ಯಾತಿಯ ನವನೀತ್ ನಿರ್ದೇಶನ ಮಾಡುತ್ತಿದ್ದರೆ, ಮತ್ತೊಂದು ಚಿತ್ರಕ್ಕೆ ಎಂ.ಎಸ್. ರಮೇಶ್ ನಿರ್ದೇಶಕ. ನವನೀತ್ ಚಿತ್ರದಲ್ಲಿ ಸಸ್ಪೆನ್ಸ್ ಕತೆಯಿದ್ದರೆ, ರಮೇಶ್ ಸಿನಿಮಾದಲ್ಲಿ ರವಿಚಂದ್ರನ್ ಲಾಯರ್. ಅಲ್ಲದೇ ಸ್ವತಃ ತಾವೇ ನಿರ್ದೇಶನ ಮಾಡುತ್ತಿರುವ ಸಿನಿಮಾದಲ್ಲೂ ಕ್ರೇಜಿಸ್ಟಾರ್ ಕರಿಕೋಟು ತೊಟ್ಟಿದ್ದಾರೆ. ಈವರೆಗೂ ಸೋಲಿನ ಸುಳಿಯಲ್ಲಿ ಸಿಕ್ಕು ನಲುಗಿರುವ ಇವರು, ಈ ಎಲ್ಲ ಸಿನಿಮಾಗಳ ಬಗ್ಗೆ ಸಾಕಷ್ಟು ನಿರೀಕ್ಷೆ ಇಟ್ಟುಕೊಂಡಿದ್ದಾರೆ.





## ಗಣಿ ಮೇಲೆ ನಾಣಿ ಮುನಿಸು

ಗೋಲ್ಡನ್‌ಸ್ಟಾರ್ ಗಣೇಶ್ ವಿರುದ್ಧ ಮಾನನಷ್ಟ ನೋಟಿಸ್ ಕಳುಹಿಸಿದ[illegible] ನಿರ್ದೇಶಕ ಎಸ್.ನಾರಾಯಣ್. 'ಚೆಲುವಿನ ಚಿತ್ತಾರ' ಸಿನಿಮಾದ ಮೂ[illegible] ಗಣಿ ಬದುಕನ್ನು ಬಂಗಾರ ಮಾಡಿದ್ದ ನಾರಾಯಣ್ ಇದ್ದಕ್ಕಿದ್ದಂತೆ ಸಿಡಿದೇಳ[illegible] ಕಾರಣ, ಇವರ ವಿರುದ್ಧ ಗಣೇಶ್ ದಾಖಲಿಸಿರುವ ಪ್ರಕರಣಕ್ಕೆ ಸಂಬಂಧಿಸಿದ[illegible] ನಿರಂತರವಾಗಿ ಸಮನ್ಸ್ ಬರುತ್ತಿದೆಯಂತೆ. ಹಾಗಾಗಿ ಬೇಸತ್ತು ಗಣೇಶ್ ವಿರುದ್ಧ[illegible] ಮಾನನಷ್ಟ ಕೇಸ್ ದಾಖಲಿಸಿದ್ದಾರೆ.

ಈ ಜಟಾಪಟಿಗೆ ಕಾರಣವಾದ ಪ್ರಕರಣ ಹೀಗಿದೆ. ಎಂಟು ವರ್ಷ[illegible] ಹಿಂದೆ ತೆರೆಕಂಡ 'ಚೆಲುವಿನ ಚಿತ್ತಾರ' ಚಿತ್ರದ ಪ್ರಚಾರಕ್ಕಾಗಿ ಅಗರಬ[illegible] ಕಂಪನಿಯೊಂದರ ಜೊತೆಗೆ ನಿರ್ದೇಶಕ ನಾಣಿ ಒಪ್ಪಂದ ಮಾಡಿಕೊಂಡಿದ್ದ[illegible] ಅದೂ ಪ್ರಚಾರದ ಸಲುವಾಗಿ ಮೂರು ತಿಂಗಳ ಅವಧಿಗೆ ಮಾಡಿಕೊಂ[illegible] ಒಪ್ಪಂದ ಆದಾಗಿತ್ತು. ಅವಧಿ ಮುಗಿದ ಬಳಿಕವೂ ಅಗರಬತ್ತಿ ಕಂಪೆನಿಯ[illegible] ಚಿತ್ರದ ಹೆಸರಿನ ಜತೆ ಗಣೇಶ್ ಫೋಟೋವನ್ನು ಪ್ರಚಾರಕ್ಕೆ ಬಳಸಿಕೊಂಡಿ[illegible] ಈ ಕುರಿತು ಗಣೇಶ್ ಪ್ರಶ್ನಿಸಿದಾಗ ಅಗರಬತ್ತಿ ಕಂಪೆನಿಯು ನಾಣಿಯ[illegible] ಬೊಟ್ಟು ಮಾಡಿದೆ. ನಾರಾಯಣ್‌ಗೆ ಸಾಕಷ್ಟು ಹಣ ಕೊಟ್ಟ ವಿಚಾ[illegible] ಹೇಳಿಕೊಂಡಿದೆ. ತಮಗೆ ಗೊತ್ತಿಲ್ಲದೇ ನಡೆದ ವ್ಯವಹಾರಕ್ಕೆ ಬೇಸತ್ತು ಅಗರಬ[illegible] ಕಂಪೆನಿ ಮತ್ತು ನಾಣಿಯ ವಿರುದ್ಧ ಗಣೇಶ್ ಕಂಪ್ಲೇಂಟ್ ದಾಖಲಿಸಿದ್ದಾ[illegible] ಮಾತಿನಲ್ಲಿ ಮುಗಿಸಿಕೊಳ್ಳಬೇಕಾದ ವ್ಯವಹಾರಕ್ಕೆ ಗಣೇಶ್ ಕಾನೂನು ಸಮ[illegible] ಇಳಿದದ್ದು ನಾಣಿಗೆ ಬೇಸರ ತರಿಸಿದೆ. ಸಾರ್ವಜನಿಕವಾಗಿ ತನ್ನ ಮಾನಹಾ[illegible] ಮಾಡಿದ್ದಾರೆಂದು ನಾಣಿ ಕೂಡ ಗಣೇಶ್‌ಗೆ ನೋಟಿಸ್ ಕಳುಹಿಸಿದ್ದಾರೆ.

## ಅಕಾಡೆಮಿ ಅವಾರ್ಡ್ ತಿರಸ್ಕರಿಸಿದ ರಾಜು


ನಿರ್ದೇಶಕ ಕೆ.ವಿ.ರಾಜು 2015-16ನೇ ಸಾಲಿನ ಕರ್ನಾಟಕ ಚಲನಚಿತ್ರ ಅಕಾಡೆಮಿ ಪ್ರಶಸ್ತಿಯನ್ನು ತಿರಸ್ಕರಿಸಿದ್ದಾರೆ. ಈ ಮೂಲಕ ಅವರು ತಮ್ಮ ತಾತ್ವಿಕ ಸಿಟ್ಟನ್ನೂ ಹೊರಹಾಕಿದ್ದಾರೆ.

ಕನ್ನಡದ ಬಹುತೇಕ ಸ್ಟಾರ್ ನಿರ್ದೇಶಕರು ರಾಜು ಕೈಕೆಳಗೆ ಕೆಲಸ ಮಾಡಿದವರು. ಈ ಹೊತ್ತಿಗೂ ರಾಜುವನ್ನು ಬಹುತೇಕರು ಗುರುವೆಂದೇ ನಂಬಿದವರು. ಆದರೂ ರಾಜು ಅವರಿಗೆ ಸಿಗಬೇಕಾದ ಸ್ಥಾನಮಾನ ಸಿಗಲಿಲ್ಲ, ಅಲ್ಲದೇ ಚಿತ್ರೋದ್ಯಮದ ಬಹುತೇಕ ಸಂಸ್ಥೆಗಳು ಇವರನ್ನು ದೂರವೇ ಇಟ್ಟವು. ಈ ಕೋಪವೇ ಪ್ರಶಸ್ತಿಯನ್ನು ತಿರಸ್ಕರಿಸಲು ಕಾರಣ ಎನ್ನಲಾಗಿದೆ.

ಈ ಕುರಿತು ಅಕಾಡೆಮಿಯ ಅಧ್ಯಕ್ಷ ರಾಜೇಂದ್ರ ಸಿಂಗ್‌ಬಾಬು ಅವರಿಗೆ ಖಡಕ್ಕಾಗಿಯೇ ಉತ್ತರ ಬರೆದಿದ್ದಾರೆ ರಾಜು. "ನೀವು ನೀಡುತ್ತಿರುವ ಪ್ರಶಸ್ತಿ ಸ್ವೀಕರಿಸಲು ನನಗೆ ಮನಸ್ಸಿಲ್ಲ, ನಾನು ಯಾವತ್ತೂ ಪ್ರಶಸ್ತಿಗಾಗಿ ಕೆಲಸ ಮಾಡಿದವನೂ ಅಲ್ಲ, ಮನರಂಜನೆಯೇ ನನ್ನ ಸಿನಿಮಾಗಳ ಉದ್ದೇಶ. ಜನರು ನನಗೆ ದುಡ್ಡು ಕೊಟ್ಟಿದ್ದಾರೆ. ಆ ದುಡ್ಡಿಗೆ ನಾನು ಮನರಂಜನೆ ಕೊಟ್ಟಿದ್ದೇನೆ. ನನ್ನ ಸೇವೆ ಪ್ರಶಸ್ತಿಗಾಗಿ ಅಲ್ಲ, ಪ್ರಶಸ್ತಿಗಾಗಿಯೇ ಸಿನಿಮಾ ಮಾಡುವ ದಂಡು ಇಲ್ಲಿದೆ. ನೀವೆಲ್ಲ ಅವರನ್ನು ಪ್ರೋತ್ಸಾಹಿಸುತ್ತಾ ಬಂದಿದ್ದೀರಿ. ಆ ಕಾರಣಕ್ಕಾಗಿಯೇ ಈವರೆಗೂ ನನ್ನ ಸಿನಿಮಾಗಳಿಗೆ ಪ್ರಶಸ್ತಿ ಬಂದಿಲ್ಲ, ನಾನು ಬಯಸುವುದೂ ಇಲ್ಲ, ನೀವು ಆಯ್ಕೆ ಮಾಡಿದ ಪ್ರಶಸ್ತಿಗೆ ನಾನು ಅರ್ಹನಲ್ಲ, ಹಾಗಾಗಿ ಅವಾರ್ಡ್ ಸ್ವೀಕರಿಸುವುದಿಲ್ಲ" ಎಂದಿದ್ದಾರೆ.

ಅಕಾಡೆಮಿ ಎರಡು ವರ್ಷಗಳಿಂದ ವಾರ್ಷಿಕ ಪ್ರಶಸ್ತಿಯನ್ನು ಪ್ರಕಟಿಸುತ್ತಾ ಬಂದಿದೆ. ಕಳೆದ ಬಾರಿಯೂ ಅದು ವಿವಾದಕ್ಕೆ ಕಾರಣವಾಗಿತ್ತು, ಈ ಬಾರಿಯೂ ಅದೇ ಹಾದಿಯಲ್ಲಿ ಸಾಗಿದೆ.

## ಉಪೇಂದ್ರನಿಗೆ ಕೈಕೊಟ್ಟ ಮೋದಿ



ರಾಜಕೀಯಕ್ಕೆ ಬರುವುದಕ್ಕಾಗಿ ಉಪೇಂದ್ರ ಮೂರ್‍ನಾಲ್ಕು ವರ್ಷಗಳಿಂದಲೇ ತಯಾರಿ ಮಾಡಿಕೊಳ್ಳುತ್ತಿದ್ದಾರೆ. ಅದರಲ್ಲೂ ಬಿಜೆಪಿ ಕಡೆ ಅವರ ಒಲವು ಹೆಚ್ಚಿದೆ. ಹಾಗಾಗಿಯೇ ಮೋದಿ ಹೆಸರಿನಲ್ಲೊಂದು ಸಿನಿಮಾ ಮಾಡಲು ಹೊರಟಿದ್ದರು ಉಪೇಂದ್ರ. ಏಳೆಂಟು ತಿಂಗಳ ಹಿಂದೆ ಈ ಸಿನಿಮಾದ ಪೋಸ್ಟರ್ ಕೂಡ ರಿಲೀಸ್ ಆಗಿತ್ತು, ಎಲ್ಲವೂ ಅಂದುಕೊಂಡಂತೆ ಆಗಿದ್ದರೆ ಸಿನಿಮಾ ಇಷ್ಟುಹೊತ್ತಿಗೆ ಸೆಟ್ಟೇರಬೇಕಿತ್ತು. ಆದರೆ, 'ಮೋದಿ' ಸಿನಿಮಾ ಡ್ರಾಪ್ ಆಗಿದೆ. ಕಾರಣ ಮೋದಿಯ ಜನಪ್ರಿಯತೆ ಕಡಿಮೆ ಆಗಿರುವುದು.

ಹೌದು, ನೋಟಿನ ರದ್ದತಿಯಿಂದಾಗಿ ಸ್ವತಃ ಮೋದಿ ಅಭಿಮಾನಿಗಳೇ ಕೋಪಗೊಂಡಿದ್ದಾರೆ. ಸಾಮಾಜಿಕ ಜಾಲತಾಣಗಳಲ್ಲೂ ಮೋದಿಯನ್ನು ಫಾಲೋ ಮಾಡುವವರ ಸಂಖ್ಯೆ ಕಡಿಮೆ ಆಗಿದೆ. ಆದ್ದರಿಂದ ಸಿನಿಮಾ ಕೂಡ ಓಡುವುದಿಲ್ಲ ಅನ್ನುವುದು ನಿರ್ಮಾಪಕರಿಗೆ ಖಾತ್ರಿ ಆದಂತಿದೆ. ಹಾಗಾಗಿ ಯಾವುದೇ ಕಾರಣಕ್ಕೂ ಮೋದಿ ಹೆಸರಿನಲ್ಲಿ ಸಿನಿಮಾ ಮಾಡುವುದಿಲ್ಲ ಎಂದು ಅವರು ಘೋಷಣೆ ಮಾಡಿದ್ದಾರೆ.

ಹಾಗಂತ ಉಪೇಂದ್ರ ಸುಮ್ಮನೆ ಕೂತಿಲ್ಲ, ನೋಟ್ ಬ್ಯಾನ್ ಕುರಿತಾಗಿ ಮತ್ತೊಂದು ಸಿನಿಮಾವನ್ನು ಕೈಗೆತ್ತಿಕೊಂಡಿದ್ದಾರೆ. ಈ ಚಿತ್ರಕ್ಕೆ 'ಉಪ್ಪಿ ರುಪ್ಪೀ' ಎಂದು ಹೆಸರಿಡಲಾಗಿದೆ. ಕೆ.ಮಾದೇಶ್ ಈ ಸಿನಿಮಾವನ್ನು ನಿರ್ದೇಶನ ಮಾಡಲಿದ್ದಾರೆ. ನೋಟು ಹಿಂಪಡೆತದ ನಿರ್ಧಾರ, ಭ್ರಷ್ಟಾಚಾರ ಮತ್ತು ಕಪ್ಪುಹಣದ ಬಗೆಗಿನ ಸಿನಿಮಾ ಇದಾಗಿದೆಯಂತೆ. ಇಲ್ಲಿ ಉಪೇಂದ್ರ ಸಾಮಾನ್ಯನ ಪಾತ್ರವನ್ನು ಮಾಡಲಿದ್ದಾರಂತೆ. ಇನ್ನೂ ಈ ಚಿತ್ರ ಸ್ಕ್ರಿಪ್ಟ್ ಹಂತದಲ್ಲಿದೆ. ಇದಾದರೂ ಸೆಟ್ಟೇರುತ್ತಾ ಕಾದು ನೋಡಬೇಕು.



PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427,
Fax : 26604536, E-mail :lankesh70@rediffmail.com